ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜೂನ್, ೨೦೨೧ ಸಂಪಾದಕ : ಡಿ. ಎಸ್. ನಾಗಭೂಷಣ ಸಂಪುಟ: ೧೦ ಸಂಚಿಕೆ : ೫

ಚಂದಾ ರೂ. ೨೦೦/- (೨೦೨೧ರ ಏಪ್ರಿಲ್‌ನಿಂದ ೨೦೨೨ರ ಮಾರ್ಚ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ದೇಶವೀಗ ಸಾವಿನ ಮನೆಯಾಗಿ ಮಾರ್ಪಟ್ಟಿದೆ. ಇಂತಹ ಮಾತನ್ನು ಒಂದು ನಿರ್ದಿಷ್ಟ ನಮೂನೆಯ ದೇಶಭಕ್ತರು ಇಷ್ಟಪಡುವುದಿಲ್ಲವಾದರೂ, ಕಳೆದ ಒಂದು ತಿಂಗಳಲ್ಲಿ ಒಡನಾಡಿ ಬೆಳೆದ ಇಬ್ಬರು ಸೋದರ ಸಂಬಂಧಿಗಳು ಮತ್ತೈದು ಜನ ಹತ್ತಿರದ ಬಂಧುಗಳ ಸಾವುಗಳ ಸುದ್ದಿಯಿಂದ ಮತ್ತು ಅವರಾರ ಅಂತಿಮ ಮುಖದರ್ಶನ ಸಾಧ್ಯವಾಗದ ನೋವಿನಿಂದ ತತ್ತರಿಸಿರುವ ನನ್ನನ್ನು ಈ ಮಾತನ್ನಾಡದಂತೆ ಯಾರೂ ತಡೆಯಲಾರರು. ಇದು ಕೇವಲ ನನ್ನ ವೈಯಕ್ತಿಕ ನೋವಿನ ಸಂಗತಿಯಲ್ಲ. ಈ ದೇಶದ ಲಕ್ಷಾಂತರ ಕುಟುಂಬಗಳು ಅನುಭವಿಸುತ್ತಿರುವ ದಾರುಣ ಸ್ಥಿತಿ ಇದು. ಉತ್ತರ ಭಾರತದ ನದಿಗಳಲ್ಲಿ ನಾವು ಬಹು ಪವಿತ್ರ ಎಂದು ಭಾವಿಸುವ ಗಂಗೆ-ಯಮುನೆಯರಲ್ಲಿ ನೂರಾರು ಹೆಣಗಳು ತೇಲಿ ಹೋದ, ಈ ನದಿಗಳ ತೀರಗಳ ಮರಳಲ್ಲಿ ಮತ್ತೆ ನೂರಾರು ಶವಗಳನ್ನು ಬಿಸಾಡಿ ಹೋದ ಚಿತ್ರಗಳನ್ನು ನೋಡಿದವರಾರೂ ಈಗ ಇಂತಹ ದೇಶಭಕ್ತಿಯ ಸೊಲ್ಲು ಎತ್ತಲಾರರು ಎಂದು ಭಾವಿಸುವೆ.

ಈಗ ಕೆಲವು ದಿನಗಳಿಂದ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿದೆಯಾದರೂ, ಇದು ಹೀಗೇ ಮುಂದುವರೆಯುತ್ತದೆಂದು ನಂಬಲು ಯಾವ ಕಾರಣವೂ ಇಲ್ಲ. ಏಕೆಂದರೆ ದೇಶವನ್ನು ನಿರಂತರ ಲಾಕ್‌ಡೌನ್‌ನಲ್ಲಿ ಇಡಲಾಗದು. ಹಾಗೇ ರೋಗ ಚಿಕಿತ್ಸೆಯ ವ್ಯವಸ್ಥೆ ಅಸ್ತವ್ಯಸ್ತವಾಗಿಯೇ ಮುಂದುವರೆದಿದ್ದು ಈ ವ್ಯವಸ್ಥೆಯಿಂದ ಗುಣಮುಖರಾದ ಹಲವರಿಗೆ ಕರೋನಾಗಿಂತ ಮಾರಕವಾದುದೆಂದು ಹೇಳಲಾಗುವ 'ಕರಿ ಬೂಷ್ಟು' ರೋಗ ತಗುಲಿ ಜನ ಮತ್ತಷ್ಟು ಗಾಬರಿಯಾಗಿದ್ದಾರೆ. ಹಾಸಿಗೆ, ಆಮ್ಲಜನಕ, ತಾತ್ಕಾಲಿಕ ಉಪಶಮನದ ಔಷಧಿಗಳ ಕೊರತೆ ಮತ್ತು ಕಳ್ಳ ವ್ಯವಹಾರಗಳಿಂದ ದಿಕ್ಕೆಟ್ಟಂತಾಗಿದ್ದ ಜನ, ಬಹು ನಿರೀಕ್ಷಿತ ರೋಗ ಪ್ರತಿರೋಧಕ ಲಸಿಕೆಗಳನ್ನು ಎದುರು ನೋಡುತ್ತಿರುವಾಗಲೇ, ಅದರ ಆಸೆಯೂ ಅರ್ಧ ದಾರಿಯಲ್ಲೇ ಕಂತಿ ಹೋಗುವಂತಾಗಿದೆ. ದೇಶಕ್ಕೆ ಬೇಕಾದಷ್ಟು ಇರಲಿ, ರೋಗಕ್ಕೆ ತುತ್ತಾಗುವ ಹೆಚ್ಚಿನ ಭೀತಿ ಎದುರಿಸುತ್ತಿರುವ ಹಿರಿಯ ನಾಗರಿಕರೆಲ್ಲರಿಗೂ ಅದನ್ನು ಒದಗಿಸಲಾಗದ ಸ್ಥಿತಿಯನ್ನು ದೇಶ ಎದುರಿಸುತ್ತಿದೆ. ಲಸಿಕೆ ತಯಾರಿಕೆ ಮತ್ತು ಪೂರೈಕೆಗಾಗಿ ಈಗ ಅವಸರದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆಯಾದರೂ, ಇವು ಫಲಪ್ರದವಾಗುವ ಹೊತ್ತಿಗೆ ಆಗಿರಬಹುದಾದ ಅನಾಹುತ ಬಹು ದೊಡ್ಡ ಪ್ರಮಾಣದ್ದೇ ಆಗಿರುತ್ತದೆ ಎಂದು ಊಹಿಸಲಾಗುತ್ತಿದೆ. ಬರಲಿದೆ ಎಂದು ಹೇಳಲಾಗುತ್ತಿರುವ, ಈ ಎರಡನೆಯ ಅಲೆಗಿಂತ ತೀಕ್ಷ್ಣವಾಗಿರಬಹುದೆಂದು ಹೇಳಲಾಗುತ್ತಿರುವ ಮೂರನೆಯ ಅಲೆ ಎರಗಿದಾಗ ಜನರ ಪಾಡೇನು?

ಪರಿಸ್ಥಿತಿ ಹೀಗಿರುವಾಗ ಜನರಿಗೆ ವಿಶ್ವಾಸ ತುಂಬಿ ಸಾಂತ್ವನ ಹೇಳಬೇಕಾದ ಸರ್ಕಾರ ದೇಶದಲ್ಲಿ 'ಋಣಾತ್ಮಕ' ಭಾವನೆಗಳನ್ನು ಹುಟ್ಟಿಸುವ ಪ್ರಯತ್ನಗಳು ನಡೆದಿವೆ ಎಂಬ, ಜನರ ಗಾಯಗಳ ಮೇಲೆ ಉಪ್ಪು ಸುರಿಯುವಂತಹ ಮಾತುಗಳನ್ನಾಡುತ್ತಿದೆ. ಈ ಭಾವನೆಗಳನ್ನು ತಡೆಯಲು ಮತ್ತು ರೋಗ ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಿಸಲಾಗದ ಕಾರಣದಿಂದಾಗಿ ಕುಂದುತ್ತಿರುವ ತನ್ನ ವರ್ಚಸ್ಸನ್ನು ಸುಧಾರಿಸಿಕೊಳ್ಳಲೆಂದು ಸರ್ಕಾರ ತನ್ನ ಅಧಿಕಾರಿಗಳ ಮತ್ತು ಪೋಷಕ ಸಂಸ್ಥೆಗಳ ಸಭೆಗಳನ್ನು ಆಯೋಜಿಸುತ್ತಿದೆ! ತನ್ನ ಬಿಂಬದೊಡನೆಯೇ ಪ್ರೇಮಕ್ಕೆ ಸಿಕ್ಕಿರುವ ಮನೋರೋಗಿಯ ಲಕ್ಷಣವಿದು.

ಅದೇನೇ ಇರಲಿ, ಇಂತಹ ಒಂದು ಸಭೆಯಲ್ಲಿ ಆರೆಸೆಸ್ಸಿನ ಸರಸಂಘಚಾಲಕ ಮೋಹನ ಭಾಗವತ ಅವರು ' ಇಂದಿನ ಸಂದರ್ಭದಲ್ಲಿ ಋಣಾತ್ಮಕ ಭಾವನೆ ಸಹಜ' ಎನ್ನುತ್ತಾ 'ಕರೋನಾ ಎದುರಿಸುವ ವಿಷಯದಲ್ಲಿ ರಾಜಕೀಯ ನಾಯಕತ್ವ, ಸರ್ಕಾರ, ವೈದ್ಯಕೀಯ ಸಮೂಹ, ಜನ ಹೀಗೆ ಎಲ್ಲರೂ ತುಸು ಎಚ್ಚರದಪ್ಪಿದರು' ಎಂದು ಸತ್ಯದ ಮೂರನೇ ಒಂದು ಭಾಗವನ್ನಷ್ಟೇ ಹೇಳಿದ್ದರೆ, ಇನ್ನೊಂದು ಮೂರನೇ ಒಂದು ಭಾಗವನ್ನು ಇದೇ ಆರೆಸೆಸ್ಸಿನ ಹಿರಿಯ ವಕ್ತಾರ ರಾಮ್ ಮಾಧವ್ ಹೀಗೆ ಹೇಳಿದ್ದಾರೆ: 'ಸರ್ಕಾರ ಇನ್ನೂ ತುಸು ಹೆಚ್ಚು ಎಚ್ಚರ ವಹಿಸಬೇಕಿತ್ತು; ಸರ್ಕಾರ ತನ್ನ ಅಧಿಕೃತ ವೈದ್ಯಕೀಯ ಸಲಹಾಕಾರ ಸಮೂಹದ ಹೊರಗಿನಿಂದ ಬರುವ ದನಿಗಳನ್ನೂ ತುಸು ಹೆಚ್ಚಿಗೆ ಆಲಿಸಬೇಕಿತ್ತು ಮತ್ತು ಭಿನ್ನಮತದ ಎಲ್ಲ ದನಿಗಳನ್ನೂ ತುಸು ಹೆಚ್ಚು ಸಹನೆಯಿಂದ ಕೇಳಬೇಕಿತ್ತು.' ಈ ಮೂರನೇ ಎರಡು ಭಾಗ ಸತ್ಯವನ್ನು ತಮ್ಮದೇ ಮೂರನೇ ಒಂದು ಭಾಗ ಸೇರಿಸಿ 'ದ ಪ್ರಿಂಟ್' ಸಮೂಹದ ರಾಜಕೀಯ ವಿಶ್ಲೇಷಕ ಡಿ..ಕೆ. ಸಿಂಗ್ ಹೀಗೆ ಪೂರ್ಣಗೊಳಿಸಿದ್ದಾರೆ: 'ರಾಮ್ ಮಾಧವ್ ಅವರ ಹೇಳಿಕೆಯಲ್ಲಿನ ಎಲ್ಲ 'ತುಸು ಹೆಚ್ಚಿಗೆ' ಎನ್ನುವುದನ್ನು 'ಇನ್ನೂ ಸಾಕಷ್ಟು ಹೆಚ್ಚಿಗೆ' ಎಂದು ತಿದ್ದಿಕೊಂಡರೆ ಸರಿ ಹೋದೀತು'.

ಇಂದಿನ ವಾಸ್ತವ ಸತ್ಯ ಹೀಗೇ ಚೂರುಚೂರಾಗಾದರೂ ಹಲವರಿಗೆ ಕಾಣುತ್ತಿದೆ. ಆದರೆ ನಮ್ಮ ಪ್ರಧಾನ ಮಂತ್ರಿಗಳಿಗೆ ಆ ಯಾವ ಚೂರೂ ಕಾಣುತ್ತಿದ್ದಂತಿಲ್ಲ. ಅದರ ಯಾವ ಸೂಚನೆಯೂ ಅವರ ನಡೆಯಲ್ಲಿ ತೋರುತ್ತಿಲ್ಲ. ತಮ್ಮ ಮತಕ್ಷೇತ್ರ ವಾರಣಾಸಿಯ ಕರೋನಾ ಯೋಧ ವೈದ್ಯಕೀಯ ಸಿಬ್ಬಂದಿಯನ್ನುದ್ದೇಶಿಸಿ ಅಂತರ್ಜಾಲಿತ ಸಭೆಯೊಂದರಲ್ಲಿ ಮಾತನಾಡುತ್ತಾ, ಆ ಸಿಬ್ಬಂದಿ ಕಳೆದುಕೊಂಡಿರಬಹುದಾದ ಬಂಧು ಬಾಂಧವರಿಗೆ ಶ್ರದ್ಧಾಂಜಲಿ ಅರ್ಪಿಸುವಾಗ ಗದ್ಗದಿತರಾದರು ನಿಜ. ಆದರೆ ಸಂವಹನ ಕಲೆಯಲ್ಲಿ ಪ್ರವೀಣರಾದ ನಮ್ಮ ಈ ಪ್ರಧಾನಿಗೆ ದುಃಖ-ದಿಗ್ಭ್ರಮೆಗಳಲ್ಲಿರುವ ಇಡೀ ದೇಶದ ಜನತೆಯೊಂದಿಗೆ ಸಂವಾದಿಸಲು, ಪ್ರತಿಸ್ಪಂದಿಸಲು ಈ ಭಾವುಕತೆಗಿಂತ ಹೆಚ್ಚಿನ ವ್ಯಾಪಕ ಮಾರ್ಗದ ಅಗತ್ಯ ಕಾಣಲಿಲ್ಲವೆ? ಎಂದು ಆಶ್ಚರ್ಯವಾಗುತ್ತದೆ. 'ತಪ್ಪಾಗಿದೆ. ಅದನ್ನು ಸರಿ ಮಾಡುತ್ತಿದ್ದೇವೆ, ಸಹಕರಿಸಿ' ಎಂಬ ಸರಳ ತಪ್ಪೊಪ್ಪಿಗೆ ಮತ್ತು ಆಶ್ವಾಸನೆಯ ಒಂದು ವಾಕ್ಯ ದೇಶಾದ್ಯಂತ ಎಂತಹ ಹೊಸ ಚೇತನ-ವಿಶ್ವಾಸಗಳನ್ನು ಹುಟ್ಟಿಸಬಲ್ಲುದಾಗಿತ್ತು!

ಆದರೆ ಯಾವುದೇ ತೆರನ ತಪ್ಪೊಪ್ಪಿಗೆ, ವ್ಯಕ್ತಿತ್ವದ ದೌರ್ಬಲ್ಯ ಪ್ರದರ್ಶನವೆಂದು ಭಾವಿಸಿದಂತೆ ತೋರುವ ಮೋದಿ ಮತ್ತು ಅವರ ಭಕ್ತ ಸಮೂಹದ ಪ್ರಕಾರ ಇಂತಹ ಮಾತು ದೇಶದ ಆಡಳಿತ ಮತ್ತು ಮತದಾರರ (ಜನರ ಅಲ್ಲ) ಮೇಲೆ ಹಿಡಿತ ಸಡಿಲಾಗಿ ಅವರ ವರ್ಚಸ್ಸು ಕುಂದುತ್ತದೆ. ಆದರೆ ಈ ವರ್ಚಸ್ಸು ಈಗಾಗಲೇ ಕುಂದತೊಡಗಿದೆ ಎಂದು ಅವರಿಗೆ ಮತ್ತು ಅವರ ಭಕ್ತ ಸಮೂಹಕ್ಕೆ ಗೊತ್ತಾಗಬೇಕಿತ್ತು. ಇತ್ತೀಚಿನ ಐದು ರಾಜ್ಯ-ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭಾ ಚುನಾವಣೆಗಳು, ನಿರ್ದಿಷ್ಟವಾಗಿ ಪ. ಬಂಗಾಳದ ಫಲಿತಾಂಶಗಳು ಹಾಗೂ ನಂತರದ ಉ.ಪ್ರ, ಜಿಲ್ಲಾಡಳಿತ ಚುನಾವಣಾ ಫಲಿತಾಂಶಗಳು ಮೋದಿಯವರ ವರ್ಚಸ್ಸು ನಿರ್ಣಾಯಕವಾಗಿ ಕುಗ್ಗಿರುವ ಸ್ಪಷ್ಟ ಸೂಚನೆಗಳನ್ನು ನೀಡುತ್ತಿವೆ. ಆದರೂ, ಚುನಾವಣಾ ರಾಜಕಾರಣದ ಸಕಲ ವಿದ್ಯಾ ಪಾರಂಗತರಾದ ಅವರ ಪಕ್ಷದವರು ಇದನ್ನೆಲ್ಲ ಮುಂದೆ 'ಸರಿ ಪಡಿಸಿ'ಕೊಳ್ಳಲಾಗುವ ವಿಶ್ವಾಸದಲ್ಲಿದ್ದಂತಿದೆ. ಹಾಗಾಗಿಯೇ ಈಗ ಮೋದಿ ದೂಷಣೆ ತಪ್ಪಿಸಿಕೊಳ್ಳಲೆಂದೇ ರೋಗ ನಿಯಂತ್ರಣದ ಹೊಣೆಯನ್ನು ರಾಜ್ಯಗಳಿಗೆ ಹೆಸರಿಗಷ್ಟೇ ವಹಿಸಿದಂತೆ ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮುಖದಲ್ಲೇ ಆಯಾ ರಾಜ್ಯಗಳ ಜಿಲ್ಲಾಧಿಕಾರಿಗಳೊಂದಿಗೆ ರೋಗ ಪರಿಸ್ಥಿತಿಯ ಬಗ್ಗೆ ಸಮಾಲೋಚಿಸುವ ಸಾಮ್ರಾಟ ಶೈಲಿ ಆಡಳಿತವನ್ನು ಮುಂದುವರೆಸಿದ್ದಾರೆ.

ಆದರೆ ಸಾಂಕ್ರಾಮಿಕದಿಂದ ಜನ ಜೀವಭಯದಿಂದ ತತ್ತರಿಸುತ್ತಿದ್ದಾಗಲೂ ಇಡೀ ದೇಶದ ವಿವೇಕ ಚುನಾವಣೆಗಳನ್ನು ಮುಂದೂಡಿ ಎಂದು ಕೂಗುತ್ತಿದ್ದಾಗಲೂ ಭಾರಿ ಚುನಾವಣಾ ಸಭೆಗಳನ್ನು ಸಂಘಟಿಸುತ್ತಾ, 'ದೀದೀ ಓ ದೀದ್ದೀ!' ಎಂದು ಬಾಲಿಶ ಕೂಗುಗಳ ಭಾಷಣಗಳಲ್ಲಿ ತೊಡಗಿದ್ದ ಮತ್ತು ಲಕ್ಷಾಂತರ ಜನ ಸೇರುವ ಕುಂಭಮೇಳವನ್ನು ಸಾಂಕೇತಿಕ ಔಪಚಾರಿಕತೆಗೆ ಸೀಮಿತಗೊಳಿಸಲು ನಿರಾಕರಿಸಿದ ಮೋದಿ ಮತ್ತು ಅವರ ಪಕ್ಷಕ್ಕೆ ದೇಶ-ಧರ್ಮಗಳೆಂದರೆ ಅಲ್ಲಿ ಜನಕ್ಕೆ ಜಾಗವಿಲ್ಲ; ಅವು ಕೇವಲ ಕೆಲವರ ಗರ್ವದ ಸಂಕೇತಗಳು ಎಂಬುದು ಜನಕ್ಕೆ ನಿಧಾನವಾಗಿಯಾದರೂ ಅರ್ಥವಾಗತೊಡಗಿದಂತಿದೆ. ಈ ಕುಂಭಮೇಳದ ಸಂಬಂಧವಾಗಿ ಇವರ ಪಕ್ಷದ ನಾಯಕನೊಬ್ಬ ಟಿವಿ ವಾಹಿನಿಯಲ್ಲಿ ಬಂದು, 'ಗಂಗಾಮಾಯಿ ಎಲ್ಲವನ್ನೂ ಶುದ್ಧಗೊಳಿಸಬಲ್ಲಳು' ಎಂಬ ಸಮರ್ಥನೆ ನೀಡಿದಾಗ ಈ ಅವಿವೇಕಿಗೆ ಛೀಮಾರಿ ಹಾಕುವ ಧೈರ್ಯ ಈ ಪಕ್ಷದಲ್ಲಿ ಯಾರಿಗೂ ಇರಲಿಲ್ಲ ಎಂದರೆ ಏನು ಹೇಳುವುದು?

ನಮ್ಮ 'ಶತ್ರು ರಾಷ್ಟ್ರ'ಗಳಿಂದಲೂ ಸಹಾನುಭೂತಿಯ ನೆರವು-ಪರಿಹಾರಗಳು ಧಾವಿಸಿ ಬರುವಷ್ಟು ಜಗತ್ತನ್ನೇ ಭೀತಿಗೊಳಿಸಿರುವಂತಹ ದಾರುಣ ಸ್ಥಿತಿಗೆ ನಮ್ಮ ದೇಶ ತಲುಪಲು ಏನು ಕಾರಣ? ಜಗತ್ತಿನ ಪ್ರಸಿದ್ಧ ವಾರ್ತಾಪತ್ರಿಕೆಗಳು, ಅವುಗಳ ಪರಿಣತ ಅಂಕಣಕಾರರು ಬರೆಯುತ್ತಿರುವುದನ್ನು ಓದಬೇಕು. (ಇಂತಹ ಒಂದು ಬರಹಕ್ಕಾಗಿ ಈ ಸಂಚಿಕೆಯ ೧೨ನೇ ಪುಟ ನೋಡಿ). ಆದರೆ ಇವನ್ನೂ ವಿರೋಧ ಪಕ್ಷಗಳ ಪಿತೂರಿ ಎಂದೆನ್ನುವ ಸರ್ಕಾರ ಮತ್ತು ಪಕ್ಷಕ್ಕೆ ವಿವೇಕವೆನ್ನುವುದು ಎಂದಾದರೂ ಮೂಡೀತೇ? ಕಾದು ನೋಡಬೇಕಿದೆ.

–ಸಂಪಾದಕ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಮೇ ಸಂಚಿಕೆಯ ಸಂಪಾದಕೀಯ ವಿಭಿನ್ನವಾಗಿದೆ. ಕೋವಿಡ್ ಎದುರಿಸಲು ಮೂಗಿಗೆ ನಿಂಬೆರಸ ಹಿಂಡಿ ಎಂದಂತಿದೆ!

–ಸಿ.ಎಂ. ಅಂಗಡಿ, ನವದೆಹಲಿ

ಪತ್ರಿಕೆ ಬಂದೊಡನೆ ಎಂದಿನಂತೆ ಮೊದಲು ಸಂಪಾದಕೀಯ ಓದಿದೆ. ನಾವು ಹಿಡಿದಿರುವ ಅಭಿವೃದ್ಧಿಯ ಹಾದಿ ಭಸ್ಮಾಸುರನ ಕತೆಯನ್ನು ನೆನಪಿಸುತ್ತದೆ. ಹರಿಲಾಲನನ್ನು ಕುರಿತ ಪುಸ್ತಕ ವಿಮರ್ಶೆ ಸಂಬಂಧವಾಗಿ ನೀವು ನೀಡಿದ ಸ್ಪಷ್ಟೀಕರಣಗಳು ಇಂದು ಗಾಂಧಿಯ ಬಗ್ಗೆ ಉದ್ದೇಶಪೂರ್ವಕವಾಗಿ ನಡೆದಿರುವ ಅಪಪ್ರಚಾರದ ಜಾಲವನ್ನು ಬಯಲಿಗೆಳೆಯುವಂತದು. ನಾಗೇಶ್ ಹೆಗಡೆಯವರು ನದಿ ಜೋಡಣೆಯ ಬಗ್ಗೆ ಬರೆದ ಲೇಖನ ನಮ್ಮ ಒಟ್ಟು ಅಭಿವೃದ್ಧಿ ಯೋಜನೆಗಳ ಕಪಟತನವನ್ನು ಹೇಳುತ್ತದೆ. ಅಂದಹಾಗೆ ಸವಿತಾ ಅವರ 'ಹೇಳು' ಮತ್ತು ಹರಿಯಪ್ಪ ಪೇಜಾವರರ 'ಪರಿಪೂರ್ಣ ಕವಿತೆ' ಗಮನಾರ್ಹ ರಚನೆಗಳು. 'ಹೇಳು' ಕವಿತೆಯ ದೊರೆಯ ಬಗ್ಗೆ ಕೂಡ ಕವಯತ್ರಿ ಅಂತಃಕರಣ ತೋರಿಸುವುದು ಸಾಹಿತ್ಯ ರಚನಾಕಾರರಿಗಿರಬೇಕಾದ ಹೃದಯ ವೈಶಾಲ್ಯತೆಯನ್ನು ಸೂಚಿಸುತ್ತದೆ. ಹರಿಯಪ್ಪನವರ ಪದ್ಯ ಅನುಭವಕ್ಕಾಗಿ ಕಾಯವಿಕೆಯನ್ನು ವ್ಯಂಗ್ಯವಾಗಿ ನೋಡುತ್ತದೆಂಬ ಅನುಮಾನ ನನ್ನದು. ಪ್ರಮೀಳಾ ಸ್ವಾಮಿಯವರ 'ಊರೆಂಬ ಉದರ'ದ ಬಗ್ಗೆ ಶ್ರೀದೇವಿ. ಕೆ ಅವರು ಬರೆದಿರುವ ಅವಲೋಕನ ಪುಸ್ತಕದ ಬಗ್ಗೆ ಕುತೂಹಲ ಹುಟ್ಟಿಸುವಂತಿದೆ. ಪತ್ರಿಕೆಯ ಓದು ಸಂತೋಷ ಕೊಡುತ್ತದೆ ಹಾಗೂ ಜೊತೆಗೆ ಒಂದು ರೀತಿಯ ಜವಾಬ್ದಾರಿಯನ್ನು ಕೂಡ.

–ವಿಜಯೇಂದ್ರ ಪಾಟೀಲ, ಧಾರವಾಡ

ಮೇ ಸಂಚಿಕೆಯ ನಿಮ್ಮ ಸಂಪಾದಕೀಯ ನಮ್ಮ ಬದುಕನ್ನು ಹೊಸ ನೆಲೆಗಳಿಂದ ಅವಲೋಕಿಸಲು ಪ್ರೇರೇಪಿಸುವಂತಿದೆ. ಭೌತ–ಅಭೌತಗಳ ನಡುವಣ ಸಂಬಂಧ ಗಾಂಧೀಜಿಯವರಂತೆ ಹೃದಯಪೂರ್ವಕವಾಗಿ ಆಲೋಚಿಸುವವರಿಗೆ ಹೊಳೆಯಬಲ್ಲುದು ಎಂಬ ಮಾತು ಮನನೀಯವಾಗಿದೆ. ಧನ್ಯವಾದಗಳು.

–ಎಂ.ಬಿ. ಪಾಟೀಲ, ಕಲಬುರಗಿ

ಮೇ ಸಂಚಿಕೆ ಒಂದು ಅತ್ಯುತ್ತಮ ಸಂಚಿಕೆಯಾಗಿದೆ. ವಿಶೇಷವಾಗಿ ನಿಮ್ಮ ಸಂಪಾದಕೀಯ ಪ್ರಕೃತಿಯನ್ನು ಗೆದ್ದವೆಂದು ಬೀಗುತ್ತಿರುವ ಜನ, ನಿರ್ದಿಷ್ಟವಾಗಿ ತನ್ನ ಬೆನ್ನು ತಾನೇ ತಟ್ಟಿಕೊಳ್ಳುವ ನಮ್ಮ ಗಡ್ಡಧಾರಿಯೂ ಸೇರಿದಂತೆ ಎಲ್ಲರೂ ಓದಬೇಕಿದೆ.

–ಜಿ.ಕೆ. ಗೋವಿಂದರಾವ್, ಬೆಂಗಳೂರು

ಮೇ ಸಂಚಿಕೆಯ ನಿಮ್ಮ ಸಂಪಾದಕೀಯ ಈ ಹಿಂದಿನದಕ್ಕಿಂತ ಭಿನ್ನವೂ ಆಳವಾಗಿಯೂ ಇತ್ತು. ಬಿಹಾರದ ಭೂಕಂಪಕ್ಕೂ ಅಸ್ಪೃಶ್ಯತೆಗೂ ಗಾಂಧಿ ಕಲ್ಪಿಸಿದ ಸಂಬಂಧದ ನೆಲೆಗಳು ಆಲೋಚನಾರ್ಹವಾದವು. ಡೇವಿಡ್ ಕಮ್ಮೆನ್ ಹೇಳುವ ಮೊದಲೇ 'ಕಂಟೇಜಿಯನ್' ಎಂಬ ಸಿನೆಮಾ ಬಂದಿತ್ತು. ಅದರಲ್ಲಿ ಬಾವಲಿಯಿಂದ ವೈರಾಣು ಇಡೀ ಜಗತ್ತಿಗೆ ಹರಡುವುದರ ಬಗ್ಗೆ ಇದೇ ವೂಹಾನ್ ನಗರದ ಉದಾಹರಣೆ ಕೂಡ ಇತ್ತು. ಕಳೆದ ಏಪ್ರಿಲ್‌ನಲ್ಲೇ ನನ್ನ ಫೇಸ್‌ಬುಕ್‌ನಲ್ಲಿ ಬರೆದಿದ್ದೆ.

–ನಾಗೇಶ ಹೆಗಡೆ, ಬೆಂಗಳೂರು

(ಈ ಫೇಸ್‌ಬುಕ್ ಬರಹಕ್ಕಾಗಿ ಈ ಸಂಚಿಕೆಯ ೪ನೇ ಪುಟ ನೋಡಿ–ಸಂ.)

ಮೇ ಸಂಚಿಕೆಯಲ್ಲಿ ಬಂದಿರುವ 'ರೈತ ಚಳುವಳಿ ಮುಂದೇನು' ತುಂಬಾ ಚಿಂತನಾರ್ಹ. ಪ್ರತಿಕ್ರಿಯಿಸಿರುವ ಸರ್ವ ಚಿಂತಕರೂ ತುಂಬಾ ಮಹತ್ವದ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ನಮ್ಮ ದೇಶದ ಪ್ರಜಾತಾಂತ್ರಿಕ ಭವಿಷ್ಯ ಇದರಲ್ಲಿ ಅಡಗಿದೆ. ಆಳುವವರು ಬೇಗ ಎಚ್ಚರವಾಗದಿದ್ದರೆ ಕೃಷಿ ಪ್ರಧಾನ ಭಾರತಕ್ಕೆ ಆಪತ್ತು ಕಾದಿದೆ. ನಿಮ್ಮ ಸಂಪಾದಕರ ಟಿಪ್ಪಣಿಯಲ್ಲಿ ೧೯೩೪ರ ಬಿಹಾರದ ಭೂಕಂಪ ಅಸ್ಪೃಶ್ಯತೆಯ ಫಲ ಎಂಬ ಮಹಾತ್ಮರ ಮಾತಂತೂ ಇಂದು ಅಭಿವೃದ್ಧಿ ಕುರಿತು ಮಂತ್ರ ಪಠಣ ಮಾಡುತ್ತಿರುವರ ಬೂಟಾಟಿಕೆಯ ಬಗ್ಗೆ ನಮ್ಮನ್ನು ಎಚ್ಚರಗೊಳಿಸುವಂತಿದೆ

–ಎಂ.ಜಿ. ಈಶ್ವರಪ್ಪ, ದಾವಣಗೆರೆ

ಈ ಬಾರಿಯ ಸಂಪಾದಕೀಯದಲ್ಲಿ ಗಾಂಧಿ ವಿಚಾರ ಹೇಳುತ್ತಲೇ ಭೌತ–ಅಭೌತದ ಕುರಿತು ಹೇಳಿದ್ದೀರಿ. ಇದನ್ನು ಆಲೋಚಿಸುವಾಗ ನನಗನಿಸಿದ್ದು, ಮನುಷ್ಯನ ದೇಹವನ್ನು ಸ್ಥೂಲವಾಗಿ ನಾವು ಭೌತಿಕವಾಗಿ ನೋಡುವುದಾದರೆ ಅಂತರಂಗ ಎಂಬ ವಿದ್ಯಮಾನವನ್ನು ಅಭೌತಿಕವಾಗಿ ಅರಿಯಬೇಕಾಗಿದೆ. ಆದರೆ ನಾವು ಅಂತರಂಗದ ಸೂಕ್ಷ್ಮನೆಲೆಯ ಬಗ್ಗೆ ಅರಿಯದವರಾಗಿ ದಾರಿ ತಪ್ಪುತ್ತಿದ್ದೇವೇನೋ ಅಂತ ಅನಿಸುತ್ತಿದೆ. ಬುದ್ಧ ದೇಹವನ್ನು ಗ್ರಹಿಸುವ ಕ್ರಮ ನನಗೆ ಯಾವಾಗಲೂ ಕುತೂಹಲಕ್ಕೆ ಎಡೆ ಮಾಡಿದೆ. ಆತ ಹೇಳುವ ಭಾವನೆಗಳ ಹರಿಯುವಿಕೆ, ಗ್ರಹಿಕೆಗಳ ಹರಿಯುವಿಕೆ, ಮಾನಸಿಕ ಸ್ಥಿತಿಯ ಹರಿಯುವಿಕೆ, ಅಂಗಾಂಗಗಳ ಹರಿಯುವಿಕೆ ಮತ್ತು ಪ್ರಜ್ಞೆಯ ಹರಿಯುವಿಕೆಯಲ್ಲಿ ಈ ದೇಹ ರೂಪುಗೊಂಡಿದೆ ಎಂದು. ಅಂಗಾಂಗಗಳ ಹರಿಯುವಿಕೆಯನ್ನು ಹೊರತು ಪಡಿಸಿ ಮಿಕ್ಕೆಲ್ಲವು ಸೂಕ್ಷ್ಮಲೋಕದ ವಿಚಾರವೆ. ಬಹುಶಃ ವೈರಾಣು ಇಂಥ ಸೂಕ್ಷ್ಮ ವಿಚಾರಕ್ಕೆ ನಮ್ಮನ್ನು ದೂಡುತ್ತಿದೆ. ಹಾಗಾಗಿ ನಮ್ಮ ಪ್ರಜ್ಞೆಯ ಭಾಗವೆ ಆಗಿಲ್ಲದ ಉಸಿರನ್ನು ಈಗ ನಾವು ಗಮನಿಸಲು ಶುರು ಮಾಡಿದ್ದೇವೆ!! ಹಾಗಾಗಿ ಭೌತ ಅಭೌತಗಳ ಸಮತೋಲಿತ ವಿಶ್ವದ ಸೂಕ್ಷ್ಮತೆಯ ಸಂವೇದನೆ ನಾವು ಕಳೆದುಕೊಳ್ಳಲು ಕಾರಣವೇನು ಎನ್ನುವುದಕ್ಕೆ ನೀವು ಹೇಳುವ ಮಿತಿಯಿಲ್ಲದ ಬದುಕು ಎನ್ನುವುದರ ಕುರಿತು ಆಲೋಚಿಸುವ ಸಮಯ ಇದಾಗಿದೆ. ಇಲ್ಲದಿದ್ದರೆ ಪರಾಗಸ್ಪರ್ಶಕ್ಕೆ ಕಾರಣವಾದ ಜೇನುಹುಳಗಳ ಸಂತತಿಯ ನಾಶದಂತೆ ಮನುಷ್ಯಕುಲದ ಸಂತತಿಯೂ ನಾಶವಾಗುತ್ತೆ ಎಂಬ ಅರಿವು ಮನುಷ್ಯನಿಗೆ ಬರುವಷ್ಟರಲ್ಲಿ ಕಾಲ ಮೀರಿಹೋಗಿರುತ್ತೆ..

–ಅಪೂರ್ವ ಡಿ'ಸಿಲ್ವ, ಮೈಸೂರು

ಕಳೆದ ಸಂಚಿಕೆಯ ನಿಮ್ಮ ಸಂಪಾದಕೀಯ ಅತ್ಯದ್ಭುತವಾಗಿದ್ದು ನಮಗೆ ಹೊಸ ಸತ್ವವನ್ನು ಕಾಣಿಸುವಂತಿದೆ, ಅನಿಲ್ ಹೆಗಡೆಯವರ ಜಾರ್ಜ್ ಫರ್ನಾಂಡಿಸರನ್ನು ಕುರಿತ ಲೇಖನವು ಬಹು ವಿಷಯಗಳನ್ನು ತಿಳಿಸಿತು. ಸಮಾಜವಾದ ಭಾರತವನ್ನು ಹೇಗೆ ಕಟ್ಟಿತು ಎಂದು ತಿಳಿಯಲು ಜಾರ್ಜ್‌ರವರ ಜೀವನವು ಒಂದು ಅತ್ಯುತ್ತಮ ಉದಾಹರಣೆಯಾಗಿದೆ. ೧೯೭೭ರ ಚುನಾವಣೆಯ ಸಮಯದಲ್ಲಿ ಅವರು ನಮ್ಮ ಊರಿನಲ್ಲಿ ಹೀರೊ ಆಗಿದ್ದರು. ಆಗ ಕೇವಲ ೮ ವರುಷದ ನಾನು ನನ್ನ ಅಪ್ಪನ ಜೊತೆ ಆಳೆತ್ತರದ ಇಂದಿರಾ ಗಾಂಧಿಯವರ ಕಟೌಟ್ ಬೀಳಿಸಲು ನಾನೂ ಹೋಗಿದ್ದೆ.

ಇನ್ನು 'ರೈತ ಚಳುವಳಿ ಮುಂದೇನು?' ಅಂತ 'ಹೊಸ ಮನುಷ್ಯ' ಕೊಟ್ಟ ಪ್ರಶ್ನಾವಳಿಯ ಉತ್ತರಗಳು ಚಳುವಳಿಯ ಅನೇಕ ಮಗ್ಗಲುಗಳನ್ನು ತೆರೆದಿಟ್ಟಿವೆ. ಪತ್ರಿಕೆಯ ಕಾರ್ಯ ಅತ್ಯಂತ ಜರೂರಿನಲ್ಲಿ ಮೂಡಿ ಬಂದಿದೆ. ಉತ್ತರಿಸಿದ ಮಹನೀಯರಲ್ಲಿ ಎಲ್ಲ ತರಹದ ಬೆಳೆಗಳನ್ನು ಬೆಳೆಯುವ ರೈತರು ಇದ್ದಾರೆ. ಕನ್ನಡ ನಾಡಿನ ರೈತಾಪಿ ಬಳಗವು ಮೀಸಲಾತಿ, ಜಾತಿ, ಧರ್ಮ, ಭಾಷೆ, ನೀರಾವರಿ, ಮಲೆನಾಡು, ಬಯಲುಸೀಮೆ, ಪಕ್ಷ ಹೀಗೆ ಅನೇಕ ಬಗೆಯಲ್ಲಿ ಹರಿದು ಹಂಚಿಹೋಗಿದೆ. ಬಳಗವನ್ನು ಕೂಡಿಸುವುದು ರೈತ ನಾಯಕರ ಮೂಲ ಗುರಿಯಾಗಬೇಕು. ಈ ಗುರಿ ಸಾಧಿಸಬೇಕಾದರೆ ನಾಯಕರು ಮೊದಲು ಪ್ರಬುದ್ಧರಾಗಬೇಕಿದೆ.

–ಮಹಾಂತೇಶ ಓಶಿಮಠ, ಕೈಗಾ(ಉ.ಕ.)

ಮೇ ಸಂಚಿಕೆಯ ರೈತ ಚಳುವಳಿ ಕುರಿತ ಚರ್ಚೆ ಸಕಾಲಿಕ. ಮೂರು ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟ ದೇಶದ ಪ್ರಜಾತಂತ್ರದ ದೃಷ್ಟಿಯಿಂದ ಆಶಾದಾಯಕ ಬೆಳವಣಿಗೆ. ಚಳುವಳಿಯಿಂದಾಗಿ ರೈತರ ಬವಣೆಯ ಬಗೆಗೆ ಸದ್ಯ ಎಲ್ಲರೂ ಯೋಚಿಸುವಂತಾಯ್ತಲ್ಲ ಅದು ಮುಖ್ಯ. ಆದರೆ ದೆಹಲಿಯ ಚಳುವಳಿ ಹೀಗೆ ನಿರಂತರವಾಗುವ ಬದಲು ನಿರ್ದಿಷ್ಟ ಅವಧಿಯವರೆಗೆ ನಡೆಸಿ ಬಿಡುವು ಕೊಟ್ಟು ಮತ್ತೆ ಆರಂಭಿಸುವಂತಿದ್ದರೆ ಹೆಚ್ಚು ಒತ್ತಡ ಹೇರಲು ಸಾಧ್ಯವಿತ್ತು. ಅಲ್ಲದೆ ಕಾಯ್ದೆಗಳು ಒಮ್ಮೆ ಜಾರಿಯಾದರೆ ಮತ್ತೆ ತೆಗೆದು ಹಾಕಲು ಸಾಧ್ಯವಿಲ್ಲವೆ? ಅವುಗಳ ಪರಿಣಾಮವನ್ನೂ ಒಮ್ಮೆ ನೋಡಬಹುದಿತ್ತಲ್ಲವೆ? ನಾಗೇಶ ಹೆಗಡೆಯವರ ನದಿ ಜೋಡಣೆಯ ಕಥೆ ಮತ್ತು ಬಾಮಾ ಅವರ ಆತ್ಮಕಥಾನಕದ ಆಯ್ದಭಾಗ ವಿಶೇಷವೆನಿಸಿದವು. ವಾಸುದೇವಮೂರ್ತಿಯವರ ಪತ್ರಕ್ಕೆ ನಿಮ್ಮ ಉತ್ತರ, ಪತ್ರಿಕೆಯ ಜೀವಂತಿಕೆಗೆ ಸಾಕ್ಷಿ.

–ಎನ್.ಎಮ್. ಕುಲಕರ್ಣಿ, ಹೆಗ್ಗೋಡು

ಕಳೆದ ಒಂದು ವರ್ಷದಿಂದ 'ಹೊಸ ಮನುಷ್ಯ'ದ ಚಂದಾದಾರಳಾಗಿರುವ ನಾನು ಕನ್ನಡ ಸಾಹಿತ್ಯದ ವಿದ್ಯಾರ್ಥಿನಿ ಮತ್ತು ಸಂಶೋಧಕಿಯಾಗಿದ್ದು, ಪ್ರತಿ ಸಂಚಿಕೆಯ ನವಿಲುಗರಿ, ಪುಸ್ತಕಾವಲೋಕನ ಮತ್ತು ಯುವ ಲಹರಿಗಳನ್ನು ನಿರ್ದಿಷ್ಟವಾಗಿ ಗಮನಿಸಿದರೂ ಪತ್ರಿಕೆಯ ಪ್ರತಿ ಲೇಖನವೂ ನನ್ನನ್ನು ಬಹುಕಾಲ ಕಾಡುವಷ್ಟು ಪರಿಣಾಮಕಾರಿಯಾಗಿರುತ್ತವೆ.

–ಶಬಾನಾ, ಮೈಸೂರು

ಮೇ ಸಂಚಿಕೆಯಲ್ಲಿ 'ಸಂಗತಿ' ಎಂಬ ಶೀರ್ಷಿಕೆಯಡಿ ಪ್ರಕಟವಾಗಿರುವ ತಮಿಳು ಲೇಖಕಿ ಬಾಮಾ ಅವರ ಕಾದಂಬರಿಯ ಆಯ್ದ ಭಾಗಗಳ ಕನ್ನಡಾನುವಾದ ಅದೇ ಹೆಸರಿನ ಅವರ ಕಾದಂಬರಿಯದ್ದಾಗಿದೆ. 'ಕರುಕ್ಕು' ಇದೇ ಲೇಖಕಿಯ ಬೇರೊಂದು ಕಾದಂಬರಿಯಾಗಿದೆ.

–ಆರ್. ಪಂಡಿತಾರಾಧ್ಯ, ಮೈಸೂರು

ಕರ್ನಾಟಕ ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ ಆರೋಗ್ಯ ಸಂಸ್ಕೃತಿ ಭಾಷಣ ಮಾಲಿಕೆ ಕೇಳಿದ ಮೇಲೆ ಈ ಅಕಾಡೆಮಿ ಇಷ್ಟರಲ್ಲೇ ಬೇಸಾಯದ ಪಾಠಗಳನ್ನೂ ಏರ್ಪಡಿಸಿದರೆ ಆಶ್ಚರ್ಯವಿಲ್ಲ! ನೀವು ಹೇಳಿದ ಹಾಗೇ ಸದ್ಯದ ಪರಿಸ್ಥಿತಿಯಲ್ಲಿ ಯಾರು ಏನು ಮಾಡಿದರೂ ಯಾರೂ ಹೇಳುವವರೂ ಕೇಳುವವರೂ ಇಲ್ಲದಂತಾಗಿದೆ. ಈ ಅಕಾಡೆಮಿ ಈಗಿದ್ದ ಹತ್ತಾರು ಬಹುಮಾನ–ಪ್ರಶಸ್ತಿಗಳ ಜೊತೆಗೆ ಕಳೆದ ಎರಡು ಮೂರು ವರ್ಷಗಳಿಂದ ಸಾಹಿತ್ಯಶ್ರೀ ಎಂಬ ಹೊಸ ಪ್ರಶಸ್ತಿಗಳನ್ನೂ ನೀಡಲಾರಂಭಿಸಿದ್ದು ಈಗ ಈ ಪ್ರಶಸ್ತಿಗಳು ಸಿಕ್ಕವರಿಗೆ ಸೀರುಂಡೆಯಂತಾಗಿದೆ. ಇಷ್ಟರ ಮೇಲೂ ಕನ್ನಡ–ಸಂಸ್ಕೃತಿ ಇಲಾಖೆಗೆ ಅನುದಾನ ಕಡಿತವಾಗಿದೆ ಎಂಬ ಹಾಹಾಕಾರ ಬೇರೆ!

–ಆರ್. ಸುಂದರಮೂರ್ತಿ, ಬೆಂಗಳೂರು

ಪ್ರಚಲಿತ–೧

'ನಿಧಾನಿಸಿ' ಅದಕ್ಕಿದು, ಇದು ಸಕಾಲ...

–ಪೆಗ್ಗಿ ಮೋಹನ್



ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ಕರೋನಾ ಮತ್ತು ಅಭಿವೃದ್ಧಿ ಮಾದರಿಯ ಸಂಬಂಧ ಕುರಿತಂತೆ ಉಲ್ಲೇಖಿತವಾಗಿದ್ದ, ನಮ್ಮ ಪತ್ರಿಕೆಯ ೨೦೨೦ರ ಮೇ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಈ ಲೇಖನವನ್ನು ಹಲವು ಓದುಗರ, ವಿಶೇಷವಾಗಿ ನಮ್ಮ ಹೊಸ ಓದುಗರ ಕೋರಿಕೆಯ ಮೇರೆಗೆ ಇಲ್ಲಿ ಮರು ಮುದ್ರಿಸುತ್ತಿದ್ದೇವೆ. ಇದರ (ಮರು) ಓದು ಮುಂದಿನ ಪುಟಗಳಲ್ಲಿನ 'ಇನ್ನು ಸಾಕು ಈ ಅಭಿವೃದ್ಧಿ' ಶೀರ್ಷಿಕೆಯಡಿಯ ಲೇಖನಗಳ ಬಗ್ಗೆ ವಿಸ್ತಾರವಾಗಿ ಚಿಂತಿಸಲು ನೆರವಾಗಬಹುದು.-ಸಂ,

ಒಂದು ಹಿತವಾದ ವಸಂತಕಾಲದ ದಿನ. ಅಕಾಲಿಕ ಮಳೆ, ಕಾಲ ನಿಶ್ಚಲವಾಗಿ ನಿಂತಿದೆ. ಚಳಿಗಾಲದಲ್ಲಿ ಸ್ಥಗಿತಗೊಂಡಿದ್ದ ತಲೆ ಮೇಲಿನ ಪಂಖಗಳು ನಿಧಾನವಾಗಿ ರೆಕ್ಕೆ ಬಿಚ್ಚಿಕೊಳ್ಳುತ್ತಿವೆ. ನಾವಾದರೋ ಗೃಹಬಂಧನದಲ್ಲಿದ್ದೇವೆ. ಕಿವಿಗಳನ್ನು ನಿಮಿರಿಸಿ ಅದರ ತಾರ್ಕಿಕ ಅಂತ್ಯವೊಂದರ ಸದ್ದಿಗಾಗಿ–ಅದು ಅಂತ್ಯಗೊಳ್ಳುವುದೇ ಆದರೆ–ಕಾಯುತ್ತಾ ಇದ್ದೇವೆ. ಈ ಕಾಲದ ಆಚೆಗಿನ ಲೋಕದಲ್ಲಿ, ನಾವೆಲ್ಲರೂ, 'ನಮ್ಮ ಹಿತಕ್ಕಾಗಿ' ಮನೆಯೊಳಗೆ ಕೂರಿಸಲ್ಪಟ್ಟಿರುವಾಗ, ಮನುಕುಲವೇ ನಿಲುಗಡೆ ಸೂಚಕ ಕೆಂಪು ದೀಪದ ಕಡೆಗೆ ಧಾವಿಸುತ್ತಿರುವಾಗ, ಇದ್ದಕ್ಕಿದ್ದಂತೆ ನಿರ್ಣಾಯಕ ಬದಲಾವಣೆಯ ಕ್ಷಣವೊಂದು ಧುತ್ತನೆ ಬಂದು ಬ್ರೇಕನ್ನು ತುಳಿಯುವ; ಈ ಹುಚ್ಚಾಟಕ್ಕೆ ಒಂದು ತಡೆ ಬಂದು, ಬಚಾವಾಗುವ ಅವಕಾಶವೊಂದು ಭೂಗ್ರಹಕ್ಕೆ ದೂರೆಯುವ ದೃಶ್ಯವನ್ನು ನಾನು ಬಹಳ ದಿನಗಳಿಂದಲೂ ಕಲ್ಪಿಸಿಕೊಳ್ಳುತ್ತಿದ್ದೇನೆ.

ಮುಕ್ತಾಯದ ಆಟ ಆರಂಭವಾಗುತ್ತಿರುವ ಸೂಚನೆಗಳು ಇದ್ದವು. ಅವನ್ನು ಗಮನಿಸುವಷ್ಟು ವ್ಯವಧಾನವಿದ್ದವರಿಗೆ, ಹವಾಮಾನ ವಿಜ್ಞಾನಿಗಳ ಎಚ್ಚರಿಕೆಗಳನ್ನು ಅರಿಯಲಾಗದವರಿಗೆ ತಿಳಿಹೇಳಬಲ್ಲ ಹದಿಹರೆಯದ ಕಾರ್ಯಕರ್ತರ ಪಡೆಯೊಂದೂ ನಿರ್ಮಾಣಗೊಂಡಿತ್ತು. ನಾವು ವೇಗವನ್ನು ಕಡಿತಗೊಳಿಸಬೇಕು, ಕೆಲವರನ್ನು ಅಸಾಧ್ಯ ಮತ್ತು ಅಸಹ್ಯಕರ ಶ್ರೀಮಂತರನ್ನಾಗಿಸಿ ನಮ್ಮ ಭೂಗ್ರಹವನ್ನೇ ನಿರ್ನಾಮ ಮಾಡುವಂತಹ ವ್ಯವಸ್ಥೆಯನ್ನು ತ್ಯಜಿಸಿ, ಹೊಸ ಜೀವನ ವಿಧಾನಗಳಿಗೆ ಬದಲಾಗಬೇಕು ಎಂಬುದನ್ನು ಹೇಳುವ ಸಾಕಷ್ಟು ಮುನ್ಸೂಚನೆಗಳಿದ್ದವು. ಆದರೆ ನಾವು ಒಂದು ಯಶಸ್ಸಿನ ಉನ್ಮಾದದ ದಾರಿಯಲ್ಲಿದ್ದೆವು, ಸೋಲಲು ತಯಾರಿಲ್ಲದ ಮಾರಣಾಂತಿಕ ಆಟದಲ್ಲಿ ತೊಡಗಿದ್ದೆವು. ಎದುರಿನಿಂದ ನುಗ್ಗಿ ಬರುತ್ತಿರುವ ಕಾರಿಗೆ ನೇರವಾಗಿ ನಮ್ಮ ಹೆಡ್‌ಲೈಟನ್ನು ತಿರುಗಿಸಿ ಆಕ್ಸಿಲರೇಟರನ್ನು ಪೂರ್ಣ ಒತ್ತಿದ್ದೆವು. ಎದುರಾಳಿಯು ಮೊದಲು ಜಾಗ ಬಿಟ್ಟುಕೊಡುತ್ತಾನೆ ನಾವು ಗೆಲ್ಲುತ್ತೇವೆ ಎಂದು ಭಾವಿಸಿದ್ದೆವು.

ಅಗತ್ಯವಿದ್ದ ಪೆಟ್ಟೊಂದನ್ನು ಕೊಡಬಲ್ಲ ಏಕೈಕ ವಸ್ತು ಕಣ್ಣು ಮಿಟುಕಿಸುವಷ್ಟರಲ್ಲಿ ಭಯಾನಕ ರೋಗವನ್ನು ತಂದೊಡ್ಡಬಲ್ಲ ಒಂದು ಸೂಕ್ಷ್ಮಾಣುವಾಗಿತ್ತು. ಏಕೆಂದರೆ, ಮನುಷ್ಯರು ತಮ್ಮಷ್ಟಕ್ಕೇ ಬಿಟ್ಟರೆ ಆಲಸ್ಯದಿಂದಾಗಿ, ಮೇಲಕ್ಕೆದ್ದು ಮಾಡಬೇಕಿರುವ ಕಾರ್ಯವನ್ನು ಮಾಡುವುದಿಲ್ಲ. ನಾವು ಸುಮ್ಮನೆ ಕಾಯುತ್ತಾ ಕುಳಿತರೆ ಈ ಕಾಯುವ ದೀರ್ಘ ಕಾಲದಲ್ಲಿ ಪ್ರಕೃತಿಯೇ ಎದ್ದು ಕ್ರಿಯಾಶೀಲವಾಗುತ್ತದೆ. ಕ್ಷಿಪ್ರವಾಗಿ ಯಾವ ನೆದರೂ ಇಲ್ಲದೆ ನಮ್ಮನ್ನು ನಿಷ್ಕರುಣೆಯಿಂದ ಚೆಲ್ಲಾಪಿಲ್ಲಿ ಮಾಡಿಬಿಡುತ್ತದೆ. ಆಗ ಸಾಮಾನ್ಯವಾಗಿ ತೊಂದರೆಗೆ ಒಳಗಾಗುವವರು ಬಡವರೇ. ಆದರೆ ಈ ಸಲ ಆಘಾತಕ್ಕೆ ಗುರಿಯಾಗಿರುವವರು ವಿಮಾನಗಳಲ್ಲಿ ತಿರುಗಾಡುವ ದೊಡ್ಡ ಬಳಕೆದಾರರು. ಈ ಹೊಸ ವೈರಸ್ ಜಗತ್ತಿನ ಅತಿ ದೊಡ್ಡ ಕೈಗಾರಿಕಾ ವ್ಯವಸ್ಥೆಯ ಕೇಂದ್ರದಲ್ಲೇ ಹುಟ್ಟಿ ವುಹಾನ್ ನಗರದ ಜೊತೆ ದೈನಂದಿನ ಸಂಪರ್ಕದಲ್ಲಿದ್ದ ಸ್ಥಳಗಳಿಗೆ ಹರಡಿತು. ಡೇವಿಡ್ ಕಮ್ಮೆನ್, ೨೦೧೨ರಲ್ಲಿ ಪ್ರಕಟವಾದ ತಮ್ಮ 'ತುಳುಕಿ ಚೆಲ್ಲಾಟ: ಪ್ರಾಣಿಗಳ ಸೋಂಕು ಮತ್ತು ಮುಂದಿನ ಮಾನವ ಸಾಂಕ್ರಾಮಿಕ ರೋಗ' (spillover: animal infections and the next human pandemic) ಎಂಬ ಪುಸ್ತಕದಲ್ಲಿ ಇಂತಹ ಸೂಕ್ಷ್ಮಾಣುವೊಂದು ಬರುವ ಸಾಧ್ಯತೆಯನ್ನು ಕಂಡಿದ್ದರು. ನಾವು ಶೀಘ್ರದಲ್ಲೇ ಒಂದು ವೈರಸ್‌ನೊಂದಿಗೆ ಸೆಣಸಬೇಕಾಗಬಹುದು ಮತ್ತು ಅದು ಬಹುತೇಕ ಒಂದು ಬಾವಲಿಯ ಮೂಲಕ ಬರುವುದು, ಅದರ ವಾಸಸ್ಥಾನವನ್ನು ನಾವು ನಾಶ ಮಾಡಿಬಿಟ್ಟಿದ್ದೇವೆ ಎಂದು ಅವರು ಖಚಿತವಾಗಿ ನುಡಿದಿದ್ದರು.

ಆದರೆ ಅದರೊಂದಿಗೆ ಬಂದಿರುವ ಭೀತಿಯಿಂದ ಮಿಕ್ಕೆಲ್ಲವೂ ಮರೆಯಾಗಿ ವೈರಸ್ ಮಾತ್ರವೇ ಗಮನಕ್ಕೆ ಒಳಗಾಗಿದೆ. ಚೀನಾ ಇಟಲಿ ಮತ್ತು ಈಗ ಇರಾನ್ (ಮತ್ತು ಅಮೆರಿಕಾ) ದೇಶಗಳು ಭಾರಿ ಪ್ರಮಾಣದ ಸಾವುಗಳಿಂದ ಹಾನಿಗೊಳಗಾಗಿವೆ, ಜಗತ್ತಿನಾದ್ಯಂತ ಜನರು ಏಕಾಂತಕ್ಕೆ ದೂಡಲ್ಪಟ್ಟಿದ್ದಾರೆ. ಇದರಿಂದ ಉಂಟಾಗಿರುವ ತಕ್ಷಣದ ಪರಿಣಾಮವೆಂದರೆ ಮಾನವರ ಎಂತಹ ಸಂಕಲ್ಪವೂ ಈವರೆಗೆ ಸಾಧಿಸಲಾಗದ ರೀತಿಯಲ್ಲಿ ವಾತಾವರಣದ ಮಾಲಿನ್ಯವು ತಾತ್ಕಾಲಿಕವಾಗಿಯಾದರೂ ತಡೆಹಿಡಿಯಲ್ಪಟ್ಟಿದೆ. ಚೀನಾದ ಕಲುಷಿತ ವಾತಾವರಣ ತುಸು ಸ್ವಚ್ಛಗೊಂಡಿದೆ. ವಸ್ತು ವಿನ್ಯಾಸಕಿ ಮತ್ತು ಮುನ್ಸೂಚನಾ ಶಾಸ್ತ್ರಜ್ಞೆ, ಲಿ ಎಡೆಲ್ಕೂರ್ಟ್ ಈ ಕಾಲವನ್ನು 'ಬಳಕೆದಾರಿಕೆಯ ಕ್ವಾರಂಟೈನ್' ಎಂದು ಕರೆದಿದ್ದಾರೆ. ಆಕೆಯ ಅಂದಾಜಿನಂತೆ ಇದು ಹಿಂದೆಂದೂ ಕಂಡಿರದ ಪ್ರಮಾಣದ ಆರ್ಥಿಕ ಹಿಂಜರಿತಕ್ಕೆ ಕಾರಣವಾಗುವುದು. ಇದು ಮನುಷ್ಯಕುಲ ತನ್ನ ಮೌಲ್ಯವ್ಯವಸ್ಥೆಯನ್ನು ಮರುರೂಪಿಸಿಕೊಳ್ಳುವಂತೆ ಮಾಡುವುದು. ಇರಬಹುದು; ಆದರೆ ನಾವೀಗ ನೋಡುತ್ತಿರುವುದು ವಿಭಿನ್ನ ಕಾರ್ಯಸೂಚಿಯ ಎರಡು ವಿರುದ್ಧ ಮುಖಗಳು ಮುಖಾಮುಖಿಯಾಗಿರುವುದನ್ನು: ಇದರಲ್ಲಿ ದೊಡ್ಡ ಪಕ್ಷ, ಶಸ್ತ್ರಸಜ್ಜಿತರೂ, ಹಣವುಳ್ಳವರೂ ಆಗಿದ್ದು ಇನ್ನೂ ಹೆಚ್ಚು ಬಲವಾಗಿ ನೆಲೆಯೂರಬಯಸುವವರದ್ದು ಮತ್ತು ಎರಡನೆಯದು ಇನ್ನೂ ತುಸು ಉತ್ತಮ ಪ್ರಪಂಚವನ್ನು ಬಯಸುವ, ರಕ್ಷಣೆಯಿಲ್ಲದ, ಅಸಂಘಟಿತ – ಸಾಮಾನ್ಯ ಜನರದ್ದು.

ನಾನು ಇದನ್ನು ಬರೆಯುತ್ತಿರುವ ಹೊತ್ತಿನಲ್ಲಿ ಆಗಬೇಕಾದದ್ದು ಅರ್ಧದಷ್ಟೆ ಆಗಿದೆ. ನಾವು ಈ ಸಾಂಕ್ರಾಮಿಕ ರೋಗವನ್ನು ಕಂಡು ವಾರಗಳೇ ಕಳೆದಿವೆ. ಆದರೂ ಚೀನಾದವರು ಇಟಾಲಿಯನ್ನರು ಇರಾನ್‌ನವರು ಅನುಭವಿಸಿದಂತಹ ವಿಪತ್ತನ್ನು ಭಾರತವಿನ್ನೂ ಕಂಡಿಲ್ಲ. ಪ್ರತಿದಿನವೂ ಭಯ ಹುಟ್ಟಿಸುವ ರೀತಿಯ ವರದಿಗಳು ಸೂಚಿಸುತ್ತಿರುವ ಮಟ್ಟದಲ್ಲಿ ಆಸ್ಪತ್ರೆಗಳಿಗೆ ಬರುವ ಜನರ ಸಂಖ್ಯೆಯಲ್ಲಿ ಏರಿಕೆಯಾಗಿಲ್ಲ. ಬಹುಶಃ ನಾವು ಅದೃಷ್ಟವಂತರಿರಬಹುದು, ನಾವದರಿಂದ ತಪ್ಪಿಸಿಕೊಳ್ಳಬಹುದು. ಆದರೆ ನಮಗೆ ಅದು ಖಚಿತವಾಗಿ ತಿಳಿಯುವವರೆಗೆ, ತನ್ನ ಆಗಮನಕ್ಕಾಗಿ ಸಮಯ ಕಾಯುತ್ತಿರುವ ಮತ್ತು ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳಲೂಬಹುದಾದ ಒಂದು ಸುನಾಮಿಗಾಗಿ ನಾವು ತಯಾರಾಗುತ್ತಿದ್ದೇವೆನ್ನಬಹುದು.

ಯಾರಿಗೆ ಗೊತ್ತು, ನಾವು ಈಗಾಗಲೇ ಬಹು ಕಾಲದಿಂದ ಈ ವೈರಸ್ಸಿನ ಜೊತೆಗೇ ಬದುಕಿರಬಹುದು. ಭಾರತವು ಚೀನಾ ಇಟಲಿ ಅಥವಾ ಇತರೆ ಯೂರೋಪಿನ ವೈರಸ್ ಪೀಡಿತ ಯಾವುದೇ ದೇಶಗಳ ಜೊತೆ ಸಂಪರ್ಕವಿಲ್ಲದೇ ಬಹುಕಾಲವನ್ನೇನೂ ನಾವು ಕಳೆದಿಲ್ಲ. ನಮ್ಮಲ್ಲಿ ಹಲವರು ಜನವರಿ ಫೆಬ್ರವರಿ ತಿಂಗಳಲ್ಲಿ ೧೦ ದಿನಗಳ ಭಯಂಕರ ಫ್ಲೂನಿಂದ ಪೀಡಿತರಾದುದು ನಮ್ಮ ಜೀವನದ ಕೆಟ್ಟ ಬಹುಕೆಟ್ಟ ಕಾಲವೆನ್ನಬಹುದು. ಇದರಿಂದ ನಮ್ಮ ಹಿರಿಯ ವಯಸ್ಕ ಬಂಧುಗಳು ಎಷ್ಟೋ ಜನ ನ್ಯುಮೋನಿಯಾಕ್ಕೆ ತುತ್ತಾಗಿ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ಸೇರಬೇಕಾಯಿತು. ನಮ್ಮಲ್ಲಿ ಎಷ್ಟೋ ಜನಕ್ಕೆ ಈ ಖಾಯಿಲೆ ಬಂದೂ ಇರಬಹುದು. ಅದು ತಾನು ಯಾರು ಎಂಬುದನ್ನು ತೋರಿಸಿಕೊಳ್ಳದೆ ಹೋಗಿದ್ದರಿಂದ ನಾವು ಅದೊಂದು ಯಃಕಶ್ಚಿತ್ ಕ್ರಿಮಿ ಎಂದುಕೊಂಡಿರಬಹುದು. ಭಾರತದ ೧೩೦ ಕೋಟಿ ಜನಸಂಖ್ಯೆಯಲ್ಲಿ ಪ್ರತಿ ದಿನ ೨೫೦೦೦ ಜನ ಸಾಯುತ್ತಲೇ ಇರುತ್ತಾರೆ, ೧೦೦೦ ಕ್ಕೂ ಹೆಚ್ಚು ಜನ (೨೦೧೮ ರಲ್ಲಿ ೪ ಲಕ್ಷ) ಕ್ಷಯದಿಂದ ಸಾಯುತ್ತಾರೆ. ಕ್ಷಯಕ್ಕೆ ನಮ್ಮಲ್ಲಿ ಔಷಧಿ ಇದೆ, ಆದರೂ ಅದನ್ನು ನಿರ್ನಾಮ ಮಾಡಿಲ್ಲ. ಏಕೆಂದರೆ ಅದು ಬಾಧಿಸುವುದು ಬಡವರನ್ನು ಮಾತ್ರ. ಪ್ರತಿದಿನ ಇತರೆ ಒಂದು ಸಾವಿರ ಮಂದಿ ಭಾರತೀಯರು, ಇವರಲ್ಲಿ ಬಹುತೇಕ ಮಕ್ಕಳು, ಉಸಿರಾಟದ ತೊಂದರೆಯಿಂದ ಸಾವನ್ನಪ್ಪುತ್ತಿದ್ದಾರೆ ಮತ್ತು ಮಲೇರಿಯಾದಿಂದ ೫೦೦ ಜನ ಸಾವನ್ನಪ್ಪುತ್ತಿದ್ದಾರೆ.

ಆದರೆ ನಮ್ಮಲ್ಲಿ ಬಹಳಷ್ಟು ಜನ ಕೋವಿಡ್–೧೯ ನಂತಹ ಕೆಟ್ಟ ವೈರಸ್ ಸೋಂಕಿನಿಂದಲೂ ಬಚಾವಾಗುತ್ತೇವೆ. ನಮ್ಮ ಜೀವನಗಳಲ್ಲಿ ಇದನ್ನೊಂದು ಪ್ರಮುಖ ಮೈಲುಗಲ್ಲಾಗಿ ಪರಿಗಣಿಸಿ ನಮ್ಮ ಅನುಭವಗಳನ್ನು ದಾಖಲಿಸಲು ಬದುಕುಳಿಯುತ್ತೇವೆ.

ಆದರೂ ಹಿಂದೆಂದೂ ಕಾಣದಂತಹ ಭೀತಿ ಈಗ ಏಕೆ? ತಪ್ಪು ಮಾಡಿದ ಶಾಲಾ ಮಕ್ಕಳನ್ನು ಶಿಕ್ಷಿಸುವಂತೆ, ಕೈಯಲ್ಲಿ ಲಾಠಿ ಹಿಡಿದ ಪೊಲೀಸರು ಅದೃಷ್ಟಹೀನ ವಲಸೆ ಕೆಲಸಗಾರರನ್ನು ಕಪ್ಪೆಗಳ ಥರ ಕುಪ್ಪಳಿಸುತ್ತಾ ಓಡುವಂತೆ ಮಾಡುವ ದೃಶ್ಯಗಳು ಏಕೆ? ವಿದೇಶಗಳಲ್ಲಿ ಸಿಕ್ಕು ಹಾಕಿಕೊಂಡ ಭಾರತೀಯರನ್ನು ವಾಪಸ್ಸು ಕರೆತರುವುದರಲ್ಲಿ ಸರ್ಕಾರಗಳು ನಿರತರಾಗಿದ್ದಾಗ ಗಂಡಸರು, ಹೆಂಗಸರು, ಮಕ್ಕಳು ಹೆದ್ದಾರಿಗಳಲ್ಲಿ ತಮ್ಮ ಊರುಗಳಿಗೆ ತಲುಪುವುದಕ್ಕಾಗಿ ತಮ್ಮ ಬೊಬ್ಬೆಯೆದ್ದ ಕಾಲುಗಳಲ್ಲೇ ನಡೆಯುವಂತಾಗಿದ್ದು ಏಕೆ? ಒಂದು ರಾತ್ರಿ ವಾರ್ತಾಪ್ರಸಾರವೊಂದರಲ್ಲಿ ಇಡೀ ಪ್ರದೇಶವೊಂದರಲ್ಲಿ ಎಷ್ಟೋ ಜನ ಕ್ಯಾಮರಾವನ್ನು ದೃಷ್ಟಿಸುತ್ತಾ ಆಹಾರಕ್ಕಾಗಿ ಬೇಡುತ್ತಿದ್ದುದನ್ನು ತೋರಿಸಲಾಯಿತು. ಇದಕ್ಕೊಂದು ಕ್ರೂರ ವೈರುಧ್ಯವೆಂಬಂತೆ ಒಬ್ಬ ಶಾಸಕ ಕರ್ಫ್ಯೂ ನಿಯಮಗಳನ್ನು ಉಲ್ಲಂಘಿಸಿದವರನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲಬೇಕೆಂದು ಹೇಳುತ್ತಿದ್ದ ದೃಶ್ಯವೂ ಕಂಡುಬಂತು. ಗುಂಡಿಕ್ಕಿ ಕೊಲ್ಲಲಾಗದಿದ್ದರೆ ಕೊನೇ ಪಕ್ಷ ಅಂತಹವರ

ಕಾಲುಗಳನ್ನಾದರೂ ಮುರಿದ ಪೊಲೀಸರಿಗೆ ಹಣದ ಬಹುಮಾನ ನೀಡುವುದಾಗಿ ಆತ ಹೇಳುತ್ತಿದ್ದ.

ಅಂದಿನ ಬೆಳಿಗ್ಗೆ ನಮ್ಮ ಮನೆಯ ಸುತ್ತಲ ರಸ್ತೆಗಳು ಬಹುಮಟ್ಟಿಗೆ ನಿರ್ಜನವಾಗಿದ್ದವು, ಕೆಲವೇ ಕಾರುಗಳು ಸ್ಕೂಟರ್‌ಗಳು ಕೆಲವು ಸೈಕಲ್‌ಗಳು ಕಂಡವು. ಆದರೆ ನಡೆದು ಹೋಗುತ್ತಿದ್ದ ಒಬ್ಬರಾದರೂ ಕಾಣಲಿಲ್ಲ. ದೆಹಲಿಯ IIT ಕ್ಯಾಂಪಸ್ಸಿನ ಒಳಗೆ, ಗಸ್ತು ತಿರುಗುವ ಕಾವಲಿನವರ ಭಯವಿಲ್ಲದ ಸುರಕ್ಷಿತ ಸ್ಥಳದಲ್ಲೂ ಕೂಡ ಯಾರೂ ನಡೆದಾಡುತ್ತಿರಲಿಲ್ಲ. ಸದಾ ಅಲ್ಲಲ್ಲಿ ಕುಳಿತಿರುತ್ತಿದ್ದ ಜನರೂ ಕೂಡ ಕಾಣಲಿಲ್ಲ. ಮನೆಗಳ ಬಾಲ್ಕನಿಗಳಲ್ಲೂ ಜನ ಕಾಣುತ್ತಿರಲಿಲ್ಲ. ಒಂದು ಪ್ರಮುಖ ಕ್ಷಣದಲ್ಲಿ ನಮ್ಮ ದಾರಿಗಳನ್ನು ಹೇಗೆ ಬದಲಾಯಿಸಿಕೊಳ್ಳಬಹುದು, ಒಂದು ಜೀವನ ಕ್ರಮವಾಗಿ ಮತಿಹೀನ ಅಭಿವೃದ್ಧಿಯನ್ನು ತಡೆಯುವ ಬಗ್ಗೆ ಮತ್ತು ಅವಪ್ರಗತಿಯ (degrowth) ಕಡೆಗೆ ಸುಲಭವಾಗಿ ಬದಲಾಗುವ ಬಗ್ಗೆ ಯೋಚಿಸಬಹುದಾದ ಕಾಲದಲ್ಲಿ ನಾವು ಹೆಪ್ಪುಗಟ್ಟಿದ್ದೇವೆ. ಹಿಂದೆಂದಿಗಿಂತಲೂ ಹೆಚ್ಚಾಗಿ ಪರಸ್ಪರ ದೂರಾಗಿದ್ದೇವೆ. ಒಂದು ಮರುಚಿಂತನೆಯನ್ನು ಸಾಧ್ಯವಾಗಿಸಬಹುದಾಗಿದ್ದ, ಹೊಸ ಚಿಂತನೆಗಳ ಹುಟ್ಟಿನ ವಸಂತವೊಂದು ಪುನಃ ಪ್ರಾರಂಭಗೊಳ್ಳಲು ಅವಕಾಶವೊಂದನ್ನು ಸಾಧ್ಯಗೊಳಿಸಬಲ್ಲ, ಪ್ರಕೃತಿಯೇ ಕಲ್ಪಿಸಿರುವ ವೇಗದ ಈ ತಡೆಯ ಅವಕಾಶ ವ್ಯರ್ಥವಾಗಿ ಹೋಗಬಹುದೇನೋ..... ಜಗತ್ತು ಪುನಃ ತನ್ನ ಎಂದಿನ-ಹಿಂದಿನ-ವ್ಯವಹಾರದಲ್ಲಿ ತೊಡಗುತ್ತದೆ; ಅದೇ ಹಳೆಯ ಚಿಂತನೆ, ಅದೇ ಕೊನೆಗೊಂಡ ದಾರಿಯಲ್ಲೇ ಓಟ. ಜಾಗತಿಕ ಆರ್ಥಿಕತೆಗೆ ಏಟು ಬಿದ್ದಿರುವುದರಿಂದ ಅದೇ ಅವಪ್ರಗತಿ ಮುಂದುವರೆಯುತ್ತದೆ. ಆದರೆ ಬೆಳವಣಿಗೆಯ ಯಂತ್ರವು ಕೀಲೆಣ್ಣೆ ಹಚ್ಚಿಕೊಂಡು ಪುನಃ ಚಲಿಸಲಾರಂಭಿಸಿದರೂ ಕಳೆದುಹೋಗಿರುವ ಬಡಜನರ ಉದ್ಯೋಗಗಳು ಬಹುಶಃ ಮತ್ತೆ ಮರಳಲಾರವು.

ಈ ಸಂಕಷ್ಟವು ಕಥೆಯ ಅಂತ್ಯವಲ್ಲ, ಭವಿಷ್ಯಕ್ಕಾಗಿ ನಾವು ನಮ್ಮ ದಾರಿಯನ್ನು ಸರಿಪಡಿಸಿಕೊಳ್ಳಬೇಕಾದ ಗಂಭೀರ ಮುನ್ನೆಚ್ಚರಿಕೆ. ಏಕೆಂದರೆ ಜಗತ್ತು ಹೆಚ್ಚು ಸಂಪರ್ಕ ಪಡೆದಂತೆ ಮತ್ತು ವಾಸ್ತವ ನೆಲೆಯಿಂದ ದೂರಾದಂತೆಲ್ಲಾ ಸಾಂಕ್ರಾಮಿಕ ರೋಗಗಳು ಹೆಚ್ಚಾಗುತ್ತವೆ. ಒಂದು ಕಾಲಕ್ಕೆ ಆಫ್ರಿಕಾದ ದಟ್ಟ ಕಾನನಗಳಲ್ಲಿ ಇದ್ದ ಎಬೋಲಾ ರೋಗಾಣುಗಳು ನಗರಗಳನ್ನು ತಲುಪಿದಾಗ ಒಂದು ಹೊಸ ವಿಪತ್ತಿನ ಹಂತವನ್ನು ತಲುಪುತ್ತವೆ. ಇದನ್ನೆಲ್ಲಾ ನಾವು ಒಂದೆರಡು ದಿನಗಳಲ್ಲಿ ಕಲಿಯಬೇಕೆಂಬುದು ಅತಿಯಾದ ನಿರೀಕ್ಷೆಯಾದೀತು. ಆದರೆ ನಾವೀಗ ಅಚ್ಚರಿಗಳು ಕಾದಿರುವ ಒಂದು ಹೊಸ ಜಗತ್ತಿನಲ್ಲಿದ್ದೇವೆ. ಹೊಸ ಕಾಲವೊಂದರ ಅನುಭವವನ್ನು ಪಡೆಯುತ್ತಾ ಮನೆಯೊಳಗೆ ಹೆಚ್ಚು ಕಾಲ ಕಳೆಯಬೇಕಿದೆ. ಆಗಲೇ ಕೊನೆಯಿಲ್ಲದ ಅಭಿವೃದ್ಧಿಯ ಮಾದರಿಗೆ ಕೊನೆ ಹಾಡಿ, ನಾವೀಗ ಸಂಪೂರ್ಣವಾಗಿ ಬೆಳೆದಿದ್ದೇವೆ, ನಾವೀಗ ಮಾಡಬೇಕಿರುವುದು ಬೆಳವಣಿಗೆಯನ್ನು ನಿಧಾನಗೊಳಿಸಿ ಸುಸ್ಥಿರತೆ ಸಾಧ್ಯವಾಗುವಂತೆ ಮಾಡುವುದು ಎಂಬ ಅರಿವಿಗೆ ಬರುವಂತಾಗುವುದು.



(ಮೂಲತಃ ಟ್ರಿನಿಡಾಡ್‌ನ ಭಾರತೀಯ ಸಂಜಾತೆಯಾದ ಲೇಖಕಿ, ಈಗ ದೆಹಲಿಯಲ್ಲಿ ವಾಸವಾಗಿರುವ ಭಾಷಾಶಾಸ್ತ್ರಜ್ಞೆ)

(ಕೃಪೆ: ***ಔಟ್‌ಲುಕ್***, ೧೩ ಏಪ್ರಿಲ್, ೨೦೨೦

ಕನ್ನಡಕ್ಕೆ: ಎಂ ರಾಜು)

ಪ್ರಚಲಿತ-೨

ಬಾವಲಿಯ ಎಂಜಲಲ್ಲಿ ಕಾಯಿಲೆಯ ಕಾಳ್ಗಿಚ್ಚು! : 'ಕಂಟೇಜಿಯನ್' ಎಂಬ ಚಲನಚಿತ್ರ ಕುರಿತು...



ಕೊರೊನಾ ಸಾಂಕ್ರಾಮಿಕ ನಮಗೆಲ್ಲ ಮುಖವಾಡ ತೊಡಿಸಿದ್ದಷ್ಟೇ ಅಲ್ಲ, ಮನುಷ್ಯನ ನಾನಾ ಬಗೆಯ ಕೊಳಕು ಮುಖಗಳನ್ನೂ ಅನಾವರಣ ಮಾಡಿದೆ. ಇದನ್ನೆಲ್ಲ ಹತ್ತು ವರ್ಷಗಳ ಹಿಂದೆಯೇ ೨೦೧೧ರಲ್ಲಿ 'ಕಂಟೇಜಿಯನ್' (ಸಾಂಕ್ರಾಮಿಕ) ಹೆಸರಿನ ಒಂದು ಹಾಲಿವುಡ್ ಸಿನೆಮಾದಲ್ಲಿ ತೋರಿಸಲಾಗಿದೆ. ಅದರ ಕಥೆಯೂ ಕೊರೊನಾ ಮಾದರಿಯಲ್ಲೇ ಆರಂಭವಾಗಿ ಮನುಷ್ಯನ ಸ್ವಾರ್ಥ, ವಂಚನೆ, ರಾಜಕಾರಣ ಎಲ್ಲವನ್ನೂ ತೋರಿಸುತ್ತ ಸಾಗುತ್ತದೆ. ಭಯದ ಮುಷ್ಟಿಗೆ ಸಿಕ್ಕ ಜನ ನಾಳೆ ಏನೇನು ಮಾಡಬಹುದು ಎಂಬುದರ ನಿನ್ನೆಯ ಮುನ್ನೋಟವೂ ಇದರಲ್ಲಿದೆ. ಕಥಾ ಸಾರಾಂಶ ಹೀಗಿದೆ:

ಚೀನಾದ ಮಳೆಕಾಡಿನಲ್ಲಿ ತಂತಾನೆ ಬೆಳೆದಿದ್ದ ಕಾಡುಬಾಳೆಯ ಮರವನ್ನು ಬುಲ್ಡೋಝರ್ ಬಂದು ನೆಲಸಮ ಮಾಡುತ್ತದೆ. ಅದರಲ್ಲಿ ಅವಿತಿದ್ದ ಬಾವಲಿಯೊಂದು ತನ್ನ ಬಾಯಲ್ಲಿದ್ದ ಬಾಳೆಹಣ್ಣಿನ ತುಣುಕಿನ ಸಮೇತ ಹಾರಿ ಹೋಗುತ್ತದೆ. ಹೋಗಿ ಅದು ಕಾಡಂಚಿನಲ್ಲಿದ್ದ ಹಂದಿಸಾಕಣೆ ಕೇಂದ್ರದ ಸೂರಿಗೆ ಜೋತುಬೀಳುತ್ತದೆ. ಅದರ ಬಾಯಿಯಿಂದ ಕೆಳಕ್ಕೆ ಬಿದ್ದ ಬಾಳೆಹಣ್ಣನ್ನು ಹಂದಿಯೊಂದು ತಿನ್ನುತ್ತದೆ.

ಬಾವಲಿಯಲ್ಲಿದ್ದ ವೈರಸ್ ಈಗ ಹಂದಿಯ ದೇಹಕ್ಕೆ ಬರುತ್ತದೆ. ಜ್ವರಪೀಡಿತ ಹಂದಿಯ ಮಾಂಸ ಹಾಂಗ್‌ಕಾಂಗ್‌ನ ಒಂದು ಹೊಟೆಲ್ಲಿನ ಅಡುಗೆ ಮನೆಗೆ ಬರುತ್ತದೆ. ಅಲ್ಲಿನ ಊಟವನ್ನು ಮೆಚ್ಚಿದ ಅಮೆರಿಕದ ಅತಿಥಿ ಬೆಥ್ ಎಂಬಾಕೆ ಅಡುಗೆಯವನೊಂದಿಗೆ ಕೈ ಕುಲುಕಿದಾಗ ವೈರಸ್ ಅವಳಿಗೂ ತಗಲುತ್ತದೆ.

ಸ್ವದೇಶಕ್ಕೆ ಹಿಂದಿರುಗಿದ ಬೆಥ್ ತನ್ನ ಮಾಜಿ ಪತಿಯೊಂದಿಗೆ ಸರಸವಾಡುತ್ತಾಳೆ. ಮರುದಿನ ಅವಳು ಮೈನಡುಕ ಹತ್ತಿ, ಮೂರ್ಛೆ ಬಿದ್ದು ಸಾಯುತ್ತಾಳೆ. ಅವಳ ಮಗನೂ ಸಾಯುತ್ತಾನೆ. ತನಿಖೆಗೆ ಬಂದ ವೈದ್ಯ ಸಂಶೋಧಕಿಯೂ ಸಾಯುತ್ತಾಳೆ.

ವೈರಸ್ ಅನೇಕ ನಗರಗಳಿಗೆ ವಿಸ್ತರಿಸುತ್ತ ವೈರಲ್ ಆಗುತ್ತದೆ. ಲಾಕ್‌ಡೌನ್, ಕ್ವಾರಂಟೈನ್, ಲೂಟಿ, ದೊಂಬಿ ಎಲ್ಲ ಶುರುವಾಗುತ್ತದೆ.

ವಿಜ್ಞಾನಿಗಳು ವೈರಸ್ಸಿನ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ತಿಣುಕುತ್ತಿದ್ದಾಗ, ಪ್ರಭಾವೀ ಗಣ್ಯನೊಬ್ಬ "ಇದು ಚೀನೀಯರ ಜೀವಾಣು ಅಸ್ತ್ರವೇ ಹೌದು" ಎಂದು ಟಿವಿಯಲ್ಲಿ ವಾದಿಸುತ್ತಾನೆ. ತಾನೂ ಕಾಯಿಲೆ ಬಿದ್ದಿದ್ದೆನೆಂದೂ ಹೋಮಿಯೋಪಥಿ ಔಷಧವೊಂದರಿಂದ ಚೇತರಿಸಿಕೊಂಡೆನೆಂದೂ ಟಿವಿ ವಾಹಿನಿಗಳಲ್ಲಿ ಪ್ರಸಿದ್ಧಿ ಪಡೆಯುತ್ತಾನೆ. ಆ ಬೋಗಸ್ ಔಷಧ ಪಡೆಯಲು ಎಲ್ಲೆಡೆ ಪೈಪೋಟಿ ನಡೆಯುತ್ತದೆ.

ಅತ್ತ ಅಟ್ಲಾಂಟಾದ ರೋಗಪತ್ತೆ ಕೇಂದ್ರದ ವಿಜ್ಞಾನಿಯೊಬ್ಬಳು ಅಹೋರಾತ್ರಿ ಶ್ರಮಿಸಿ ಲಸಿಕೆ (ವ್ಯಾಕ್ಸಿನ್) ತಯಾರಿಸುತ್ತಾಳೆ. ಅದನ್ನು ಸಾರ್ವಜನಿಕರ ಮೇಲೆ ಪ್ರಯೋಗಿಸಿ ಪರೀಕ್ಷಿಸಲು ಹೋದರೆ ತುಂಬಾ ಸಮಯ ಬೇಕಾಗುತ್ತದೆಂದು ತನ್ನ ಮೇಲೆಯೇ ಪ್ರಯೋಗಿಸಿ, ನಂತರ ತಾನೇ ವೈರಸ್ಸನ್ನು ಅಂಟಿಸಿಕೊಳ್ಳುತ್ತಾಳೆ.



ಅವಳಿಗೆ ರೋಗ ತಗಲುವುದಿಲ್ಲ. ಲಸಿಕೆ ಯಶಸ್ವಿ ಎಂದು ಗೊತ್ತಾದಾಗ ಅದನ್ನು ಪಡೆಯಲು ಪ್ರಭಾವಿಗಳ ನೂಕುನುಗ್ಗಲು ನಡೆಯುತ್ತದೆ. ನಂತರ ಲಾಟರಿ ಮೂಲಕ (ಅವರವರ ಜನ್ಮ ದಿನಾಂಕದ ಪ್ರಕಾರ) ಲಸಿಕೆ ವಿತರಣೆ ಆರಂಭವಾಗುತ್ತದೆ. ಇದೇ ವೇಳೆಗೆ ಲಸಿಕೆಯ ವಿರುದ್ಧ ಪ್ರತಿಭಟನೆಯೂ ಕಾಳ್ಗಿಚ್ಚಾಗುತ್ತದೆ. ಇವೆಲ್ಲ ಆಗುತ್ತಿರುವಾಗ ಅಮೆರಿಕದಲ್ಲಿ ೨೫ಲಕ್ಷ ಜನ ಹಾಗೂ ಇತರ ದೇಶಗಳಲ್ಲಿ ೨೬ ಲಕ್ಷ ಜನ ಸತ್ತಿರುತ್ತಾರೆ.

ರೋಗದ ಮೂಲ ಯಾವುದೆಂದು ಶೋಧಿಸಲು ಚೀನಾಕ್ಕೆ ಹೋದ WHO ವಿಜ್ಞಾನಿ ಲಿಯೊನಾರಾಳನ್ನು ಸ್ಥಳೀಯ ಸರಕಾರಿ ಅಧಿಕಾರಿಯೊಬ್ಬ ಹಿಡಿದು ಅಡಗಿಸುತ್ತಾನೆ. ತನ್ನ ಜನರಿಗೂ ವ್ಯಾಕ್ಸಿನ್ ಕೊಟ್ಟರೆ ಮಾತ್ರ ಅವಳನ್ನು ಬಿಡುಗಡೆ ಮಾಡುವುದಾಗಿ ಅಮೆರಿಕಕ್ಕೆ ಸಂದೇಶ ಕಳಿಸುತ್ತಾನೆ. ವ್ಯಾಕ್ಸಿನ್ ತಂದು ವಿತರಣೆ ಆರಂಭಿಸಿದ ಮೇಲೆ ಅವಳ ಬಿಡುಗಡೆಯಾಗುತ್ತದೆ.

ಆದರೆ ಅಲ್ಲಿ ವಿತರಿಸಿದ್ದು ವ್ಯಾಕ್ಸಿನ್ ಅಲ್ಲ, ಸುಳ್ಳೌಷಧ (ಪ್ಲಾಸಿಬೊ) ಎಂದು ಗೊತ್ತಾಗಿ ಲಿಯೊನಾರಾ ಹೇಗಾದರೂ ಅಲ್ಲಿನ ಮುಗ್ಧರನ್ನು ಬಚಾವು ಮಾಡಲೆಂದು ಅವಳು ಹೋರಾಡುವಲ್ಲಿ .....ಕಥೆ ಕ್ಲೈಮ್ಯಾಕ್ಸಿಗೆ ಬರುತ್ತದೆ.

-ನಾಗೇಶ ಹೆಗಡೆ

(ಖ್ಯಾತ ವಿಜ್ಞಾನ ಲೇಖಕರು ಮತ್ತು ಅಂಕಣಕಾರರು)


[ಇದು ವೈಜ್ಞಾನಿಕವಾಗಿಯೂ ಸರ್ವಸಂಪನ್ನ ಚಿತ್ರವೆಂದು ತಜ್ಞರಿಂದ ಪ್ರಶಂಸೆ ಪಡೆದ ಚಿತ್ರ. ಈಗಿನ ಕೊರೊನಾ ಮಾರಿಯಿಂದಾಗಿ ಈ ಹಳೇ ಸಿನೆಮಾಕ್ಕೆ ಈಗ ಭಾರಿ ಬೇಡಿಕೆ ಬಂದಿದೆ. ಸತತ ಎರಡು ವಾರಗಳಿಂದ ಅತಿ ಹೆಚ್ಚು ಡೌನ್‌ಲೋಡ್ ಮಾಡಿಕೊಂಡ ಸಿನಿಮಾ ಎಂಬ ಖ್ಯಾತಿ ಅದರದ್ದು. ಲೇಖಕರು ೨೦೨೦ರ ಏಪ್ರಿಲ್ ತಿಂಗಳಲ್ಲಿ ತಮ್ಮ ಫೇಸ್‌ಬುಕ್‌ನಲ್ಲಿ ಬರೆದ ಈ ಲೇಖನ ಅವರ 'ಆನಂದಾಮೈಡ್' ಸಂಕಲನದಲ್ಲೂ ಪ್ರಕಟವಾಗಿದೆ. ಈ ಕೃತಿಯ ಅವಲೋಕನಕ್ಕಾಗಿ ಇದೇ ಸಂಚಿಕೆಯ ೧೩ನೇ ಪುಟ ನೋಡಿ-ಸಂ.]

ಪ್ರಚಲಿತ-೪

ವೈಯಕ್ತಿಕತೆ ಮತ್ತು ಸಮುದಾಯ ಪ್ರಜ್ಞೆ

ಕರೋನಾ ಹುಟ್ಟಿಸಿದ ಒಂದು ಜಿಜ್ಞಾಸೆ

-ಲಕ್ಷ್ಮೀಶ ತೋಳ್ಪಾಡಿ



ಕಳೆದ ಹದಿನೈದು ತಿಂಗಳುಗಳಿಂದ ಲೋಕವನ್ನು ಕೊರೋನಾ ನಲುಗಿಸುತ್ತಿದೆ. ಕ್ರಿಮಿಯಿಂದ ರಾಜ್ಯವಾಳಿಸುವೆ ಎಂದು ಪರಾಶಕ್ತಿಯನ್ನು ವಾದಿರಾಜಸ್ವಾಮಿಗಳು ಬಣ್ಣಿಸಿದ್ದು ನೆನಪಾಗುತ್ತಿದೆ! ಅವರ ಕಾಲದಲ್ಲಿ ರೂಪಕಾರ್ಥದಲ್ಲಿ ಅವರು ಉದ್ಗರಿಸಿದ ಆ ಮಾತು ನಮ್ಮ ಕಾಲದಲ್ಲಿ ಇಷ್ಟು ವಾಚ್ಯಾರ್ಥದಲ್ಲಿ ನಿಜವಾಗಿಬಿಟ್ಟಿತೇ ಎಂದುಕೊಳ್ಳುತ್ತೇನೆ. ನಮ್ಮ ಪಾಡನ್ನು ಕುರಿತ ಸಮರ್ಪಕವಾದ ಅರಿವಿನ ಮೂಲಕವೇ ನಮ್ಮ ಪ್ರಜ್ಞೆಗೆ ಬಿಡುಗಡೆಯ ಬಾಗಿಲು ತೆರೆದುಕೊಳ್ಳುವುದು ಎಂಬ ಅರ್ಥವನ್ನೂ ಈ ಮಾತು ಸೂಚಿಸುತ್ತದೆ. ಅದಿರಲಿ. ಕೊರೋನಾ ಅಣು ತನ್ನನ್ನೇ ತಾನು ರೂಪಾಂತರಿಸಿಕೊಳ್ಳುತ್ತಿರುವುದೂ, ಈ ರೂಪಾಂತರಗಳಲ್ಲಿ ಅದರ ಶಕ್ತಿ ಕುಗ್ಗುವುದರ ಬದಲು ಅದು ಹೆಚ್ಚು ಹೆಚ್ಚು ಉದ್ರಿಕ್ತವಾಗುತ್ತಿರುವುದೂ, ಕೊರೋನಾ ವೈರಸ್‌ಗೆ ನಿರ್ದಿಷ್ಟ ಪ್ರತಿಔಷಧ ಕಂಡುಹಿಡಿಯುವುದಕ್ಕೆ ಕನಿಷ್ಠ ನಾಲ್ಕು ವರ್ಷಗಳಾದರೂ ಬೇಕು, ಈಗ ನೀಡುತ್ತಿರುವುದು ತತ್ಕಾಲದ ಉಪಶಮನವಷ್ಟೇ ಎಂದು ಕೂಡ ಅಂತಾರಾಷ್ಟ್ರೀಯ ಕೆಲವು ತಜ್ಞರು ಹೇಳುತ್ತಿರುವುದು, ಕೊರೋನಾ ನಿಯಂತ್ರಿಸಲು ಅನಿವಾರ್ಯವಾಗಿ ಕೊಡಲೇಬೇಕಾದ ತೀವ್ರ ಸ್ಟಿರಾಯಿಡ್ ಔಷಧಿಗಳು ಇನ್ನೊಂದು ಬಗೆಯ ರೋಗಕ್ಕೆ ಕಾರಣವಾಗುತ್ತದೆ ಎಂಬ ಸೂಚನೆಗಳು ಕಾಣುತ್ತಿರುವುದು – ಇವೆಲ್ಲ ಕವಿದಿರುವ ಆತಂಕದ ಕಾರ್ಮೋಡಗಳನ್ನು ಇನ್ನಷ್ಟು ದಟ್ಟವಾಗಿಸುತ್ತಿವೆ. ನಿಜ. ನಾವು ಒಂದು ಕ್ರೈಸಿಸ್‌ನಲ್ಲಿ ಹಾದು ಹೋಗುತ್ತಿದ್ದೇವೆ.

ಚಕಿತಗೊಳಿಸುವ ಅಥವಾ ಆಘಾತಕಾರಿಯಾದ ಸತ್ಯವೇನೆಂದರೆ ನಮಗೆ ಕ್ರೈಸಿಸ್ ಎದುರಾಗುವುದು ಅಗತ್ಯ! ಮನುಷ್ಯ ಜೀವಕ್ಕೆ ದುರಂತ ಪ್ರಜ್ಞೆಯು ಅಗತ್ಯ ಎಂದರೆ ತಪ್ಪು ತಿಳಿಯಬೇಡಿ. ನಮ್ಮೊಳಗಿನ ಶಕ್ತಿಗಳು ಕ್ರೈಸಿಸಿನ ಹೊತ್ತಿನಲ್ಲಿ ಪ್ರಕಟಗೊಳ್ಳುವವು! ಮನೆಗೆ ಬೆಂಕಿ ಬಿತ್ತೆನ್ನುವಾಗ, ಮಗುವು ನೀರಿನಲ್ಲಿ ಕೊಚ್ಚಿ ಹೋಗುತ್ತಿದೆ ಎನ್ನುವಾಗ ಅಥವಾ ಇಂಥ ಅನೇಕ ಸಂದರ್ಭಗಳಲ್ಲಿ ನಾವು ಊಹಿಸಿರದ ನಮ್ಮ ಆಳದ ಶಕ್ತಿಗಳು ಪ್ರಕಟವಾಗುವವು. ಇದು ಎಲ್ಲರ ಅನುಭವ. ಆ ಶಕ್ತಿಯ ಮುಖ್ಯ ಲಕ್ಷಣವೆಂದರೆ ಆಗ ನಾವು ನಮ್ಮನ್ನೇ ಮರೆಯುವೆವು. ಮೈಮರೆಯುವೆವು. ಅನ್ವರ್ಥವಾಗಿ ಮೈ- ಮರೆಯುವೆವು. ಅಂದರೆ ದೇಹ ಭಾವವನ್ನೇ ಮರೆಯುವೆವು. ಪ್ರಜ್ಞೆಯು ದೇಹ ಭಾವವನ್ನು ಮರೆತಾಗ- ಅದೇ ದೇಹದ ಮೂಲಕ ಅಮೋಘವಾದ ಶಕ್ತಿಯೊಂದು ಪ್ರಕಟಗೊಳ್ಳುವುದು. ಆವೇಶಕ್ಕೆ ಒಳಗಾದ ಸ್ಥಿತಿ ಅದು. ಬೇರೆ ಮಾತುಗಳಲ್ಲಿ ಹೇಳುವುದಾದರೆ. ದೇಹವು ಪ್ರಜ್ಞಾಪೂರ್ವಕತೆಯಿಂದ ಆಗ ಬಿಡುಗಡೆ ಪಡೆಯುತ್ತದೆ ಎನ್ನಬಹುದು. ಹಾಗೆ ಬಿಡುಗಡೆ ಪಡೆಯದೆ ಈ ಶಕ್ತಿಯು ಪ್ರಕಟವಾಗುವುದಿಲ್ಲ. ಪ್ರಜ್ಞಾಪೂರ್ವಕತೆ ಎಂದರ ಪ್ರಜ್ಞೆಗೆ ಸದಾ ನಮ್ಮ ದೇಹದ ಬಗೆಗಿನ ಕಾಳಜಿ. ಆಸಕ್ತಿ. ದೇಹದ ರಕ್ಷಣೆಯ ಚಿಂತೆ. ಮುದ್ದಿನಲ್ಲಿ ಬೆಳೆದ ಮನೆ ಮಕ್ಕಳು ಆಂತರಿಕವಾಗಿ ದುರ್ಬಲರೇ ಆಗುವಂತೆ ದೇಹವು ಕೂಡ ಪ್ರಜ್ಞೆಯ ಈ ಭಾರವನ್ನು ಹೊತ್ತು ದುರ್ಬಲವಾಗಿಬಿಡುತ್ತದೆ. ದುರ್ಬಲವಾಗಿ ಬಿಟ್ಟಿದೆ. ತನ್ನ ಪೂರ್ಣ ಶಕ್ತಿ ಪ್ರಕಟವಾಗಲು ಅದು ಕ್ರೈಸಿಸ್‌ನಂಥ ಒಂದು ಸಂದರ್ಭವನ್ನು ಕಾಯುತ್ತಿದೆ ಎಂದು ಭಾವಿಸಿದರೂ ತಪ್ಪಿಲ್ಲ.

ಏಕೆಂದರೆ, ಇಂಥ ಕ್ರೈಸಿಸ್‌ನ ಸಂದರ್ಭದಲ್ಲಿ ಜೀವನದ ಒಳಮುಖವೊಂದು ಪ್ರಜ್ಞೆಗೆ ಗುರುತಾಗಿರುತ್ತದೆ. ಆ ಮುಖವೆಂದರೆ ತನ್ನ ಅರಿವಿನಲ್ಲಿ ತಾನು ತನಗೇ ದುರ್ಬಲವಾಗಿ ಕಂಡು, ತನ್ನನ್ನು ತಾನು ಮರೆತಾಗ ತನ್ನ ನಿಜವಾದ ಶಕ್ತಿಯ ಪ್ರಕಟಗೊಳ್ಳುವ ಅಚ್ಚರಿಯ ಮುಖ. ಅರಿವೆಂದರೆ ನಮ್ಮ ಪ್ರಜ್ಞಾಪೂರ್ವಕವಾದ ಚಟುವಟಿಕೆಗಳ ಹಿನ್ನೆಲೆ. ಇಲ್ಲಿ ಯಾವಾಗಲೂ ಒಂದಲ್ಲ ಒಂದು ಬಗೆಯ ದ್ವಂದ್ವವಿರುತ್ತದೆ. ಆದುದರಿಂದಲೇ ಈ ನೆಲೆ ದುರ್ಬಲ. ಮರೆವೆಂದರೆ ಅಪ್ರಜ್ಞೆಯ ಕೆಲಸವು ತೊಡಗುವುದಕ್ಕೆ ಅನುಕೂಲವಾದ ಹೊತ್ತು. ಇಲ್ಲಿ ದ್ವಂದ್ವವಿಲ್ಲ. ಆದುದರಿಂದಲೇ ಈ ನೆಲೆ ಪ್ರಬಲ. ಬದುಕಿನ ನಿಜ ಹೀಗಿರುವಲ್ಲಿ, ನಾವು ಪ್ರಜ್ಞಾಪೂರ್ವಕತೆಯನ್ನು ವೈಭವಿಸಿ ಬದುಕುವಲ್ಲಿನ ದುರಂತ ನಮ್ಮ ಗ್ರಹಿಕೆಗೆ ಬರಬೇಕು. ಗ್ರಹಿಸಲಾದರೆ ಇದನ್ನೇ 'ದುರಂತ ಪ್ರಜ್ಞೆ' ಎನ್ನುವುದು. ಇದು ಕ್ರೈಸಿಸ್‌ನ ಸಂದರ್ಭದ ಕೊಡುಗೆ.

ಸಮಸ್ಯೆಗಳೂ ಇವೆ. ನಮ್ಮನ್ನು ನಾವು ಕಳೆದುಕೊಳ್ಳುವುದಕ್ಕೆ ಸಿದ್ಧರಾದಾಗ ಪ್ರಕಟಗೊಳ್ಳುವ ಆಂತರಿಕ ಶಕ್ತಿಯ ಬಗ್ಗೆ ಎಲ್ಲರಿಗೂ ಗೊತ್ತು. ಮತ್ತು ಎಲ್ಲರಿಗೂ ಆ ಬಗ್ಗೆ ಕುತೂಹಲ. ಈ ಶಕ್ತಿಯನ್ನು ಪ್ರಜ್ಞಾಪೂರ್ವಕವಾಗಿ ಟ್ಯಾಪ್ ಮಾಡುವುದು ಹೇಗೆ ಎಂದು; ತಮ್ಮ ಉದ್ದೇಶಗಳಿಗೆ ಬಳಸಿಕೊಳ್ಳುವುದು ಹೇಗೆ ಎಂದು. ಎಲ್ಲರಿಗೂ ಶಕ್ತಿಯನ್ನು ವಶಪಡಿಸಿಕೊಳ್ಳಬೇಕು ಎಂಬುದೇ ಒಂದು ಯೋಚನೆಯಲ್ಲವೇ? ಈ ಯೋಚನೆಯ ಫಲವಾಗಿ ಹಾಗೆ ತಮ್ಮ ಸಿದ್ಧಾಂತಗಳಿಗಾಗಿ, ಮತಧರ್ಮಗಳಿಗಾಗಿ, ಜಾತಿ ಪಂಥಗಳಿಗಾಗಿ, ದೇಶ ಜನಾಂಗಗಳಿಗಾಗಿ, ತಮ್ಮನ್ನೇ ತಾವು ಒಪ್ಪಿಸಿಕೊಳ್ಳುವಂತೆ-ತಮ್ಮನ್ನು ಕಳೆದುಕೊಳ್ಳಲು ಸಿದ್ಧರಾಗುವಂತೆ-ಬಲಿದಾನಗೊಳ್ಳುವಂತೆ-ಅದೇ ನಿಜವಾದ ಬದುಕೆಂಬಂತೆ- ಮನಸ್ಸುಗಳನ್ನು indoctrination ಮಾಡುವ ಸೂಕ್ಷ್ಮಾತಿಸೂಕ್ಷ್ಮ ಪ್ರಯತ್ನಗಳು ಚರಿತ್ರೆಯುದ್ದಕ್ಕೆ ನಡೆದಿದೆಯಲ್ಲವೇ? ಇದರಿಂದ ಏನಾಯಿತು? ವ್ಯಕ್ತಿಗಳಲ್ಲಿ ಹುದುಗಿರುವ ಆಂತರಿಕ ಶಕ್ತಿಗಳು ಪ್ರಕಟವಾಗಿರಬಹುದು. ಆದರೆ ಶಾಂತಿ ನೆಲೆಸಿದೆಯೇ? ಧರ್ಮಗಳ- ಸಿದ್ಧಾಂತಗಳ- ದೇಶಗಳ-ಜನಾಂಗಗಳ ನಡುವಣ ವಿದ್ವೇಷ ಕಳೆದುಹೋಗಿದೆಯೇ? ಒಂದು ಯುದ್ಧ ಇನ್ನೊಂದು ಯುದ್ಧವನ್ನು ಸೃಷ್ಟಿಸಿತು. ಶಾಂತಿಯನ್ನಲ್ಲ. ಒಂದು ಕ್ರೈಸಿಸ್ ಇನ್ನೊಂದು ಕ್ರೈಸಿಸ್ಸನ್ನು ಸೃಷ್ಟಿಸುವಂತೆ ಅನಿಸುತ್ತಿದೆ. ಅಷ್ಟೇಕೆ? ಈಗಿನ ಈ ಕೊರೋನಾ ಮಾರಿಯನ್ನು ಚೀನಾ ದೇಶದ ವಿಜ್ಞಾನಿಗಳು ತಮ್ಮ ಸರಕಾರದ ಆಜ್ಞೆಯಂತೆ ಕೃತಕವಾಗಿ ಸೃಷ್ಟಿಸಿ ಮೃತ್ಯು ಕಂಟಕವನ್ನು ಹಬ್ಬಿಸಿದ್ದಾರೆ ಎನ್ನುವ ಮಾತು ಕೂಡ ಕೇಳಿ ಬರುತ್ತಿದೆ. ನಿಜ ಯಾರಿಗೆ ಗೊತ್ತು? ಇದುವೇ ನಿಜವಾದ ಕ್ರೈಸಿಸ್ ಇರಬಹುದು!

ಹಾಗಾದರೆ ಏನು ದಾರಿ? ಹೇಗೆ ಬಿಡುಗಡೆ? ನಮ್ಮೊಳಗಿನ ಶಕ್ತಿಯು ಪ್ರಕಟವಾಗಬೇಕೆನ್ನುವುದು ನಿಜ. ಅದು ಒಂದು ಕ್ರೈಸಿಸ್ ಎದುರಾದಾಗ ಪ್ರಕಟವಾಗುವುದು ಎನ್ನುವುದೂ ನಿಜ. ಪ್ರಜ್ಞಾಪೂರ್ವಕವಾಗಿ ಅದು ಸಂಭವಿಸುವುದಿಲ್ಲ ಎಂದೊಪ್ಪಿದರೂ ಅಲ್ಲಿಯೂ ಒಂದು ಮಟ್ಟದಲ್ಲಿ ಪ್ರಜ್ಞಾಪೂರ್ವಕತೆ ಇದ್ದೇ ಇದೆ. ನಮ್ಮ ಮನೆಗೆ ಬೆಂಕಿ ಬಿದ್ದರೆ ಧಿಗ್ಗನೆ ಎಲ್ಲ ಮರೆತು ಮೇಲೇಳುವೆವು. ನೆರೆಮನೆಗೆ ಬಿದ್ದಾಗ? ಅತ್ಯಾಪ್ತರ ಸಂಕಟದಲ್ಲಿ ನಾವು ಸಂಕಟವನ್ನನುಭವಿಸುವೆವು. ಆದರೆ ಇತರರ ಸಂಕಟದಲ್ಲಿ? ಇಲ್ಲಿ ಎಲ್ಲೆಲ್ಲೂ ಪ್ರಜ್ಞಾಪೂರ್ವಕತೆ ಸೂಕ್ಷ್ಮವಾಗಿಯಾದರೂ ಇದ್ದೇ ಇದೆ. ಕ್ರೈಸಿಸ್ಸಿಗೆ ಸ್ಪಂದಿಸುವಲ್ಲಿಯೂ ನಮಗೆ ನಮ್ಮದೇ ಆಯ್ಕೆಗಳಿವೆ. ಆಯ್ಕೆಗಳು ಇದ್ದಾಗಲೂ ಸ್ಪಂದಿಸುವಲ್ಲಿ ನಮಗೆ ನಮ್ಮದೇ ಶಕ್ತಿಯ ಗುರುತಾಗುವುದು ನಿಜವೇ. ಆದರೆ ಹಾಗೆ ಸ್ಪಂದಿಸಿಯೂ -ಎಲ್ಲ ಮುಗಿದ ಮೇಲೆ-ಈ ಕ್ರೈಸಿಸ್‌ನ ಕಾಲ ಕಳೆದ ಮೇಲೆ-ನಾವು ಮರಳಿ ಮೊದಲಿನಂತೆಯೇ ಆಗುವೆವು. ಅದೇ ಸ್ವಾರ್ಥಸಾಧನೆ. ಅವೇ ಕ್ಷುಲ್ಲಕ ಅರ್ಥಹೀನ ಜಗಳಗಳು. ಅದೇ ಮೇಲಾಟ. ಅಂದರೆ ಕ್ರೈಸಿಸ್ ಕೂಡ ನಮಗೆ ಅಭ್ಯಾಸವಾಗಿಬಿಟ್ಟಿತು!

ನಮ್ಮ ಇದುವರೆಗಿನ ತಿಳುವಳಿಕೆಯಲ್ಲಿ ತಪ್ಪಾಗಿದೆ ಎಂದು ನಿಜವಾಗಿ ಅನ್ನಿಸುವುದೇ -ನಿಜವಾದ ಕ್ರೈಸಿಸಿನ ಅನುಭವ! ನಮಗೊಂದು ವ್ಯಕ್ತಿತ್ವ ಇದೆ; ಅದು ಎಲ್ಲರಿಂದ ಪ್ರತ್ಯೇಕವಾಗಿದೆ; ತೀರಾ ವೈಯಕ್ತಿಕವಾದ, ನಮ್ಮದೇ ಆದ, individuality ಎಂದು ಕರೆಯುವ, ಸಂಭ್ರಮಿಸಬೇಕಾದ ವ್ಯಕ್ತಿತ್ವ ಇದೆ ಎಂಬ ಭಾವನೆಯಲ್ಲಿ ಬೆಳೆದೆವು. ಲೋಕವು ನಮ್ಮ ವೈಯಕ್ತಿಕತೆಯನ್ನು ಮಾನ್ಯ ಮಾಡಬೇಕೆಂದು ಬಗೆದೆವು. ಅದಕ್ಕಾಗಿ ಬಗೆಬಗೆಯ ಚಟುವಟಿಕೆಗಳನ್ನು ನಡೆಸಿದೆವು. ನಡೆಸುತ್ತಲೇ ಇದ್ದೇವೆ. ಲೋಕದ ಮೆಚ್ಚುಗೆಗಾಗಿ. ಜೊತೆಗೆ ನಮ್ಮ ವೈಯಕ್ತಿಕತೆಯನ್ನು ಲೋಕವು ಕಬಳಿಸುತ್ತಿದೆ ಎಂದು ಕೂಡ ಚಿಂತಾಕ್ರಾಂತರಾದೆವು. ಈ ಚಿಂತೆಯನ್ನು ತೋಡಿಕೊಳ್ಳುವುದೇ ಒಂದು ಸಾಧನೆ - ಬೇರೇನು ಮಾಡದಿದ್ದರೂ- ತೋಡಿಕೊಳ್ಳುವಲ್ಲಿಯೇ ವೈಯಕ್ತಿಕತೆಯನ್ನು ಸ್ಥಾಪಿಸಿದಂತೆ ಆಗುತ್ತದೆ ಎಂದು ಬಗೆದೆವು. 'ಸಮಾಜ ಭೈರವ' ಎಂದೆವು!

ನಮ್ಮಲ್ಲಿ ವೈಯಕ್ತಿಕತೆ ಇರುವುದು ನಿಜ. ಆದರೆ ಅದು ಕಳೆದುಕೊಳ್ಳುವುದಕ್ಕಾಗಿ, ಮೀರುವುದಕ್ಕಾಗಿ, ಶೋಧಿಸುವುದಕ್ಕಾಗಿ ಇದೆ ಎಂದು ಗಮನಿಸಲಾರದೆ ಹೋದೆವು. ಅದು ಕಾಪಾಡಿಕೊಳ್ಳಬೇಕಾದ್ದು ಎಂಬ ತಪ್ಪು ತಿಳುವಳಿಕೆಯೇ ಇದಕ್ಕೆ ಕಾರಣ. ಈ ವೈಯಕ್ತಿಕತೆಯಿಂದಾಗಿಯೇ ನಮ್ಮ ಸ್ಪಂದಿಸುವ ಶಕ್ತಿಯೇ ಮೊಟಕಾಗಿ ಹೋಯಿತು. ವಿಕಾರವಾಗಿ ಹೋಯಿತು ಎಂಬುದನ್ನೂ ನಮಗೆ ಗುರುತಿಸಲಾಗಲಿಲ್ಲ. ಅಂದರೆ

(೧೧ನೇ ಪುಟಕ್ಕೆ



'ಈ ಅಭಿವೃದ್ಧಿ ಇನ್ನು ಸಾಕು': ಒಂದು ಚರ್ಚೆ

"…..ಆದುದರಿಂದ 'ಅಭಿವೃದ್ಧಿ' ಕುರಿತಂತೆ ನಾವಿಂದು ಆಮೂಲಾಗ್ರವಾಗಿ ಪುನರಾಲೋಚಿಸುವ ಅಗತ್ಯವಿದೆ. ಅತಿಗೆ ಹೋಗಿ ಹೇಳುವುದಾದರೆ, 'ಅಭಿವೃದ್ಧಿ ಇನ್ನು ಸಾಕು' ಎಂಬ ದಿಟ್ಟ ಪ್ರಣಾಳಿಕೆಯ ಆಧಾರದ ಮೇಲೇ ಸಮಾಜವಾದವಿಂದು ತನ್ನ ಹೋರಾಟವನ್ನು ಆರಂಭಿಸಬೇಕಿದೆ. ಈವರೆಗಿನ 'ಊರ್ಧ್ವ' ಅಭಿವೃದ್ಧಿಯು 'ಅಗಲ'ವಾಗಿ ಹರಡಿಕೊಳ್ಳುವ ವಿವೇಕ ಕಂಡುಕೊಳ್ಳುವವರೆಗೆ, 'ಊರಿನ ಮರ ಕಡಿದು ಮನೆಗೆ ಹವಾ ನಿಯಂತ್ರಕವನ್ನು ಹಾಕಿಸಿಕೊಳ್ಳುವ' ವಿಕ್ಷಿಪ್ತ ಅಭಿವೃದ್ಧಿಗೆ ಸಾಕು ಎಂದು ಹೇಳುವ ಧೈರ್ಯವನ್ನು ಸಮಾಜವಾದ ಸಂಘಟಿಸಿಕೊಳ್ಳಬೇಕಿದೆ. ಲೋಹಿಯಾ ಪ್ರತಿಪಾದಿಸಿದ ಸರಳ-ಸಭ್ಯ ಜೀವನ ಮಟ್ಟದ ಕಾರ್ಯಶೀಲ 'ಮಾದರಿ'ಗಳನ್ನು ಸಮಕಾಲೀನ ಜೀವನದ ಮಟ್ಟಿಗೆ ಅಸಂಗತವೂ, ಅವ್ಯವಹಾರಿಕವೂ ಅನ್ನಿಸದ ರೀತಿಯಲ್ಲಿ ನಿರೂಪಿಸಿ ಪ್ರಚಾರ ಮಾಡುವುದೇ, ಸಮಾಜವಾದಿ ಚಳುವಳಿಯ ಸದ್ಯದ ಧರ್ಮವಾಗಬೇಕಿದೆ…"

ಇವು ೨೦೦೭ರ ಜುಲೈ ಒಂದರಂದು ಮೈಸೂರಿನ ಕಲಾಮಂದಿರದಲ್ಲಿ ದಿವಂಗತ ಕೆ. ರಾಮದಾಸ್‌ಅವರ ನೆನಪಿನ ಕಾರ್ಯಕ್ರಮದ ಭಾಗವಾಗಿ ಆಯೋಜಿಸಲಾಗಿದ್ದ ವಿಚಾರಗೋಷ್ಠಿಯಲ್ಲಿ ನಾನು ನೀಡಿದ ಉಪನ್ಯಾಸದ ಕೊನೆ ಮಾತುಗಳು. ಈ ಮಾತುಗಳನ್ನಾಡಿ ನಾನು ವೇದಿಕೆಯಿಂದ ಕೆಳಗಿಳಿದು ಬರುತ್ತಿದ್ದಂತೆ ನನ್ನ ಸಮಾಜವಾದಿ ಗೆಳೆಯರೊಬ್ಬರು "ಅಂತೂ ನೀನು ಸಮಾಜವಾದವನ್ನು ಮುಗಿಸಿಯೇ ತೀರುವ ಶಪಥ ಮಾಡಿದಂತಿದೆ!" ಎಂದು ವ್ಯಂಗ್ಯವಾಡಿದ್ದರು. ಅವರು ರಾಮದಾಸ್‌ರಂತೆಯೇ ಪ್ರಖರ ವಿಚಾರವಾದಿ; ಸಾಲ ಮಾಡಿಯಾದರೂ ತುಪ್ಪ ತಿನ್ನಬೇಕೆಂದು ನಂಬಿದ್ದ ಚಾರ್ವಾಕವಾದಿ, ಸಮಾಜವಾದ ಎಂದರೇ ಜನರ ಸುಖ-ಸೌಲಭ್ಯಗಳನ್ನು ಹೆಚ್ಚಿಸುವುದು ಎಂದು ನಂಬಿ ಅದರಂತೆ ಬದುಕುತ್ತಿದ್ದವರು ಅವರು, ನಾನು ಅವರ ಮಾತಿಗೆ ನಕ್ಕು, "ಮುಗಿಸಲು ನೀವೆಲ್ಲಿ ಅದನ್ನು ಉಳಿಸಿಟ್ಟಿದ್ದೀರಿ! ನಾನು ಮಾತಾಡಿದ್ದು ಅದನ್ನು ಈಗ ನಮಗಾಗಿ ಪುನರನ್ವೇಷಿಸಿಕೊಳ್ಳುವ ಅಗತ್ಯ ಮತ್ತು ಬಗೆಯ ಬಗ್ಗೆ!' ಎಂದು ಉತ್ತರಿಸಿ ಮುಂದೆ ನಡೆದಿದ್ದೆ.

ಇದನ್ನು ಇಲ್ಲಿ ಈಗ ಏಕೆ ಹೇಳುತ್ತಿರುವೆನೆಂದರೆ ಆ ಅದೇ ಗೆಳೆಯ ಮೊನ್ನೆ ಪತ್ರಿಕೆಯ ಕಳೆದ ಸಂಚಿಕೆಯ ಸಂಪಾದಕೀಯವನ್ನು ಓದಿ ಮೆಚ್ಚಿ ಮಾತನಾಡಿತ್ತಾ "ಹೌದು ಕಣೋ, ಅಭಿವೃದ್ಧಿ ಸಾಕು. ಅದನ್ನು ನಿಲ್ಲಿಸಲು ನಾವು ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ" ಎಂದ. ಜೊತೆಗೆ ಕರೋನಾದಿಂದ ತನ್ನ ಹಲವು ಬಂಧುಗಳು ಮತ್ತು ಗೆಳೆಯರು ಸಾವನ್ನಪ್ಪಿರುವ ಬಗ್ಗೆ ತನ್ನ ದುಃಖವನ್ನೂ ತೋಡಿಕೊಂಡ. ನನಗೆ ಈತನನ್ನು ನನ್ನ ಸಂಪಾದಕೀಯ ಮಾತ್ರವಲ್ಲ ಅವನ ಈ ಆಪ್ತರ ಸಾವಿನ ಸರಮಾಲೆಯೂ ಕಾಡಿ ಈ ಮಾತುಗಳನ್ನಾಡಿಸಿದೆ ಎಂಬುದು ಗೊತ್ತಾಯಿತು. ಜೊತೆಗೆ ಅವನಿಗೆ ಈಗ ವಯಸ್ಸು ಬೇರೆ ಹದಿನಾಲ್ಕು ವರ್ಷ ಹೆ ಚ್ಚಾಗಿತ್ತು!

ಆದರೂ ಈ ನನ್ನ ಗೆಳೆಯನ ಮಾತುಗಳು ಬರೀ ಸದ್ಯದ ದುಃಖದಿಂದ ಭಾವುಕವಾಗಿ ಹೊಮ್ಮಿದವುಗಳೋ ಅಥವಾ ಅವುಗಳಿಂದ ಹಿಂದೆ ಏನಾದರೂ ಒಂದಿಷ್ಟು ಆಳದ ತಿಳುವಳಿಕೆ ಉಂಟಾಗಿದೆಯೋ ಎಂದು ತಿಳಿಯಲು ಮಾತು ಮುಂದುವರೆಸಿದೆ: "ಇದ್ದಕ್ಕಿದ್ದಂತೆ ಏನೀ ಮನಃಪರಿವರ್ತನೆ ಸಾರ್? ಹತ್ತಿರದವರು ಅಗಲಿದ ದುಃಖ ಇದಕ್ಕೆ ಕಾರಣವೇ?"

ಆ ಕಡೆಯಿಂದ ಮೆಲ್ಲನೆಯ ದನಿಯಲ್ಲಿ ಉತ್ತರ ಬಂತು: "ಕಾರಣವೂ ಹೌದು, ಪಾಠವೂ ಹೌದು"

"ಪಾಠ ಏನು? ಹೇಗೆ?"

"ನೀನೇ ಬರೆದ್ದೀಯಲ್ಲಪ್ಪಾ, ಇದನ್ನೆಲ್ಲ?"

"ನಮ್ಮಂಥವರು ಬರೆಯುತ್ತಲೇ ಇರುತ್ತಾರೆ. ನಿಮ್ಮಂಥವರು ಸುಮ್ಮನೆ ಓದುತ್ತಲೇ ಇರುತ್ತಾರೆ. ಆದರೆ ಇದನ್ನೆಲ್ಲ ಪುರಾಣ ಎಂದು ವ್ಯಂಗ್ಯವಾಡುತ್ತಿದ್ದ ನೀನು ಈಗ ದಿಢೀರನೆ ಒಪ್ಪಲು ಏನು ಕಾರಣ ಎಂಬ ಕುತೂಹಲ ನನ್ನದು!"

"ಏನಿಲ್ಲ. ಈ ಜನ ಹೀಗೆ ಒಂದೇ ಸಮನೆ ಜನಸಂದಣಿ ಮಾಡಿಕೊಂಡು ತಿರುಗಾಡುತ್ತಿರುವುದರಿಂದಲೇ ಅಲ್ಲವೆ, ಎಲ್ಲೋ ಇದ್ದ ರೋಗಾಣು ಸಾಂಕ್ರಾಮಿಕವಾಗಿ ಹರಡಿ ಹೀಗೆ ನಮ್ಮನ್ನು ಅಮರಿಕೊಂಡಿರುವುದು? ಹೀಗೆ ಜನ ಜಾಗದಿಂದ ಜಾಗಕ್ಕೆ, ಊರಿಂದ ಊರಿಗೆ, ದೇಶದಿಂದ ದೇಶಕ್ಕೆ ಏಕೆ ತಾರಾಡುತ್ತಾರೆ ಹೇಳು? ಮುಖ್ಯವಾಗಿ ಕೊಳ್ಳಲು, ಮಾರಲು. ಈ ಕೊಳ್ಳುವ-ಮಾರುವ ವ್ಯವಹಾರ ಈಗ ಬರೀ ಸರಕಿನ ವ್ಯವಹಾರವಾಗಿ ಉಳಿದಿಲ್ಲವಲ್ಲ? ಅದು ಸೇವೆ ಎಂಬ ರೂಪದಲ್ಲೂ ಅವತರಿಸಿದೆಯಲ್ಲ? ಹೊಟೇಲು, ವಿಹಾರ, ಪ್ರವಾಸ, ಮದುವೆ, ನಾಮಕರಣ, ತಿಥಿ, ಶಿಕ್ಷಣ, ಉದ್ಯೋಗ, ರೋಗ ಚಿಕಿತ್ಸೆ ಹೀಗೆ ಎಲ್ಲವೂ ವ್ಯಾಪಾರವಾಗಿ, ಕೊಳ್ಳುಬಾಕ ಸಂಸ್ಕೃತಿಯ ಭಾಗವಾಗಿಬಿಟ್ಟಿದೆಯಲ್ಲ? ಇದೇ ನಮ್ಮ ಆರ್ಥಿಕ ಚಕ್ರ ಸದಾ ತಿರುಗಲು ಇಂಧನ ಒದಗಿಸಿ ನಮ್ಮ ಜಿಡಿಪಿಯನ್ನು ಏರಿಸಿ ದೇಶ ಮುಂದುವರೆಯುತ್ತಿದೆ, ಬಲಿಷ್ಠವಾಗುತ್ತಿದೆ ಎಂದು ಸೂಚಿಸುವುದು ಅಲ್ಲವಾ? ಇದನ್ನು ಪ್ರೋತ್ಸಾಹಿಸುವಂತಹ ಮೂಲಭೂತ ಸೌಕರ್ಯಗಳೆಂಬ ಹೆಸರಿನಲ್ಲಿ ತಾನೇ ಇವೊತ್ತು 'ಅಭಿವೃದ್ಧಿ' ಎಂಬುದು ನಡೆದಿರುವುದು? ಅದಕ್ಕಾಗಿ ತಾನೇ ಭೂಮಿ ಬಗೆಯುವುದು, ನೀರು ಗಾಳಿಗಳನ್ನು ರಸಾಯನೀಕರಿಸುವುದು, ಅರಣ್ಯಗಳನ್ನು ಕಡಿಯುವ ಕೆಲಸ ನಡೆದಿರುವುದು?"

ಇದನ್ನೆಲ್ಲ ಗೆಳೆಯ ಒಂದೇ ಏಟಿಗೆ ಹೀಗೆ ವ್ಯವಸ್ಥಿತವಾಗೇನೂ ಹೇಳಲಿಲ್ಲ. ಆದರೆ ಅವನ ತರ್ಕಸರಣಿ ಮಾತ್ರ ಹೀಗಿತ್ತು. ಆತ ಮಾತಿನ ಮಧ್ಯೆ ಇತ್ತೀಚೆಗೆ ತನ್ನ ಅಂತಃಕರಣವನ್ನು ಮುಟ್ಟಿದ, ತಾನು ಕಣ್ಣಾರೆ ಕಂಡ ಒಂದು ಘಟನೆಯನ್ನು ಹೇಳಿದ: "ಮೂರು ತಿಂಗಳ ಹಿಂದೆ ನಮ್ಮೂರಿನಲ್ಲಿ ಹೊಸ ದೇವಸ್ಥಾನ ಕಟ್ಟಲು ಊರಾಚೆಯ ಒಂದು ಹಳೆಯ ದೊಡ್ಡ ಮರ ಉರುಳಿಸಿದರು ಕಣೋ. ದೇವಸ್ಥಾನ ಕಟ್ಟಲು ಎಂದರೆ ಯಾರು ಬೇಡ ಎನ್ನುವ ಧೈರ್ಯ ಮಾಡುವರು? ನನಗೆ ಹಿಂದೆ ಪರಿಸರವಾದಿಗಳು ಬರೆದಿದ್ದ ಒಂದು ಲೇಖನ ನೆನಪಿಗೆ ಬಂದು, ಈ ಮರ ಉತ್ಪಾದಿಸುತ್ತಿದ್ದ ಆಮ್ಲಜನಕದ ಬೆಲೆಯೆಷ್ಟು ಎಂದು ಲೆಕ್ಕ ಹಾಕತೊಡಗಿದೆ. ಆದರೆ ಆ ಲೆಕ್ಕಾಚಾರಕ್ಕೆ ತಡೆಯೊಡ್ಡಿದ್ದು, ಆ ಮರ ನೆಲಕ್ಕುರುಳಿ ಗೂಡು-ಮರಿಗಳನ್ನು ಕಳೆದುಕೊಂಡ ಪಕ್ಷಿಗಳ ಆಕ್ರಂದನದ ಎದೆ ಹಿಂಡುವ ಗದ್ದಲ. ಅದು ನನ್ನನ್ನು ಮರ ಬಿದ್ದೆಡೆಗೆ ಒಯ್ದು ಮತ್ತಷ್ಟು ಯೋಚಿಸುವಂತೆ ಮಾಡಿತು. ಈ ಮರದ ನಾಶ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇನ್ನೆಷ್ಟು ಪಶು ಪಕ್ಷಿ ಪ್ರಾಣಿ ಕ್ರಿಮಿ ಕೀಟ, ಇರುವೆ-ಗೊದ್ದ, ಕೋತಿ, ಓತಿ, ಹಲ್ಲಿ, ಹಾವು, ಬಾವಲಿ ಇತ್ಯಾದಿ ಜೀವ ಜಂತುಗಳ ಬದುಕನ್ನು ಅಸ್ತವ್ಯಸ್ತಗೊಳಿಸಿರಬಹುದು? ನಾಶ ಮಾಡಿರಬಹುದು? ಬಿರು ಬಿಸಿಲಿನಲ್ಲಿ ದನಕರು ನಾಯಿ ಹಂದಿಗಳು ಇದರ ನೆರಳಲ್ಲಿ ಬಂದು ಮಲಗಿ ಸುಧಾರಿಸಿಕೊಂಡು ಹೋಗುತ್ತಿದ್ದುದನ್ನು ನಾನೇ ನೋಡಿದ್ದೇನೆ. ನಮಗೇ ಹೀಗಾಗಿದ್ದರೆ ನಾವೇನು ಮಾಡುತ್ತಿದ್ದೆವು? ಗೋಳಾಡುತ್ತಿರಲಿಲ್ಲವೆ? ಹೀಗೇ, ಅದು ನಮ್ಮ ಕಿವಿ ಕಣ್ಣುಗಳಿಗೆ ತಾಕದಿದ್ದರೇನು, ಈ ಅನಾಥ ಅಸಹಾಯಕ ಜೀವ ಸಂಕುಲವೂ ಗೋಳಿಡುವುದಿಲ್ಲವೆ? ಆ ಗೋಳಿನ ಭಾವ ತರಂಗಗಳು ಎಲ್ಲಿಗಾದರೂ ಹೋಗಿ ತಾಗಬೇಕಲ್ಲವೆ? ಇದನ್ನು ನಾವು ಮನುಷ್ಯ ಭಾಷೆಯಲ್ಲಿ ಶಾಪವೆನ್ನುತ್ತೇವೆ. ಇಂತಹ ಅಸಂಖ್ಯಾತ ಶಾಪಗಳಿಗೆ ಕಾರಣವಾಗಿರಬಹುದಾದ ಎಷ್ಟು ಕೆಲಸಗಳನ್ನು ನಾವು 'ಅಭಿವೃದ್ಧಿ'ಯ ಹೆಸರಿನಲ್ಲಿ ಮಾಡಿಲ್ಲ? ಕರೋನಾ ಇಂತಹ ಹಲವು ಶಾಪಗಳ ಅಲೆಯುಬ್ಬರವೇ ಆಗಿರಬಹುದಲ್ಲವಾ?"

ನಾನು ಸುಸ್ತಾಗಿದ್ದೆ, "ಆಯಿತು, ನಿನಗೆ ಅರ್ಥವಾಗಿದೆ, ನನಗೂ ಬಹು ಚೆನ್ನಾಗಿ ಅರ್ಥ ಮಾಡಿಸಿರುವೆ" ಎನ್ನುತ್ತಾ ಮನಸ್ಸು ತುಂಬಿ ಬಂದು ಭಾರವಾದಂತಾಗಿ ಮಾತು ನಿಲ್ಲಿಸಿದೆ. ಅಂತಃಕರಣ ಮುಟ್ಟದ ಯಾವ ದುರಂತವೂ ಮನುಷ್ಯನನ್ನು ನಿಜಾರ್ಥದಲ್ಲಿ ಯೋಚನೆಗೆ ಹಚ್ಚಲಾರದು, ಬದಲಾಯಿಸಲಾರದು ಎನ್ನಿಸಿತು. ಸ್ವಾರ್ಥದಿಂದ ಮುಚ್ಚಿಹೋಗಿರುವ ನಮ್ಮ ಅಂತಃಕರಣಗಳನ್ನು ಮತ್ತೆ ತೆರೆಯಲೆಂದೇ ಕರೋನಾ ಬಂದಿದೆಯೇ?

ಈ ಹಿನ್ನೆಲೆಯಲ್ಲೇ ಪತ್ರಿಕೆ ಆಯ್ದ ಏಳೆಂಟು ಜನರಿಗೆ ಪತ್ರ ಬರೆದು, 'ಈ ಅಭಿವೃದ್ಧಿ ಇನ್ನು ಸಾಕು' ಎಂಬ ಘೋಷ ವಾಕ್ಯಕ್ಕೆ, ಸಾಂಕೇತಿಕ ಮಟ್ಟದ್ದಾದರೂ ಒಂದು ಜನಾಂದೋಲನಕ್ಕೆ ಇದು ಸಕಾಲವೆ? ಎಂದು ತಿಳಿಯಲು ಯತ್ನಿಸಿತು. ಇವರಲ್ಲಿ ಐದು ಜನ ಇಲ್ಲಿ ತಮ್ಮ ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಮಿಕ್ಕಂತೆ, ನಮ್ಮ ಜನ ಇನ್ನೂ ಅಭಿವೃದ್ಧಿ ಎಂಬ ಶಬ್ದದ ಎಂತಹ ಮಾಯಾಜಾಲದಲ್ಲಿ ಸಿಲುಕಿಕೊಂಡಿದ್ದಾರೆಂದರೆ, ಅವರಿಗೆ ನಮ್ಮ 'ಈ ಅಭಿವೃದ್ಧಿ' ಎಂಬ ಮಾತಿನಲ್ಲಿನ 'ಈ' ಎಂಬ ಅಕ್ಷರವೇ ಕಾಣದೇ ಹೋಗಿ ಕೆಲವರು 'ಅಯ್ಯೋ! ಅಭಿವೃದ್ಧಿಯ ಫಲ ಇನ್ನೂ ನಮ್ಮ ಜನರ ಬಹುಭಾಗಕ್ಕೆ ತಲುಪಿಯೇ ಇಲ್ಲದಿದ್ದಾಗ ಇದೆಂತಹ ಮಾತಾಡುತ್ತೀರಿ!!" ಎಂಬ ಜನಪ್ರಿಯ ಮತ್ತು ಸುಲಭ ಜನಪರ ಬೋಧನೆಗೆ ತೊಡಗಿದರೆ, ಇನ್ನು ಕೆಲವರು "ಇದಕ್ಕಿನ್ನೂ ಸಾಕಷ್ಟು ಕ್ಷೇತ್ರ ಕಾರ್ಯ ಮಾಡಿ ಕಾಯಬೇಕಿದೆ" ಎಂಬ ವಿವೇಕ-ಸಂಯಮಗಳ ಪಾಠ ಹೇಳಿದ್ದಾರೆ. ಆದರೆ ಜನರಿಗೆ ಕುಡಿಯುವ ನೀರು ಒದಗಿಸುವ, ಚರಂಡಿ, ಶಾಲೆ –ಆಸ್ಪತ್ರೆ ಕಟ್ಟಿಸುವ, ರಸ್ತೆ ಮಾಡುವ, ಹಸಿದವರಿಗೆ ಆಹಾರ ಒದಗಿಸುವ, ಸೂರಿಲ್ಲದವರಿಗೆ ವಸತಿ ಒದಗಿಸುವ, ಊರಿನ ಕೆರೆ ಕಟ್ಟೆ ದುರಸ್ತಿ ಮಾಡುವ ಕೆಲಸಗಳನ್ನು ಇಂದು ಯಾರು 'ಅಭಿವೃದ್ಧಿ' ಎಂದು ಕರೆಯುತ್ತಾರೆ? 'ಇನ್ನು ಈ ಅಭಿವೃದ್ಧಿ ಸಾಕು' ಎನ್ನುವವರು ಮನುಷ್ಯನ ಮೂಲಭೂತ ಅಗತ್ಯಗಳನ್ನು ಮೀರಿದ ಸುಖ-ಸೌಲಭ್ಯಗಳ ಆಯ್ಕೆಗೆ, ಜಡ-ಚೇತನಗಳೆಂಬ ಭೇದವಿಲ್ಲದೆ ಸಕಲ ಸೃಷ್ಟಿಯನ್ನು ದೃಷ್ಟಿಯಲ್ಲಿಟ್ಟುಕೊಂಡ; ''ಬದುಕಿ, ಬದುಕಗೊಡುವ' ಅರಿವಿನ ಒಂದು ಮಾನದಂಡ ಅಗತ್ಯವೆಂದಷ್ಟೇ ಹೇಳುತ್ತಿರುವುದು ಎಂದು ಇವರಿಗೇಕೆ ತಿಳಿಯುವುದಿಲ್ಲ? ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು? ನಾವು ಪ್ರತಿಕ್ರಿಯೆಗಾಗಿ ಆಯ್ದ ಕೆಲ ಓದುಗರಿಗೆ ಬರೆದ ಪತ್ರ ಇಲ್ಲಿದೆ. ಪ್ರಿಯ ಓದುಗರೇ, ನೀವೂ ಈ ಚರ್ಚೆಯನ್ನು ಮುಂದುವರೆಸಬಹುದು.-ಸಂ.

ಪ್ರಿಯರೇ,

ನಮ್ಮ ಪತ್ರಿಕೆಯ ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ವಿವರಿಸಿದಂತೆ, ಇಂದಿನ ಕರೋನಾ ಹಾವಳಿಗೆ ನಾವು ಅನುಸರಿಸುತ್ತಿರುವ ಮನುಷ್ಯನ ಮಿತಿ ಇಲ್ಲದ ಐಷಾರಾಮಿ ಬದುಕನ್ನು ಆಶಯವಾಗಿ ಹೊಂದಿದ ಅಭಿವೃದ್ಧಿ ಮಾದರಿಯೇ–ಅದರಡಿಯ ವಿವಿಧ ಚಟುವಟಿಕೆಗಳೇ–ಕಾರಣವಾಗಿದೆ ಎಂದು ಪತ್ರಿಕೆ ಭಾವಿಸಿದೆ. ಈ ಮಾದರಿ ನಡೆಸಿರುವ ಅರಣ್ಯ ನಾಶ, ಗಣಿಗಾರಿಕೆ, ರಸಾಯನಿಕ ಕೃಷಿ, ಹೊಸ ಹೊಸ ಗ್ರಾಹಕ ವಸ್ತುಗಳ ಉತ್ಪಾದನೆಯ ಕೈಗಾರಿಕೀಕರಣ, ನಗರೀಕರಣ, ಸುಗಮ ಸಾಮೂಹಿಕ ಜನ ಸಂಚಾರ ವ್ಯವಸ್ಥೆ, ಇತ್ಯಾದಿಗಳು ಜೀವಪರಿಸರದ ಅವನತಿಗೆ, ಅನೇಕ ಜೀವ ಪ್ರಬೇಧಗಳ ನಾಶಕ್ಕೆ ಕಾರಣವಾಗಿರುವುದೇ ಕೋವಿಡ್ ಸೇರಿದಂತೆ ಇತ್ತೀಚಿನ ಹಲವು ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗಿರುವುದನ್ನು ಹಲವು ವೈಜ್ಞಾನಿಕ ಅಧ್ಯಯನಗಳೂ ತೋರಿಸಿಕೊಟ್ಟಿವೆ. ಹಾಗಾಗಿ ಈ ಸಾಂಕ್ರಾಮಿಕಗಳು ಅಲೆ ಅಲೆಯಾಗಿ ಮನುಷ್ಯ ಕುಲದ ಮೇಲೆ ದಾಳಿ ಮಾಡುವ ಆತಂಕ ಎಲ್ಲೆಡೆ ವ್ಯಕ್ತವಾಗುತ್ತಿದೆ.

ಈ ಆತಂಕವನ್ನು ನೀವೂ ಹಂಚಿಕೊಳ್ಳುವವರಾಗಿದ್ದರೆ, ಸದ್ಯದ ನಮ್ಮ ಅಭಿವೃದ್ಧಿಯ ದಿಕ್ಕನ್ನು ಬದಲಿಸುವ, ಅದರ ವೇಗವನ್ನಾದರೂ ಕುಗ್ಗಿಸುವ ಕಡೆ ಸರ್ಕಾರದ ಮತ್ತು ಜನಸಾಮಾನ್ಯರ ಗಮನ ಸೆಳೆಯಬೇಕಿದೆ. ಅಂದರೆ ಈ ಅಭಿವೃದ್ಧಿ ಬೇಡ ಎಂಬ ಘೋಷಣೆಯೊಂದನ್ನು ಜನರ ಮಧ್ಯೆಯೇ ಚಾಲ್ತಿಗೆ ತರಬೇಕಿದೆ. ಆದರೆ ನಾವು ಇಂದು ತಲುಪಿರುವ ಅಭಿವೃದ್ಧಿಯ ಹಂತದಿಂದ ಈ ಆಭಿವೃದ್ಧಿ ಸಾಕು ಎಂಬುದನ್ನು ಆರಂಭಿಸುವುದಾದರೂ ಎಲ್ಲಿಂದ. ಹೇಗೆ ಎಂಬ ಪ್ರಶ್ನೆಯೂ ಇದೆ. ಹಾಗಾಗಿ ಇದು ಕೇವಲ ಅಭಿವೃದ್ಧಿಯ ಮಾದರಿಯ ಪ್ರಶ್ನೆಯಾಗಿರದೆ ನಮ್ಮ ಆಡಳಿತ ಮಾದರಿ, ನಮ್ಮ ಜೀವನ ದೃಷ್ಟಿ ಮತ್ತು ಕ್ರಮಗಳಲ್ಲಿನ ಬದಲಾವಣೆಗಳ ಪ್ರಶ್ನೆಯೂ ಆಗಿದೆ. ನಮ್ಮನ್ನು ನಾವು ಮಣಿಸಿಕೊಳ್ಳುವ, ಹತ್ತಿಕ್ಕಿಕೊಳ್ಳುವ ಸವಾಲೂ ಆಗಿದೆ.

ಈ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು 'ಈ ಅಭಿವೃದ್ಧಿ ಇನ್ನು ಸಾಕು' ಎಂಬ ಆಂದೋಲನವನ್ನು ಸಾಂಕೇತಿಕವಾಗಿಯಾದರೂ, ಸರ್ಕಾರ ಮತ್ತು ಜನರು, ಇದು ಸಾಧ್ಯ ಎನ್ನುವ ಹಾಗೆ ಹೇಗೆ ಆರಂಭಿಸಬಹುದು? ಅದರ ಮೊದಲ ಹೆಜ್ಜೆಗಳು ಯಾವುವಾಗಿರಬೇಕು? ಎಂಬ ಬಗ್ಗೆ ತಾವು ನಮ್ಮ ಪತ್ರಿಕೆಗೆ ೫೦೦ ರಿಂದ ೬೦೦ ಶಬ್ದಗಳ ಮಿತಿಯಲ್ಲಿ ಒಂದು ಲೇಖನ ಬರೆದು ಕಳಿಸಬೇಕೆಂದು ಕೋರುವೆ.

ಇದು ಏಕಾಂಗಿಯಾಗಿ ಮಾಡುವ ಕೆಲಸವಲ್ಲ

–ರಾಜೇಂದ್ರ ಚೆನ್ನಿ


ಶಿಕ್ಷಿತ ಮಧ್ಯಮ ವರ್ಗದ ಎಲ್ಲಾ ಸವಲತ್ತುಗಳನ್ನು ಹೊಂದಿರುವ 'ಆಧುನಿಕ' ವ್ಯಕ್ತಿಯಾಗಿರುವ ನಾನು ಅಭಿವೃದ್ಧಿಯ ಬಗ್ಗೆ ಬರೆಯುವುದಾದರೆ ಅದೊಂದು ಪಾಪ ನಿವೇದನೆಯಾಗಬೇಕು. ಏಕೆಂದರೆ ನನ್ನ ವರ್ಗಕ್ಕೆ ಸೇರಿದ ಅನೇಕರಂತೆ ನಾನೂ ತಾತ್ವಿಕವಾಗಿ ಅಭಿವೃದ್ಧಿಯ ವಿರೋಧಿಯೇ. ಸುಮಾರು ಇಪ್ಪತ್ತು ವರ್ಷಗಳಿಂದ ಜಾಗತೀಕರಣ ಮತ್ತು ಅದರ ಜೀವಾಳವೇ ಆಗಿರುವ ಅಭಿವೃದ್ಧಿಯ ಏಕೋಪಾಸನೆಯ ವಿರುದ್ಧ ಬರೆಯುತ್ತಲೇ ಬಂದಿದ್ದೇನೆ. ಆದರೆ ಇಂಥ ತಾತ್ವಿಕ ನಂಬಿಕೆಯ ತರ್ಕವು ಅನಿವಾರ್ಯವಾಗಿಸಬೇಕಾದ ಮೂಲಭೂತ ಬದಲಾವಣೆಗಳು ನನ್ನ ಜೀವನಶೈಲಿಯಲ್ಲಿಯೇ ಆಗಿವೆಯೆ ಎಂದರೆ ಇಲ್ಲವೆನ್ನುವುದೇ ಉತ್ತರ. ಬಹುಶಃ ಈ ಇಬ್ಬಂದಿತನದ ಅರಿವಿದ್ದಿದ್ದರಿಂದ ಗಾಂಧಿಯವರ ಸ್ವಪ್ರೇರಿತ ಬಡತನ, ಜೆ.ಸಿ. ಕುಮಾರಪ್ಪನವರ ಕಠೋರವಾದ ಸರಳ ಜೀವನ ಇವುಗಳಿಗಿಂತ ಸ್ವಲ್ಪ ಉದಾರವಾದ ಸರಳ ಜೀವನದ ಮಾದರಿಯನ್ನು ಲೋಹಿಯಾ ಅವರು ನಮ್ಮೆದುರಿಗಿಟ್ಟಿರಬಹುದು. ಈಗಲೂ ಬಹುಪಾಲು ಯಾರ ಕಣ್ಣಿಗೂ ಬೀಳದಂತೆ ಸಾವಿರಾರು ಜನರು ಭಾರತದಲ್ಲಿ 'ಅಭಿವೃದ್ಧಿ'ಯ ಎಲ್ಲಾ ಹುನ್ನಾರುಗಳಿಂದ ದೂರವಾಗಿ ಬದುಕುತ್ತಿದ್ದಾರೆ. ಆದರೆ ಅವರಿಗೂ ತಮ್ಮ ಜೀವನ ಶೈಲಿಯನ್ನು ತಮ್ಮ ಸುತ್ತಲಿನ ಸಮಾಜದ ಜೀವನ ಶೈಲಿಯನ್ನಾಗಿಸಲು ಆಗಿಲ್ಲ. ಬುದ್ಧನ ಸಂಘಗಳು ಸಮಾನತೆಯ ದ್ವೀಪಗಳಾಗಿ ಆ ಕಾಲದ ಕ್ರೂರ ಚಾರಿತ್ರಿಕ ಅಮಾನವೀಯ ಸಾಮ್ರಾಜ್ಯಗಳ ಕಟ್ಟುವಿಕೆಯ ಕಾಲದಲ್ಲಿದ್ದವು. ಬಸವನ ಮಹಾಮನೆ, ಕಲ್ಯಾಣಗಳು ಕರ್ನಾಟಕದ ಚರಿತ್ರೆಯ ಪ್ರಬಲ ಸಾಮ್ರಾಜ್ಯಶಾಹಿ, ಅಂತರ್‌ಯುದ್ಧಗಳ ಕಾಲದಲ್ಲಿ ಶರಣರ ಒಂದು ಸಮುದಾಯಕ್ಕೆ ಆಶ್ರಯವಾಗಿದ್ದವು. ಗಾಂಧಿಯವರ ಆಶ್ರಮಗಳು ಇಪ್ಪತ್ತನೆಯ ಶತಮಾನದಲ್ಲಿ ಮನುಷ್ಯರು ಒಳಗೂ–ಹೊರಗೂ ಹಸನಾಗಿ ಬದುಕುವ ಆತ್ಯಂತಿಕ ಪ್ರಯೋಗಗಳ ಫಲಗಳಾಗಿದ್ದವು. ಆದರೆ ಅವುಗಳ ಹೊರಗೆ ಅದೇ ಕಾಲದಲ್ಲಿ ಆಧುನಿಕ ಪಶ್ಚಿಮದ 'ಅಭಿವೃದ್ಧಿ'ಯ ಕಲ್ಪನೆಯು ಇನ್ನೊಂದು ಪರ್ಯಾಯ ಭಾರತವನ್ನು ಕಟ್ಟತೊಡಗಿತ್ತು. ಇವಾವೂ ಸೋಲುಗಳ ಉದಾಹರಣೆಗಳಲ್ಲ, 'ಅಭಿವೃದ್ಧಿಯ ರಾಕ್ಷಸ ಬಲ' ಮತ್ತು ಅದರ ಚಾಲಕ ಶಕ್ತಿಯಾಗಿರುವ ಮನುಷ್ಯ ಸ್ವಭಾವದ ದೌರ್ಬಲ್ಯ ಹಾಗೂ ಅಸಮಾನತೆಯ ಉದಾಹರಣೆಗಳಾಗಿವೆ. ಹೀಗೆ ಹೇಳುವುದು ಸಿನಿಕತನಕ್ಕೆ ಅಥವಾ ಮೋಸದ ಸ್ವಸಮರ್ಥನೆಗೆ ಕಾರಣವಾಗಬಾರದು. ವಿನಾಶಕಾರಿ ಅಭಿವೃದ್ಧಿಯ ವಿರುದ್ಧದ ಹೋರಾಟವನ್ನು ಬಿಟ್ಟುಕೊಡಲು ನೆಪವೂ ಆಗಬಾರದು. ಹೇಗಿದ್ದರೂ ಅಭಿವೃದ್ಧಿಯ ಮಾಯೆಯಿಂದ ಹೊರಬರುವುದು ಕಷ್ಟಪಟ್ಟು ಕಲಿಯುತ್ತಲೇ ಇರುವ ಹೋರಾಟವಾಗಿದೆ.

ಇಷ್ಟೆಲ್ಲ ಪ್ರವರ ಹೇಳುವುದಕ್ಕೆ ಕಾರಣವೆಂದರೆ ಈ ಕಾಲದಲ್ಲಿ ಅಭಿವೃದ್ಧಿ ಎನ್ನುವುದು ಎಲ್ಲೆಗಳನ್ನು ಮೀರಿ ಬೆಳೆಯುವ ಶಕ್ತಿಯನ್ನು ಈ ಕಾಲದ ಅತಿ ಮುಖ್ಯ ಚಾರಿತ್ರಿಕ ವಿದ್ಯಮಾನಗಳಿಂದ ಪಡೆದುಕೊಂಡಿದೆ. ಒಂದು, ಅಂತರ್‌ರಾಷ್ಟ್ರೀಯ ಕಾರ್ಪೊರೇಟ್ ಬಂಡವಾಳ. ಎರಡು, ಈ ಬಂಡವಾಳದ ಮಾಧ್ಯಮಗಳಾಗಿರುವ ರಾಷ್ಟ್ರ ಪ್ರಭುತ್ವಗಳು (ವಿಶೇಷವಾಗಿ ಹುಸಿ ರಾಷ್ಟ್ರವಾದದ ಬೆಂಬಲ ಪಡೆದಿರುವ ಪ್ರಭುತ್ವಗಳು) ಮತ್ತು ಮೂರನೇಯದಾಗಿ ಅಂತಿಮವಾಗಿ, ವಿನಾಶಕಾರಿಯಾದ ಅಭಿವೃದ್ಧಿಯ ತತ್‌ಕ್ಷಣದ ಫಲಾನುಭವಿಗಳೂ ಆಗಿರುವ ಮಧ್ಯಮ ಮತ್ತು ಮೇಲ್ವರ್ಗಗಳು. ಇವುಗಳ ಒಕ್ಕೂಟದಂಥ ಪ್ರಬಲ ಶಕ್ತಿಯನ್ನು ಮನುಷ್ಯ ಚರಿತ್ರೆ ಕಂಡಿರಲಿಕ್ಕಿಲ್ಲ. ಹಾಗಿದ್ದರೆ ಏನು ಮಾಡುವುದು?

ಭಾರತವೇ ಸಾಕ್ಷಿಯಾಗಿರುವಂತೆ ರಾಷ್ಟ್ರ ಪ್ರಭುತ್ವವು ಬಂಡವಾಳದ ಆದೇಶದಂತೆ ತನ್ನ ಪ್ರಬಲವಾದ ಆಡಳಿತಶಾಹಿ, ನೌಕರಶಾಹಿ ಹಾಗೂ ಸಾಧ್ಯವಿದ್ದಲ್ಲಿ ನ್ಯಾಯಾಂಗವನ್ನೂ ಬಳಸಿಕೊಂಡು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಪ್ರಜೆಗಳು ಭಾಗಿಗಳಲ್ಲವೇ ಅಲ್ಲ. ಆದರೆ ನೇರವಾಗಿ ಬಲಿಪಶುಗಳಾಗುವವರು ರೈತರು, ಬಡವರು, ಶ್ರಮಿಕರು ಮತ್ತು ಈ ಎಲ್ಲಾ ವರ್ಗಗಳ ಮಹಿಳೆಯರು. ಕೇಂದ್ರೀಕೃತವಾದ ಬಲಿಷ್ಠ ಸರಕಾರವು ಇವರೆಲ್ಲರ ಮೇಲೆ ಅಭಿವೃದ್ಧಿಯನ್ನು ಹೇರುತ್ತದೆ. ಹೀಗಾಗಿ ಇದಕ್ಕೆ ಪ್ರತಿರೋಧವು ಅತ್ಯಂತ ವಿಕೇಂದ್ರೀಕೃತವಾದ ಸ್ಥಳೀಯ ಸಮುದಾಯಗಳಿಂದ, ಹಳ್ಳಿಗಳಿಂದ ಆರಂಭವಾಗಬೇಕು. 'ನಮಗೆ ಅಕೇಶಿಯಾ ಬೇಡ' ಎನ್ನುವ ಧಾಟಿಯಲ್ಲಿ ಸಮುದಾಯಗಳೇ ಇದರಲ್ಲಿ ಭಾಗಿಯಾಗಬೇಕು. 'ಅಭಿವೃದ್ಧಿ ಸಾಕು – ಬದುಕಲು ಬಿಡಿ' ಎನ್ನುವ ಧ್ಯೇಯ ವಾಕ್ಯದಡಿಯಲ್ಲಿ ಗ್ರಾಮ ಪಂಚಾಯಿತಿಗಳು ತಮ್ಮ ಅಧಿಕಾರಕ್ಕಾಗಿ ಹೋರಾಡಬೇಕು. ಮುಖ್ಯವಾಗಿ ಎಲ್ಲಾ ರಾಜಕೀಯ ಪಕ್ಷಗಳನ್ನು, ಧುರೀಣರನ್ನು ತಮ್ಮ ಪರಮ ಶತ್ರುಗಳೆಂದೇ ನೋಡಬೇಕು. ಸಮುದಾಯಗಳು ಮುಕ್ತ ಚರ್ಚೆ, ತಾತ್ವಿಕವಾದ ನಿರ್ಧಾರಗಳಿಗೆ ಬದ್ಧವಾಗಿರಬೇಕು. ಇದು ಏಕಾಂಗಿಯಾಗಿ ಮಾಡುವ ಕೆಲಸವಲ್ಲ. ರಾಜ್ಯದ, ದೇಶದ ಸಮುದಾಯಗಳು ಸಹಕಾರದ ನೆಲೆಗಳನ್ನು ಹುಡುಕಿಕೊಳ್ಳಬೇಕು. ಆದರೆ ನಿಧಾನವಾಗಿ, 'ರಾಷ್ಟ್ರೀಯ'ವಾಗುವ ಧಾವಂತ ಇಲ್ಲದೆ. ಇದು ತುಂಬಾ utopian ಆಗಿ ಕಾಣಬಹುದು. ಆದರೆ ಭಾರತದ ರಾಜಕೀಯ ಅನುಭವವೆಂದರೆ ಕೇಂದ್ರೀಕೃತ ರಾಜಕಾರಣ, ಪ್ರಭುತ್ವವೆಂದರೆ ಅನೈತಿಕ ಸ್ವಾರ್ಥ, ಬಂಡವಾಳದ ಗುಲಾಮಗಿರಿ ಮತ್ತು ಬ್ರಹ್ಮಾಂಡ ಭ್ರಷ್ಟತೆ, ಕೋವಿಡ್‌ನ ಈ ಭೀಕರ ಕಾಲದಲ್ಲಿ ನನಗೆ ಮೋದಿಯವರ ಸರ್ವಾಧಿಕಾರಕ್ಕಿಂತಲೂ ಹೆಚ್ಚು ಭಯಾನಕವಾಗಿ ಕಂಡಿದ್ದು ನಮ್ಮ ಜನರ ಭ್ರಷ್ಟತೆ. ಮನುಷ್ಯರ ಜೀವನ ಹಾಗೂ ಮರಣಗಳಿಂದ ಲಾಭ ಮಾಡಿಕೊಳ್ಳುವ ಇಂಥ ಕೆಡುಕಿನ ಮೂಲವು ಭಾರತೀಯ ಸಮಾಜದಲ್ಲಿಯೇ ಇದೆ. 'ನಿನ್ನ ತಂದೆಗೆ ಆಕ್ಸಿಜನ್ ಬೇಕೆಂದರೆ ನನ್ನ ಜೊತೆಗೆ ಮಲಗು" ಎಂದು ಮಗಳಿಗೆ ಹೇಳುವುದು, ಖಾಸಗಿ ಆಸ್ಪತ್ರೆಯ ಬಿಲ್ ಕಟ್ಟಲು ಹಣವಿಲ್ಲದೆ ಹೆಂಡತಿ ಗಂಡನ ಶವಕ್ಕೆ ನಮಸ್ಕಾರ ಮಾಡಿ ಹೊರಟು ಹೋಗುವುದು, ಆದಿವಾಸಿಗಳು ಇದೇ ಕಾರಣಕ್ಕೆ ಹೀಗೆಯೇ ಸತ್ತ ಬಂಧುಗಳಿಗೆ ನಮಸ್ಕಾರ ಮಾಡಿ ಹೊರಡಬೇಕಾದುದು ಭಾರತವೆನ್ನುವ ಇಂತಹ ರೌರವ ನರಕದಲ್ಲಿ ಮಾತ್ರ ಸಾಧ್ಯ. ಈ ಲಂಪಟತನ, ದುಡ್ಡಿನ ಹಪಾಹಪಿ, ಮಿತಿಯೇ ಇಲ್ಲದ luxury, ಮಿತಿಯೇ ಇಲ್ಲದ ಸುಖ– ಇವೇ ಅಭಿವೃದ್ಧಿಯ ಅಪೇಕ್ಷೆಯ ಮೂಲದಲ್ಲಿವೆ. ಹಿಂದೆ ಸಮುದಾಯಗಳು (ಆಫ್ರಿಕನ್, ಭಾರತೀಯ ಬುಡಕಟ್ಟುಗಳು), ಧರ್ಮಗಳು (ಬೌದ್ಧ, ಜೈನ) ಪಾಪ, ಪುಣ್ಯ, ಮೋಕ್ಷ, ನರಕ, ಇವುಗಳ ಪರಿಭಾಷೆಯ ಮೂಲಕವೇ ಆಸೆ, ಲಂಪಟತನ, ಭೋಗ ಇವುಗಳಿಗೆ ಕಡಿವಾಣ ಹಾಕಲು ಪ್ರಯತ್ನಿಸಿದ್ದವು. ಈಗಿನ ಭಾರತದಲ್ಲಿ ಧರ್ಮಗಳು ರಾಜಕೀಯಕ್ಕಿಂತ ನೂರು ಮಡಿ ಭ್ರಷ್ಟವಾಗಿವೆ; ಭೋಗಲಾಲಸೆಯಲ್ಲಿ ಮುಳುಗಿವೆ. ಸರಕಾರವನ್ನು ಅಭಿವೃದ್ಧಿ ವಿರುದ್ಧ ಒಪ್ಪಿಸಬಹುದೇ ಹೊರತು ಧರ್ಮಸಂಸ್ಥೆಗಳನ್ನಲ್ಲ.

ಆದ್ದರಿಂದ ಉಳಿದಿರುವ ಒಂದೇ ದಾರಿಯೆಂದರೆ, ನಾವೂ ಸಮುದಾಯವನ್ನು ಸೇರಿಕೊಂಡು ಪ್ರಯತ್ನಪಟ್ಟು ಕಲಿಯುವುದು. ರಾಜಕೀಯವಾಗಿ ಒಂದು ಪರಿಹಾರವೆಂದರೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ಯೋಜನೆಯು ಕೇಂದ್ರ, ರಾಜ್ಯ ಸರಕಾರಗಳಿಂದ ಆರಂಭವಾಗಲೇಬಾರದು. ಈಗಾಗುತ್ತಿರುವಂತೆ ಕಾಡನ್ನು ಕಡಿಯಲು ಜೆಸಿಬಿಗಳನ್ನು ನಿಲ್ಲಿಸಿಕೊಂಡು ಪಂಚಾಯತ್‌ನಲ್ಲಿ "ನಾಗರೀಕರ ಅಭಿಪ್ರಾಯ ಸಂಗ್ರಹ ಸಭೆ" ಮಾಡಲು ಅವಕಾಶವಿರಬಾರದು. ಮೊದಲ ಹೆಜ್ಜೆಯೆಂದರೆ ಐದು ವರ್ಷ ಅಭಿವೃದ್ಧಿ ಬೇಡ ಎನ್ನುವ ಸಾಮೂಹಿಕ ನಿರ್ಧಾರ. ಯಾವ ಸ್ಥಳೀಯ ಸುಧಾರಣೆಯ ಕೆಲಸವಾಗಬೇಕಾದರೆ ಅಂದಾಜು ವೆಚ್ಚದಿಂದ ಆಡಿಟ್‌ವರೆಗೆ ಎಲ್ಲವೂ ಸ್ಥಳೀಯವಾಗಿಯೇ, ಜನಸಂಘಟನೆಗಳ ಸುಪರ್ದಿಯಲ್ಲಿಯೇ ನಡೆಯಬೇಕು. ಮೂಲಭೂತವಾದ, ತಲಸ್ಪರ್ಶಿಯಾದ

ವಿಕೇಂದ್ರೀಕರಣವಿಲ್ಲದೆ ಅಭಿವೃದ್ಧಿಗೆ ಪ್ರತಿರೋಧವು ಸಾಧ್ಯವೇ ಇಲ್ಲ. ಮುಖ್ಯವಾಗಿ ಇಂಥ ಪ್ರಯೋಗಗಳು ಯಶಸ್ವಿಯಾಗಿಯೆ ವಿಶ್ವದ ಉದ್ದಕ್ಕೂ ಎನ್ನುವ ವಿಶ್ವಾಸವು ಬರಬೇಕಿದೆ. ಆದರೆ ನೈತಿಕವಾಗಿ ಅತ್ಯಂತ ಕ್ಲಿಷ್ಟವಾದ ಮತ್ತು ಪ್ರಾಯಶಃ ಉತ್ತರವೇ ಇಲ್ಲದ ಸಮಸ್ಯೆಯೆಂದರೆ ಯಾವುದೇ ಬಗೆಯ ಅಭಿವೃದ್ಧಿಯಿಂದ ವಂಚಿತರಾಗಿರುವ ಸಮುದಾಯಗಳಿಗೆ ಅಭಿವೃದ್ಧಿಯ ಅಪಾಯಗಳನ್ನು ತಿಳಿಹೇಳುವುದಾಗಿದೆ. ಸಾವಿರಾರು ವರ್ಷಗಳ ತೀವ್ರವಾದ ಅಸಮಾನತೆಗಳ ನೆನಪುಗಳಿರುವ ಸಮುದಾಯಗಳು ಅಭಿವೃದ್ಧಿಯ ವಿರೋಧವನ್ನು ಸಂಶಯದಿಂದ ನೋಡುವುದು ಸಹಜವೇ ಆಗಿದೆ. ಅದರಲ್ಲೂ ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಯಾವುದೇ ಅಭಿವೃದ್ಧಿಯಾದರೂ ಅದು ದಮನಿತರಿಗಾಗಿಯೇ ಎನ್ನುವ, ಎಂದು ಒಪ್ಪಿಸುವ ರಾಜಕೀಯ ತಂತ್ರಗಳಿಂದಾಗಿ ಇದು ಇನ್ನೂ ಕಷ್ಟಕರವಾಗಿದೆ. ಅಭಿವೃದ್ಧಿ ಬೇಡವೆನ್ನುವವರು ಈ ಸಮುದಾಯಗಳಿಗೆ ಅನ್ಯರಾಗಿ ಕಾಣುವುದು ಸಹಜವೇ. ಅಸಮಾನತೆಗಳ ಗೋಡೆಗಳ ಆಚೆಗೆ ಸಂವಾದವು ಸಾಧ್ಯವಿದ್ದರೆ ಎಲ್ಲರೂ ಸೇರಿ ಸಮಾಜಕ್ಕೆ ಬೇಕಾದ ಅಭಿವೃದ್ಧಿಯ ಮಾದರಿಯನ್ನು ಹುಡುಕಬಹುದಿತ್ತು. ಆ ಸಾಧ್ಯತೆಗಳು ಕಾಣುತ್ತಿಲ್ಲ.



(ನಿವೃತ್ತ ಇಂಗ್ಲಿಷ್ ಅಧ್ಯಾಪಕರಾದ ಲೇಖಕರು ನಮ್ಮ ನಡುವಿನ ಪ್ರಮುಖ ರಾಜಕೀಯ ಚಿಂತಕರೂ ಹೌದು.)

ಕೊರೋನಾ ಕಲ್ಪಿಸಿದ ಅವಕಾಶ

–ಅಕ್ಷರ ಕೆ.ವಿ.

ವಿಶಾಲ ಜಗತ್ತಿನಲ್ಲೂ ನಮ್ಮ ನಮ್ಮ ವೈಯಕ್ತಿಕ ಆವರಣಗಳಲ್ಲೂ ಕೊರೋನಾ ಪಿಡುಗು ಅಸಾಧಾರಣ ಸಂಕಟಗಳನ್ನು ಉಂಟುಮಾಡಿದ್ದು ನಿಜವಾದರೂ, ಅದೆಲ್ಲದರ ಜತೆಗೇ ಅದು ಬ್ರಹ್ಮಾಂಡ ಶಕ್ತಿಯು ನಮಗೆ ಕಲಿಸುತ್ತಿರುವ ಪಾಠವೂ ಮತ್ತು ಕಲಿಯಲು ಕೊಡುತ್ತಿರುವ ಅವಕಾಶವೂ ಇದ್ದೀತೆ? – ಎಂದು ಕಳೆದ ಒಂದು ವರ್ಷದಿಂದಲೂ ನಾನು ಯೋಚಿಸುತ್ತಿದ್ದೇನೆ. ಆದರೆ, ನಮ್ಮ ಲೋಕವನ್ನು ನಡೆಸುತ್ತಿರುವ ನಾನಾ ಸ್ತರಗಳ ಬಹುತೇಕ ನಾಯಕರು ಇಂಥ ದೀರ್ಘಕಾಲೀನ ಆಲೋಚನೆಗೆ ಆಸ್ಪದವನ್ನೇ ನೀಡದೆ ಈ ಇಡೀ ಬಿಕ್ಕಟ್ಟನ್ನು ತತ್‌ಕ್ಷಣದ ಒಂದು ನಿರ್ವಹಣೆಯ ಪ್ರಶ್ನೆಯೆಂಬಂತೆ ಪರಿಹರಿಸಲು ಪ್ರಯತ್ನಿಸುತ್ತ ಈ ಅವಕಾಶವನ್ನು ತಪ್ಪಿಸುತ್ತಿದ್ದಾರಲ್ಲ ಅನ್ನಿಸಿ ನನಗೆ ಆತಂಕವೂ ಆಗಿದೆ.

ನಿಜವಾಗಿ, ಕೊರೋನೋತ್ತರ ಯುಗಕ್ಕೆ ನಾವು ದಾಟಿಕೊಳ್ಳಲು ಬಯಸುವುದಾದರೆ, ಇದು ಹೊಸ ಯೋಚನೆ ಮಾಡಲೂ ಹೆಜ್ಜೆ ಇಡಲೂ ಸಕಾಲ. ಕೊರೋನಾದಿಂದ ಹೇಗೂ ಈ ಜಗತ್ತು ಲಕ್ವ ಹೊಡೆದು ನಿಂತಿದೆಯಾಗಿ ನಾವೆಲ್ಲ ಈಗ ನಮ್ಮ ಬದುಕನ್ನು ಹೆಚ್ಚೂ ಕಮ್ಮಿ ಮೊದಲಿಂದ ಆರಂಭಿಸಬೇಕು; ಹಳೆಮನೆಯ ಬಹುಭಾಗವನ್ನು ಕೆಡವಿ ಹೊಸ ಆವಾಸವನ್ನು ಕಟ್ಟಬೇಕು. ಅಂಥ ಸಂದರ್ಭದಲ್ಲಾದರೂ ಹಳೆಮನೆಯ ಕಸಕೊಳಕುಗಳನ್ನು ಬಿಸಾಡಬಹುದಲ್ಲವೆ? – ಇದು ನನ್ನ ಆಲೋಚನೆಯ ತಿರುಳು. ಮುಖ್ಯವಾಗಿ ಮೂರು ವಲಯಗಳಲ್ಲಿ ನವೀಕರಣ ಸಂಭವಿಸಬೇಕೆಂಬುದು ನನ್ನ ಅನ್ನಿಸಿಕೆ. ಮೊದಲನೆಯದು ನಮ್ಮದೇ ಮನೆವಾರ್ತೆಯ ನಿತ್ಯ ಬದುಕಿನ ಸೀಮಿತ ಆವರಣ, ಎರಡು, ನಾವು ಕೆಲಸ ಮಾಡುವ ಸಂಸ್ಥೆ–ಮಾಧ್ಯಮ–ಉದ್ಯಮಗಳ ವ್ಯಾಪಕ ಆವರಣ ಮತ್ತು ಮೂರು, ಈ ಕಾಲದ ರಾಜ್ಯ–ಸಾಮ್ರಾಜ್ಯಗಳ ವಿಶಾಲಾವರಣ.

ಮೊದಲನೆಯದಾಗಿ, ನಮ್ಮ ಜೀವನವಿಧಾನದ ಕೆಲವಾದರೂ ದುರಭ್ಯಾಸಗಳನ್ನು ಬಿಡಲು ಇದು ಅತ್ಯುತ್ತಮ ಸನ್ನಿವೇಶ. ಅದು ಆಹಾರ–ಆಚಾರಕ್ಕೆ ಸಂಬಂಧಿಸಿದ್ದು ಇರಬಹುದು, ಅಥವಾ ಇನ್ನೊಬ್ಬರ ಮಾತುಗಳನ್ನು ಕೇಳುವ ವ್ಯವಧಾನವೇ ಇಲ್ಲದಷ್ಟು ನಮ್ಮದೇ ಅಭಿಪ್ರಾಯಗಳನ್ನು ಹೇರಿಕೊಂಡಿರುವ ಭಾರದ ಸ್ಥಿತಿಯೂ ಆಗಿರಬಹುದು. ಅತ್ಯಂತ ತುರ್ತಾಗಿ ಅಂಥ ಲಗ್ಗೇಜುಗಳನ್ನು ನಾವು ಇವತ್ತಿನ ನಿಲ್ದಾಣದಲ್ಲಿ ಇಳಿಸದೇ ಮುನ್ನಡೆದರೆ, ನಮಗೆಲ್ಲರಿಗೂ ಇದೇ ಕಡೆಯ ನಿಲ್ದಾಣವಾಗುವ ಸಾಧ್ಯತೆ ಹೆಚ್ಚಿದೆ. ಜತೆಗೆ, ನಾವು ಪ್ರತಿಯೊಬ್ಬರೂ ಬಾಯಿಮಾತಲ್ಲಿ ಕೊಳ್ಳುಬಾಕತನದ ಬಗ್ಗೆ ಅಥವಾ ಪರಿಸರ ವಿನಾಶದ ಕುರಿತು ಏನೂ ಹೇಳಲಿ, ಅದರ ಆಚರಣೆಯಲ್ಲಿ ನಮ್ಮದೇ ಅಂತರ್ಭಾವಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತ ಬಂದಿದ್ದೇವೆ. ನಮ್ಮ ಈ ಇಬ್ಬಂದಿತನದ ನಡೆಯು ಈ ಲೋಕವನ್ನು ಘಾಸಿಗೊಳಿಸಿದೆ ಮಾತ್ರವಲ್ಲ, ನಮ್ಮ ವ್ಯಕ್ತಿತ್ವಗಳನ್ನೂ ಟೊಳ್ಳು ಮಾಡಿದೆ.


ಎರಡನೆಯದಾಗಿ, ನಮ್ಮ ಸಾಮಾಜಿಕ ಸಂಬಂಧಗಳಲ್ಲಿಯೂ ಮತ್ತು ನಾವು ಜತೆಗೂಡಿ ಕಟ್ಟಿಕೊಂಡ ಸಂಸ್ಥೆಗಳಲ್ಲಿಯೂ ಸಂರಚನೆಗಳಲ್ಲಿಯೂ ನಾವು ಕಾಲಕ್ರಮೇಣ ಬೇಕಿರುವ ಸಂಗತಿಗಳ ಜತೆಗೆ, ಬೇಡದಿರುವ ನೂರಾರು ಸಂಗತಿಗಳನ್ನು ಹೆಗಲಿಗೇರಿಸಿಕೊಂಡಿದ್ದೇವೆ. ಅವೆಲ್ಲ ಈಗ ರೂಢಿಯೇ ಆಗಿ, ಅಂಥವನ್ನು ಬಿಟ್ಟರೆ ಬದುಕೇ ಅಸಾಧ್ಯವೆಂದು ನಾವು ಭ್ರಮಿತರಾಗಿದ್ದೇವೆ. ಆದರೆ ಕೊರೋನಾ ಕಾಲವು ಅಂಥ ಅನಗತ್ಯ ಅವಲಂಬನೆಗಳ ಪೊಳ್ಳುತನವನ್ನು ಕಾಣಿಸಿದೆ. ಉದಾಹರಣೆಗೆ, ಈ ಕಾಲದಲ್ಲಿ ವರ್ಷಕ್ಕೂ ಮಿಕ್ಕು ಯಾವ ಶಿಕ್ಷಣ ಸಂಸ್ಥೆಗಳೂ ಕೆಲಸ ಮಾಡದಿದ್ದರೂ ಯಾವುದೇ ಶೈಕ್ಷಣಿಕ ಪರೀಕ್ಷೆಗಳು ನಡೆಯದೇಹೋದರೂ ತಲೆಹೋಗುವಂಥದ್ದೇನೂ ಆಗಿಲ್ಲ. ಅದರರ್ಥ ಪ್ರಾಯಶಃ, ಅಂಥವು ಬಹುಪಾಲು ನಿಜವಾಗಿ ಅಗತ್ಯವೇ ಅಲ್ಲ.

ಈ ಕಾಲದ ಇನ್ನೊಂದು ಮಹಾಮಿಥ್ಯೆಯನ್ನು ನಾನು ಉದ್ಯಮೈಕ ದೃಷ್ಟಿ ಎಂದು ಕರೆಯುತ್ತೇನೆ. ವಾಣಿಜ್ಯೋದ್ಯಮಗಳು ಮಾತ್ರವೇ ಮಾನವಜೀವನದ ಪರಮೋದ್ದೇಶವೆಂದೂ ಅದರಲ್ಲಿ ಪಾರಮ್ಯವನ್ನು ಸಾಧಿಸಿದ ಸಮಾಜವೇ ಅತ್ಯುತ್ಕೃಷ್ಟವೆಂದೂ ನಂಬುವ ಈ ಆಧುನಿಕ ಮಾಯಾವಾದವು ನವಬಂಡವಾಳಯುಗದ ಬಳುವಳಿ. ಆದರೀಗ ಆ ಮಿಥ್ಯೆಯು ನಮ್ಮ ನಾಗರಿಕ ಮನಸ್ಸುಗಳೊಳಗಡೆ ಎಷ್ಟು ಆಳಕ್ಕೆ ಕೂತುಬಿಟ್ಟಿದೆಯೆಂದರೆ, ಉದ್ಯಮಗಳೇನಾದರೂ ಮುಳುಗಿದರೆ, ಜಗತ್ತೇ ಮುಳುಗುತ್ತದೆ ಎಂಬ ಭ್ರಮೆ ನಮಗೆ ಹುಟ್ಟುತ್ತದೆ. ಉದಾಹರಣೆಗೆ, ಕೋರೋನಾ ಎಂಬ ಪಿಡುಗು ಜಾಗತಿಕವಾಗಿ ಹರಡಿದ್ದೇ ವಿಮಾನಪ್ರಯಾಣದ ಮೂಲಕ ಎಂಬುದೀಗ ನಮಗೆ ನಿಚ್ಚಳವಾಗಿ ಗೊತ್ತಿದ್ದರೂ ಯಾವ ದೇಶವೂ ವಿಮಾನಪ್ರಯಾಣವನ್ನು ಸ್ಥಗಿತಗೊಳಿಸುವ ಮತ್ತು ಭವಿಷ್ಯತ್ತಿನಲ್ಲಿ ಅದನ್ನು ಮಿತಗೊಳಿಸುವ ದೂರದೃಷ್ಟಿಯನ್ನು ತೋರಲು ಹಿಂಜರಿಯುತ್ತಿದೆ. ಬದಲು, ತುಸು ಅವಕಾಶ ದೊರೆತೊಡನೆ ಮತ್ತೆ ವಿಮಾನಪ್ರಯಾಣವನ್ನು ಆರಂಭಿಸಿ ಈ ಪಿಡುಗು ಬಿಗಡಾಯಿಸುವುದಕ್ಕೆ ನಮ್ಮ ಸರ್ಕಾರಗಳೇ ಕಾರಣವಾಗಿವೆ. ಮನುಷ್ಯರ ಆರೋಗ್ಯ ಹಾಳಾದರೂ ಸರಿಯೇ ಜಾಗತಿಕ ವ್ಯಾಪ್ತಿಯ ಉದ್ಯಮಗಳಿಗೆ ಪೆಟ್ಟಾಗಬಾರದು ಎಂಬುದು ಈ ನಿಲುವಿನ ಹಿಂದಿರುವ ಅವ್ಯಕ್ತ ಇಂಗಿತ. ಇದನ್ನು ನಾವು ಪ್ರಖರವಾಗಿ ಪ್ರಶ್ನಿಸುವ ಕಾಲವೀಗ ಬಂದಿದೆ. ಅದಕ್ಕೀಗ ಸಾಕ್ಷ್ಯವೂ ನಮಗೆ ದೊರೆತಿದೆ – ಕೊರೋನಾ ಕಾಲಕ್ಕೆ ಮೊದಲು ಜಗತ್ತಿನಲ್ಲಿ ಯಾವುದೇ ಹೊತ್ತಿಗೆ ಹತ್ತಾರು ಸಾವಿರ ವಿಮಾನಗಳು ಆಕಾಶದಲ್ಲೇ ಇರುತ್ತಿದ್ದವಂತೆ, ಜಗತ್ತು ಅಷ್ಟು ಬ್ಯುಸಿಯಾಗಿತ್ತು! ಆದರೆ ಕಳೆದ ಲಾಕ್ಡೌನ್‌ನಲ್ಲಿ ಹೆಚ್ಚೂ ಕಮ್ಮಿ ಅಷ್ಟಕ್ಕಷ್ಟೂ ವಿಮಾನಗಳೂ ನೆಲದಲ್ಲೇ ನಿಂತಿದ್ದರೂ, ಪ್ರಳಯವೇನೂ ಆಗಲಿಲ್ಲ.

ಇಂಥ 'ಅನಗತ್ಯ–ಅಗತ್ಯ'ಗಳು ಕೇವಲ ಶಿಕ್ಷಣ ಅಥವಾ ಸಾರಿಗೆಯಂಥ ವ್ಯಾಪಕ ವಲಯಗಳಿಗೆ ಮಾತ್ರ ಸೀಮಿತವೇನೂ ಅಲ್ಲ. ನಾವು ನಡೆಸುತ್ತಿರುವ ಅರೆ–ಖಾಸಗಿ ಚಟುವಟಿಕೆಗಳು, ಸಭೆ–ಸಮಾರಂಭಗಳು, ಕ್ರಿಯಾಶೀಲತೆಯೆಂಬ ಹೆಸರಿನ ಇನ್ನೂ ಹಲವು ದಾರಿಗಳು – ಇದರಲ್ಲಿಯೂ ಬೇಕಷ್ಟು ಪೊಳ್ಳಿದೆ. ಒಂದು ಕ್ಷಣ ಸುಮ್ಮನೆ ಕೂತು, ಇವುಗಳಲ್ಲಿ ನಿಜವಾಗಿಯೂ ಉಪಯುಕ್ತವಾದದ್ದು ಎಷ್ಟು, ಮಾಡದೆ ಇರಲಾಗದೆ ರೂಢಿಗತವಾಗಿ ಮಾಡುತ್ತಿರುವ ಆಚರಣೆಗಳೆಷ್ಟು ಎಂಬುದನ್ನು ಲೆಕ್ಕ ಹಾಕಿಕೊಂಡರೆ, ನಮಗೇ ಆಶ್ಚರ್ಯವಾದೀತು. ಇಂಥ ಕೆಲವನ್ನು ನಾನೋ ನೀವೋ ಸ್ವತಃ ನಿಲ್ಲಿಸಬಲ್ಲಷ್ಟನ್ನು ನಿಲ್ಲಿಸಿದರೆ, ಅಷ್ಟೇ ಇವತ್ತಿನ ಕಾಲಕ್ಕೆ ಸಾಕಷ್ಟಾಗುತ್ತದೆ.

ಮೂರನೆಯದಾಗಿ, ನಮ್ಮ ನಾಡಿನ ಸರ್ಕಾರ ಮತ್ತು ಆಡಳಿತಗಳನ್ನು ನಾವು ನೋಡುವ ಬಗೆಯನ್ನೇ ತುರ್ತಾಗಿ ಮರುಪರಿಶೀಲನೆ ಮಾಡಿಕೊಳ್ಳುವ ಅಗತ್ಯ ನನಗೆ ತೋರುತ್ತದೆ. ಒಂದೊಂದು ಸಮಸ್ಯೆಗೂ ಒಂದೊಂದು ಪಕ್ಷವನ್ನು ಬೆಟ್ಟು ಮಾಡಿ ತೋರಿಸುವ ರಾಜಕೀಯ ವರಸೆಗಳನ್ನು ನಾವೀಗ ಕೈಬಿಟ್ಟು ನಮ್ಮ ಸ್ವಂತ ಜವಾಬ್ದಾರಿಗಳನ್ನು ಅರಿತುಕೊಳ್ಳುವ ಮನೋವೈಶಾಲ್ಯವನ್ನು ಮೊದಲು ಸ್ಥಾಪಿಸಿಕೊಳ್ಳಬೇಕು. ಸಿದ್ಧಾಂತಗಳ ಮಾದಕ ವ್ಯಸನದಲ್ಲಿ ನಮ್ಮ ನಮ್ಮ ಆಯುಷ್ಯದ ಬಹುಕಾಲವೀಗಾಗಲೇ ವ್ಯರ್ಥವಾಗಿಹೋಗಿದೆ. ಈಗಲಾದರೂ ನಾವು ಸಾಮುದಾಯಿಕವಾದ ಸಾಮಾನ್ಯಜ್ಞಾನವನ್ನೇ ಬಳಸಿ ನಿತ್ಯದ ಸಾರ್ವಜನಿಕ ವ್ಯವಸ್ಥೆಗಳನ್ನು ಕಟ್ಟುವ ಮತ್ತು ನಿರ್ವಹಿಸುವ ಹೊಸ ಮತ್ತು ಹಳೆಯ ಮಾದರಿಗಳನ್ನು ಪುನರಾವಿಷ್ಕಾರ ಮಾಡಿಕೊಳ್ಳಬೇಕು. ನಾವು ಕಣ್ಣುಬಿಟ್ಟು ನೋಡಿದರೆ, ನಮ್ಮ ಸುತ್ತಲೇ ಅಂಥ ನೂರಾರು ಇತ್ಯಾತ್ಮಕ ಮಾದರಿಗಳ ಕಿರುಧಾರೆಗಳು ಕಾಣುತ್ತವೆಯೆಂಬುದು ನನ್ನ ಅನುಭವ.

ಇವು ಯಾವುದೂ ತೀರ್ಮಾನದ ಮಾತಲ್ಲ, ಅರೆಬರೆ ಆಲೋಚನೆಯ ಒಂದು ಹರಿವು ಮಾತ್ರ. ಆದರೆ, ಈ ಸ್ವಗತದ ಒಳಗಿಂದ ನನಗೊಂದು ನಿಚ್ಚಳ ಪ್ರಶ್ನೆಯಂತೂ ಏಳುತ್ತಿದೆ – ಕೊರೋನಾ ಬಂದಿರುವುದು ನಮ್ಮನ್ನು ಶಿಕ್ಷಿಸಲಿಕ್ಕೂ ಶಿಕ್ಷಣ ನೀಡುವುದಕ್ಕೂ ಇದ್ದೀತೆ? ಈ ಬಿಕ್ಕಟ್ಟೆಂಬುದು, ಜಗನ್ನಿಯಾಮಕ ಶಕ್ತಿಯು ನಮ್ಮೆದುರು ಹೂಡುತ್ತಿರುವ ಒಂದು ದಾರ್ಶನಿಕ ಸವಾಲೆ? ಒಮ್ಮೆ ಹೌದಾಗಿದ್ದರೆ, ಆಗ ಈ ಕಾರಣಕ್ಕೇ ಕೊರೋನಾದ ಮೊದಲೆರಡು ಅಲೆಗಳು ಬಂದಿವೆಯೆಂದೂ ಮನುಕುಲಕ್ಕೆ ಈ ಅಭಿಜ್ಞಾನ ಸರಿಯಾಗಿ ಆಗುವವರೆಗೂ ಮುಂದಿನ ಅಲೆಗಳು ಬಂದು ಅಪ್ಪಳಿಸುತ್ತಲೇ ಇರಬಹುದೆಂದೂ ನನ್ನ ಊಹೆ.



(ಲೇಖಕರು ಹಿರಿಯ ರಂಗಕರ್ಮಿ ಮತ್ತು ನಮ್ಮ ಮುಖ್ಯ ಸಂಸ್ಕೃತಿ ಚಿಂತಕರೂ ಆಗಿದ್ದಾರೆ)

ಬೆಳೆಭೂಮಿಯೊಳಗೊಂದು ಪ್ರಳಯದ ಕಸ ಹುಟ್ಟಿ...

–ಗೀತಾ ವಸಂತ

ಮನುಷ್ಯ ಹಾಗೂ ಪ್ರಕೃತಿಯ ಮಧ್ಯೆ ಇರುವ ಕೊಂಡಿ ಕಳಚಿಬಿದ್ದ ಮರುಕ್ಷಣವೇ ಮನುಷ್ಯನ ಅತಂತ್ರತೆ ಹಾಗೂ ಅವಸಾನವೂ ಆರಂಭವಾಯಿತು. ಪ್ರಳಯವೆಂಬುದು ಒಂದೇ ಸಲ ಸಂಭವಿಸುವ ವಿದ್ಯಮಾನ ಎಂಬ ಭ್ರಮೆಯಲ್ಲಿ ನಾವು ವಿಹರಿಸುತ್ತಿರುವಾಗಲೇ ಅದು ನಮ್ಮನ್ನು ಇಂಚಿಂಚೇ ಆವರಿಸಿಕೊಳ್ಳುತ್ತಿರುವುದನ್ನು ಅರಿಯಲಾರದೇ ಹೋದವರು ನಾವು. ಬಸವಣ್ಣನ ಒಂದು ವಚನ ಇದನ್ನೇ ಎಚ್ಚರಿಸುತ್ತಿದೆ

ಬೆಳೆ ಭೂಮಿಯೊಳಗೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು ಎಚ್ಚರಲೀಯದು
ಎನ್ನವಗುಣವೆಂಬ ಕಸವಕಿತ್ತು ಸಲಹಯ್ಯಾ ಲಿಂಗತಂದೆ
ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ

ಈ ಕಸ ಮೊದಲು ಹುಟ್ಟಿದ್ದು ಮಾನವನ ಮನಸ್ಸಿನಲ್ಲಿ. ನೈಸರ್ಗಿಕ ತಿಳಿವನ್ನು ಬಿಸುಟು ನಾವು ಕಟ್ಟಿಕೊಂಡ ಜ್ಞಾನಶಾಖೆಗಳು ಹಾಗೂ ಅವುಗಳಿಂದ ತಲೆಗೇರಿಸಿಕೊಂಡ ಅಹಂಕಾರ ನಮ್ಮ ತಿಳಿಯುವ ಎಚ್ಚರವನ್ನೇ ಕಿತ್ತುಕೊಂಡುಬಿಟ್ಟವು. ಈ ಕಸವು ಬುದ್ದಿಯನ್ನು ಆವರಿಸಿದಷ್ಟು ಕಾಲವೂ ಅರಿವನ್ನು ಮೊಳೆಯಗೊಡುವುದಿಲ್ಲ. ಆದರೆ ಇದನ್ನು ಕಿತ್ತೆಸೆವ ಮಾರ್ಗಗಳು ನಮಗೆ ತೋಚುತ್ತಿಲ್ಲ. ಮನುಷ್ಯನ ಬದುಕು ಸಾವಯವ ಸಂಬಂಧಗಳ ಜಾಲ. ಇದು ಪರಿಸರಶಾಸ್ತ್ರೀಯ ಸತ್ಯವೂ ಹೌದು, ಆಧ್ಯಾತ್ಮಿಕ ತಿಳಿವೂ ಹೌದು. ಈ ಸೃಷ್ಟಿಯಲ್ಲಿ ಯಾವುದೂ ತಂತಾನೇ ಪರಿಪೂರ್ಣವಲ್ಲ. ಒಂದು ಕೊಂಡಿ ಕಳಚಿದರೆ ಈ ಸಾಮರಸ್ಯವು ಹದಗೆಡುವುದರಲ್ಲಿ ಸಂಶಯವಿಲ್ಲ. ಈ ಸತ್ಯದ ನವದರ್ಶನವನ್ನು ಮಾಡಿಸಬೇಕಾಗಿದ್ದ ವಿಜ್ಞಾನವು ಇಂದು ಲಾಭದಾಶೆಗೆ ಬಿದ್ದ ಧನದಾಹಿಗಳ ಕೈಗೊಂಬೆಯಾಗಿದೆ. ಅದರ ಸತ್ಯಶೋಧದ ಜ್ಞಾನಾಧಾರಿತ ನೆಲೆಯನ್ನು ಕಳಚಿ ಅದನ್ನು ಜನವಿರೋಧಿ ಚಟುವಟಿಕೆಗಳಿಗೆ ಬಳಸಿಕೊಂಡೆವು. ಅದಕ್ಕೆ ಅಭಿವೃದ್ಧಿ ಎಂಬ ಚಂದದ ಹೆಸರನ್ನಿಟ್ಟೆವು. ಭೂಮಿಯ ಬಸಿರು ಬಗೆದು ಗಣಿಗಾರಿಕೆಗಿಳಿದೆವು. ನಗರಗಳ ಹೊಟ್ಟೆ ತುಂಬಿಸಲು ಹರಿವ ನದಿಗಳಿಗೆ ಅಣೆಕಟ್ಟು ಕಟ್ಟಿದೆವು. ಆಹಾರದ ಬಣ್ಣ, ರುಚಿ, ವಾಸನೆ ಹೆಚ್ಚಿಸಲು ಕೃತಕ ರಾಸಾಯನಿಕಗಳನ್ನು ಸುರಿದೆವು, ಜನರ ಆರೋಗ್ಯ ರಕ್ಷಣೆಯನ್ನು ಲಾಭದಾಯಕ ಉದ್ದಿಮೆಯಾಗಿಸಲು ಬಿಟ್ಟೆವು. ನಗರ ಕೇಂದ್ರಿತ ಬದುಕಿನ ಆಕರ್ಷಣೆ ನಮ್ಮನ್ನು ದೀಪಕ್ಕೆ ಮುತ್ತಿದ ಪತಂಗಗಳನ್ನಾಗಿಸಿತು. ಬಲಿಯಾಗದೇ ದಾರಿಯಾದರೂ ಎಲ್ಲಿದೆ? ಎಂಬ ಅಸಹಾಯಕತೆಗೆ ನೂಕಿತು. ಇದಕ್ಕೆಲ್ಲ ಕೊನೆಹಾಡುವುದು ಹೇಗೆ ಹಾಗಾದರೆ?

೧. ತಂತ್ರಜ್ಞಾನದ ವೇಗಕ್ಕೆ ಅಪ್ಡೇಟ್ ಆಗಬಲ್ಲ ನಮಗೆ ನಿಧಾನ ಲಯವೊಂದಕ್ಕೆ ಮರಳಲು ಅಪಾರ ಸಂಯಮಬೇಕೆಂಬುದಂತೂ ನಿಜ. ಇದು ನಮ್ಮ ಜೊತೆ ನಾವೇ ಮಾಡಿಕೊಳ್ಳಬೇಕಾದ ಪ್ರಯೋಗ. ನಮ್ಮ ಬಿಗಿದುಹೋದ ಧಾರ್ಮಿಕ ವ್ಯವಸ್ಥೆಯನ್ನು ಅಧ್ಯಾತ್ಮದ ಆರ್ದ್ರತೆಯಲ್ಲಿ ಅದ್ದಿತೆಗೆಯಬೇಕು. ನೋಂಪಿ, ವ್ರತಗಳ ಮೂಲಕ ದೇಹ ಮನಸ್ಸು ಪ್ರಜ್ಞೆಗಳನ್ನು ಅಪಾರ ಸಂಯಮ ಹಾಗೂ ಆತ್ಮನಿರೀಕ್ಷಣೆಯಲ್ಲಿ ಪರಿವರ್ತಿಸುತ್ತಿದ್ದ ಧಾರ್ಮಿಕ ಆಚರಣೆಗಳಿಗೆ ತೊಡಿಸಿದ ಮೂಲಭೂತವಾದ ಹಾಗೂ ಮೌಢ್ಯದ ಕವಚ ತೆಗೆಯಬೇಕು.

೨. ನಮ್ಮ ಮನೆಗಳಲ್ಲಿ ತುಂಬಿದ ಅನಗತ್ಯ ಸರಕುಗಳು ಹೇಗೆ ನಮಗೇ ಸ್ಥಳವಿಲ್ಲದಂತೆ ಮಾಡಿವೆಯೋ, ನಮ್ಮ ಮನದೊಳಗೆ ತುಂಬಿದ ವಿಚಾರಗಳ ಕಸ ಜೀವಜಾಲದ ಜೊತೆ ಬೆಸೆದಿರುವ ನಮ್ಮ ನಿಜಸ್ವರೂಪವನ್ನು ಅರಿಯದಂತೆ ಮಾಡಿ ಕುಬ್ಜಗೊಳಿಸಿದೆ. ನಮಗೆ ನೆಮ್ಮದಿ ಕೊಡುವ ವಸ್ತುಗಳಾವವು ಎಂದು ಆಳವಾಗಿ ಯೋಚಿಸುತ್ತ ಹೋದಂತೆ ಅನೇಕ ವಸ್ತುಗಳನ್ನು ವಿಸರ್ಜಿಸುತ್ತ ಹೋಗುವ ಧಾರಣಶಕ್ತಿ ತಂತಾನೇ ಬರುತ್ತದೆ.

೩. ಸ್ಪರ್ಧಿಸುವುದಕ್ಕಾಗಿಯೇ ಕಲಿಯಬೇಕೆಂಬ ಇಂದಿನ ಕಲಿಕೆಯ ಮಾದರಿಗಳನ್ನು ತ್ಯಜಿಸಬೇಕು. ಮಾಹಿತಿ ಮತ್ತು ಅರಿವು, ಜ್ಞಾನ ಹಾಗೂ ಕೌಶಲಗಳು ಒಟ್ಟೊಟ್ಟಿಗೇ ಸಾಗಿದಾಗ ಬುದ್ಧಿ ಹಾಗೂ ಭಾವಗಳು ಬೆರೆತ ವ್ಯಕ್ತಿತ್ವಗಳು ಮೂಡುವುದು ಸಾಧ್ಯ. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಕೃಷಿ, ತೋಟಗಾರಿಕೆ, ಕಾರ್ಪೆಂಟರಿ, ಪ್ಲಂಬಿಂಗ್.. ಈ ಬಗೆಯ ಶ್ರಮಮೂಲದ ಕೌಶಲಗಳ ಪ್ರಾಥಮಿಕ ಜ್ಞಾನ ಒದಗಿಸಬೇಕು. ಕಲೆ ವ್ಯವಹಾರ ಹಾಗೂ ವಿಜ್ಞಾನಗಳ ಕಲಿಕೆಯಲ್ಲಿ ಮನುಷ್ಯ ಹಾಗೂ ಪರಿಸರದ ಸಮಗ್ರತೆಯ ತಾತ್ವಿಕತೆಯನ್ನು ಬಿಂಬಿಸುತ್ತ ಹೋಗಬೇಕು. ತಂತ್ರಜ್ಞಾನವನ್ನು ವಿವೇಕದೊಂದಿಗೆ ಬೆಸೆಯುವ ವ್ಯವಧಾನದ ಕಲಿಕೆ ಮುನ್ನೆಲೆಗೆ ಬರಬೇಕು. ನಿಧಾನವಾಗಿಯಾದರೂ ಇಂಥ ಸಂಯಮದ ಅಭ್ಯಾಸವು ನಮ್ಮ ಪ್ರಜ್ಞೆಯನ್ನು ಬದಲಿಸಬಹುದೇನೋ.

೪. ಯಂತ್ರನಾಗರಿಕತೆಯ ಸಂಸರ್ಗದಿಂದ ಯಂತ್ರದಂತಾದ ಮನುಷ್ಯ ತನ್ನೊಳಗೆ ಹರಿವ ಪ್ರಜ್ಞೆಯ ನಾದವನ್ನು ಆಲಿಸುವಂತಾದರೆ, ಅಧಿಕಾರದಿಂದ ಕಿರುಗುಟ್ಟುತ್ತಿರುವ ಸರ್ಕಾರಿ ಯಂತ್ರಗಳಿಗೆ ಜೀವಪರವಾದ ಸಂವೇದನೆಗಳು ಮೂಡಿದರೆ ನಿಧಾನವಾಗಿ ಬದಲಾವಣೆಯ ಮೊಳಕೆಗಳು ಮೂಡಬಹುದು. ಆಡಳಿತ ಹಾಗೂ ಅಭಿವೃದ್ಧಿ ನೀತಿಗಳನ್ನು ನಿರೂಪಿಸುವ ಅಧಿಕಾರ ಸ್ಥಾನಗಳಲ್ಲಿ ಸಂವೇದನಾಶೀಲ ನವಪೀಳಿಗೆಯೊಂದು ಪ್ರವೇಶಿಸಲು ಅನುವಾಗುವಂತೆ ನಮ್ಮ ಚುನಾವಣಾ ರಾಜಕೀಯ ವ್ಯವಸ್ಥೆಯನ್ನು ಬದಲಿಸಿಕೊಳ್ಳಬೇಕು.


೫. ನಗರಮುಖಿ ಚಲನೆಗೆ ಮುಖ್ಯ ಕಾರಣ ಆರ್ಥಿಕ ಅನಿವಾರ್ಯತೆಯ ಜೊತೆಗೆ ಗ್ರಾಮೀಣ ಬದುಕಿನ ಜಾತಿ ಅವಮಾನಗಳು, ಲಿಂಗತಾರತಮ್ಯ ಮುಂತಾದ ಕಟ್ಟುಪಾಡುಗಳ ಕಟ್ಟುಬಿಚ್ಚಿ ಅವಕಾಶಗಳ ಆಕಾಶ ಹುಡುಕುವ ಹಂಬಲ. ಆದರೆ ನಗರಗಳ ಕಾರ್ಪೊರೇಟ್ ಜಗತ್ತು ಕೂಡ ಅವಕಾಶಗಳ ಹೆಸರಿನಲ್ಲಿ ಸ್ವಂತಿಕೆಯನ್ನೇ ಹೀರಿ ಮಾನವಯಂತ್ರಗಳನ್ನು ರೂಪಿಸುತ್ತಿರುವ ಹಿಂದಿನ ತಣ್ಣನೆ ಕ್ರೌರ್ಯವೂ ನಮಗೆ ಅರಿವಾಗಬೇಕು. ಹಳ್ಳಿಗಳ ಆತ್ಮವನ್ನು ಕಲುಷಿತಗೊಳಿಸಿದ ಕೇಡುಗಳನ್ನು ಕಿತ್ತೆಸೆದು ನಿಜ ಅರ್ಥದಲ್ಲಿ ಅದನ್ನು ಫಲವತ್ತಾದ ಬೆಳೆಭೂಮಿಯಾಗಿ ಮಾರ್ಪಡಿಸಿದರೆ ಗ್ರಾಮಗಳಿಗೆ ಹಿಂದಿರುಗುವ ಕನಸುಗಳೂ ಮೊಳೆಯಬಹುದು. ಗ್ರಾಮಸ್ವರಾಜ್ಯಗಳಾಗಬೇಕಾದರೆ ಅಲ್ಲಿ ಸರ್ವರ ವಿಕಾಸದ ತಾತ್ವಿಕತೆಯೇ ಎಲ್ಲ ನೀತಿ ನಿರೂಪಣೆಗಳ ಹಿಂದೆ ಇರಬೇಕು.

೬. ಜನಸಂಖ್ಯೆಯ ಅರ್ಧದಷ್ಟಿರುವ ಸ್ತ್ರೀಯರ ಕುರಿತು ಯೋಚಿಸದೇ ಈ ಚರ್ಚೆ ಪೂರ್ಣವಾಗುವುದಿಲ್ಲ. ಹೊಸಪೀಳಿಗೆಯ ಹುಡುಗಿಯರು ಗ್ರಾಮೀಣ ಪ್ರದೇಶದಲ್ಲಿ ಬದುಕಲು ಇಚ್ಛಿಸದೇ ಇರುವುದು ಅಲ್ಲಿನ ಕುಟುಂಬ ಹಾಗೂ ಸಮಾಜ ವ್ಯವಸ್ಥೆಯನ್ನು ಭಗ್ನಗೊಳಿಸುತ್ತಿದೆಯೆಂದು ದೂರಲಾಗುತ್ತದೆ. ತಮ್ಮ ಬಗೆಗಿನ ಪೂರ್ವಗ್ರಹಗಳನ್ನು ಕಳಚಿಕೊಂಡು ಹೊಸಅರಿವಿನಲ್ಲಿ ತಮ್ಮನ್ನು ಶೋಧಿಸಿಕೊಳ್ಳುತ್ತಿರುವ ಅವರ ಸ್ವತಂತ್ರ ಪ್ರಜ್ಞೆಯನ್ನು ಧನಾತ್ಮಕವಾಗಿ ಸ್ವೀಕರಿಸಿದಾಗ ಮಾತ್ರ ಅವರು ತಾವಿರುವಲ್ಲಿಯೇ ಅರಳಬಲ್ಲರು. ಮಹಿಳೆಯರ ಶ್ರಮಕ್ಕೆ ಬೆಲೆ ಹಾಗೂ ಗೌರವಗಳೆರಡೂ ದೊರೆತಾಗ ಅವರೂ ಹಳ್ಳಿಗಳ ಆರ್ಥಿಕಶಕ್ತಿಯ ಭಾಗವಾಗಿ ಬೆಳೆಯಬಲ್ಲರು. ನೇಯುವ, ಕಾಯುವ, ಕಟ್ಟುವ, ಪೋಷಿಸುವ ಹೆಣ್ತನದ ತಾದಾತ್ಮ್ಯವು ಬದುಕನ್ನು ಕಟ್ಟುವ ತಾತ್ವಿಕತೆಯಾಗಿಯೂ ನಮ್ಮನ್ನು ಗೆಲ್ಲಿಸಬಲ್ಲದು.

೭. ಯಂತ್ರಗಳನ್ನು ಕಳಚುವ ವಿಚಾರ ಬಂದಾಗಲೆಲ್ಲ ಅವು ನಮಗೆ ಕೊಟ್ಟ ಸಮಯ ಹಾಗೂ ಸ್ವಾತಂತ್ರ್ಯವನ್ನು ಅಲ್ಲಗಳೆಯಲು ಸಾಧ್ಯವಾಗುವುದಿಲ್ಲ. ದಿನವಿಡೀ ಅಡಿಗೆಮನೆಯಲ್ಲಿ ಕರಗಿಹೋಗುತ್ತಿದ್ದ ಹೆಂಗಸರಿಗೆ ಸಿಕ್ಕ ಚಿಕ್ಕ ಬಿಡುವು ತಮ್ಮನ್ನು ಅರಿಯಲು ಅವಕಾಶಕೊಟ್ಟಿತು. ಸಂಪರ್ಕ ಸಾಧನಗಳು ನಮ್ಮ ಜ್ಞಾನದ ಮಿತಿಯನ್ನು ಹಿಗ್ಗಿಸಿ ದೃಷ್ಟಿಕೋನಗಳನ್ನು ಬದಲಾಯಿಸಿದವು. ಈ ಚರ್ಚೆ ನಡೆಸುತ್ತಿರುವುದರ ಹಿಂದೆಯೂ ಈ ಎಲ್ಲ ಅನುಕೂಲಗಳಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ನಮಗೆ ನಿಜವಾಗಿ ಬೇಕಾಗಿರುವುದು ಆಧುನಿಕತೆ ನಿರ್ಮಿಸಿದ ಸವಲತ್ತುಗಳನ್ನು ವಿವೇಚನೆಯಿಂದ ಬಳಸುವ ಅರಿವು. ನಾವು ಯಂತ್ರಗಳ ಅಡಿಯಾಳಾಗದೇ, ನಮ್ಮ ನಿಯಂತ್ರಣದಲ್ಲಿ ಯಂತ್ರಗಳನ್ನು ಬಳಸುವ ಆತ್ಮಬಲ.

೮. ಮನುಷ್ಯ ಕೇಂದ್ರಿತ ಬದುಕನ್ನು ಜೀವಕೇಂದ್ರಿತವಾಗಿ, ಪರಿಸರಕೇಂದ್ರಿತವಾಗಿ ಪರಿಭಾವಿಸುವ ದೃಷ್ಟಿಪಲ್ಲಟವು ನಮ್ಮ ಪ್ರಜ್ಞೆಯ ಪರಿಧಿಯನ್ನು ವಿಸ್ತರಿಸುತ್ತ ಹೋಗುತ್ತದೆ. ವಿಶ್ವಮೈತ್ರಿಯ ಸಮಗ್ರತೆಯ ಆಧ್ಯಾತ್ಮಿಕ ಅರಿವು ಮಾತ್ರ ಜಗತ್ತನ್ನು ಉಳಿಸಬಲ್ಲದು. ಅಧ್ಯಾತ್ಮವೂ ಕಾರ್ಪೊರೇಟೀಕರಣಗೊಂಡಿರುವ ಇಂದು ಪ್ರಳಯದ ಕಸಕೀಳಲು ನಾವು ಇನ್ನಷ್ಟು ವಾಸ್ತವದ ನೆಲೆಯಲ್ಲಿ ಯೋಚಿಸುವ ಅಗತ್ಯವಿದೆ. ವಿಶ್ವನಿಯಮಗಳ ಸಂಕೀರ್ಣ ಸಮಗ್ರತೆಯನ್ನು ಶುದ್ಧವಿಜ್ಞಾನ ಹಾಗೂ ಅಧ್ಯಾತ್ಮದ ಸಮಗ್ರತೆಯಲ್ಲಿ ಅರಿತು ಬದುಕುವ ಹೊಸಪೀಳಿಗೆ ನಿರ್ಮಾಣವಾಗದೇ ಉಳಿವಿಲ್ಲ.

೯. ಈ ಎಲ್ಲ ವೈಯಕ್ತಿಕ ನೀತಿಸಂಹಿತೆಗಳು ಕಾರ್ಯರೂಪಕ್ಕೆ ಬರಲು ರಾಜಕೀಯ ಇಚ್ಛಾಶಕ್ತಿಯೂ ಬಹುಮುಖ್ಯ. ಪ್ರಜಾಪ್ರಭುತ್ವವೆಂದರೆ ಪ್ರಜೆಗಳೇ ಪ್ರಜೆಗಳನ್ನು ದೋಚುವ ಪ್ರಭುತ್ವ ಪಡೆದುಕೊಳ್ಳುವುದಲ್ಲ. ಜಾತಿ ಧರ್ಮಗಳ ಹೆಸರಲ್ಲಿ ಜನರನ್ನು ಕೆರಳಿಸುವ ಅಗ್ಗದ ತಂತ್ರಗಳ ಬದಲು ಸಮಗ್ರ ಅಧ್ಯಯನ, ಸಮರ್ಪಕ ಯೋಜನೆಗಳ ಮೂಲಕಸರ್ವೋದಯವನ್ನು ಸಾಧಿಸುವ ರಾಜನೀತಿ ರೂಪುಗೊಳ್ಳಬೇಕು. ಶಿಕ್ಷಣನೀತಿ, ಅಭಿವೃದ್ಧಿ ನೀತಿ, ರಾಜನೀತಿ ಎಂದೆಲ್ಲ ಕರೆಸಿಕೊಳ್ಳುವ ನಿರ್ಣಾಯಕ ಸಂಗತಿಗಳು ಕಾಗದದ ಮೇಲಿನ ಒಕ್ಕಣೆಗಳಾಗದೇ ಅದರಲ್ಲಿ 'ನೀತಿ'ಯ ಅಂಶ ನಿಜವಾಗಿ ಬೆರೆತರೆ ಜೀವನವನ್ನು ಕಾಣುವ ಹಾಗೂ ಕಟ್ಟುವ ನೋಟಕ್ರಮಗಳು ಬದಲಾಗುತ್ತವೆ. ಅದಕ್ಕಾಗಿ ಕೊಂಚ ಕುಳಿತು ಧ್ಯಾನಿಸಿ ಮುನ್ನಡೆಯದೇ ವಿಧಿಯಿಲ್ಲ.



(ಕನ್ನಡ ಅಧ್ಯಾಪಕಿಯಾಗಿರುವ ಲೇಖಕಿ ಗಮನಾರ್ಹ ಕವಯತ್ರಿ, ಕಥೆಗಾರ್ತಿ ಮತ್ತು ವಿಮರ್ಶಕಿಯೂ ಆಗಿದ್ದಾರೆ.).

ನನ್ನ ಹತ್ತಿರ ಇರುವುದು ಕೇವಲ ನಾಲ್ಕು ಜೊತೆ ಖಾದಿ ಬಟ್ಟೆಗಳು....

–ಸಂತೋಷ ಕೌಲಗಿ

ಹದಿನೇಳನೇ ಶತಮಾನದ ಕೈಗಾರಿಕಾ ಕ್ರಾಂತಿಯೊಂದಿಗೆ ಪ್ರಾರಂಭವಾದ ಅಭಿವೃದ್ಧಿ ಮಾದರಿಯನ್ನು ಪುನರವಲೋಕಿಸುವ ಸಮಯ ಬಂದಿದೆ. ಮುನ್ನೂರು ವರ್ಷಗಳಲ್ಲಿ ಈ ಅಭಿವೃದ್ಧಿ ಮಾದರಿ ಮನುಷ್ಯನಿಗೆ ಅನೇಕ ಸುಖ ಸವಲತ್ತುಗಳೊಂದಿಗೆ ಹಲವಾರು ಸಮಸ್ಯೆಗಳನ್ನೂ ತಂದು ಕೊಟ್ಟಿದೆ. ಈ ಅಭಿವೃದ್ಧಿಯ ವಿಷಯದಲ್ಲಿ ಎಲ್ಲರದೂ 'ನೆಂಟರ ಮೇಲೆ ಆಸೆ ಅಕ್ಕಿಯ ಮೇಲೆ ಪ್ರೀತಿ' ಎಂಬ ಭಾವ. ಉಗಿಯಲೂ ಆಗದ, ನುಂಗಲೂ ಆಗದ ಬಿಸಿತುಪ್ಪ. ತಾನು ಮುಟ್ಟಿದೆಲ್ಲಾ ಚಿನ್ನವಾಗಲಿ ಎಂದು ವರ ಪಡೆದ ಮೈದಾಸನ ಕತೆಯಾಗಿದೆ ಮಾನವನ ಬಾಳು. ಎಲ್ಲವನ್ನೂ ವಿರೂಪಗೊಳಿಸುವ, ಎಲ್ಲದಕ್ಕೂ ಬೇರೆ ಅರ್ಥವನ್ನೇ ತಂದಿಡುವ ಶಕ್ತಿ ಮಾನವನಲ್ಲಿ ವಿಪರೀತವಿದೆ. ಹಾಗಾಗಿ 'ಅಭಿವೃದ್ಧಿ' ಶಬ್ದಕ್ಕೂ ಅದೇ ಗತಿಯನ್ನು ತರಲಾಗಿದೆ. ಇತ್ತೀಚಿನ ವರ್ಷಗಳಲ್ಲಂತೂ 'ಅಭಿವೃದ್ಧಿ' ಎಂದರೆ ದೊಡ್ಡ ರಸ್ತೆಗಳು, ಕಟ್ಟಡಗಳು, ವಿದ್ಯುತ್ ಕಂಬಗಳು ಎನ್ನುವ ಮಟ್ಟಕ್ಕೆ ಅದರ ಅರ್ಥವನ್ನು ತಂದು ನಿಲ್ಲಿಸಲಾಗಿದೆ. ಅಭಿವೃದ್ಧಿ ಎಂಬುದು ಒಂದು ರೀತಿಯಲ್ಲಿ ಯಾರೂ ಹಿಡಿದು ನಿಲ್ಲಿಸಲಾಗದ ಹುಚ್ಚು ಕುದುರೆಯ ಓಟವಾಗಿದೆ. ನಾವು ಏರಿರುವ ಈ ಹುಚ್ಚು ಕುದುರೆ ಇಂದು ದೊಡ್ಡ ಪ್ರಪಾತದ ಹತ್ತಿರ ಓಡತೊಡಗಿದೆ. ಒಂದು ಹೆಜ್ಜೆ ಮುಂದಿಟ್ಟರೂ ನಮ್ಮೊಂದಿಗೆ ಅದು ಪ್ರಪಾತದಲ್ಲಿ ಬಿದ್ದು ಹೋಗಲಿದೆ. ಇದರ ಅರಿವಿದ್ದರೂ ಮಾನವನಿಗೆ ಮನಸ್ಸಿನ ಆಳದಲ್ಲಿ ವಿಜ್ಞಾನ/ತಂತ್ರಜ್ಞಾನ ಎಂಬ ಲಗಾಮಿನ ಮೇಲೆ ಎಲ್ಲಿಲ್ಲದ ನಂಬಿಕೆ. ಈ 'ಲಗಾಮು' ಎಲ್ಲ ಸಮಸ್ಯೆಗಳನ್ನೂ ನಿಯಂತ್ರಣದಲ್ಲಿ ಇಡಬಲ್ಲದು ಎಂಬ ಕುರುಡು ವಿಶ್ವಾಸ. ಇದು ಇಂದಿನ ಅಪಾಯ. ಇದೊಂದು ರೀತಿಯ ಆಧುನಿಕ ಮೌಢ್ಯ.

ಈ ಅಭಿವೃದ್ಧಿ ಸರಿಯಿಲ್ಲ ಎಂದಾದರೆ ಅದನ್ನು ಹೇಗೆ ಪ್ರಶ್ನಿಸಬೇಕು, ಯಾವ ರೀತಿಯಲ್ಲಿ ವಿಮರ್ಶೆಗೆ ಒಳಪಡಿಸಬೇಕು ಎಂಬುದೇ ಇಂದಿನ ದೊಡ್ಡ ಸವಾಲು. ಅದರ ಹಂಗಿನಲ್ಲಿ ನಾವೆಷ್ಟು ಸಿಲುಕಿದ್ದೀವೆಂದರೆ ಅದನ್ನು ಟೀಕೆ ಮಾಡಿದರೂ ಹಾಸ್ಯಾಸ್ಪದರಾಗುವ ಮಟ್ಟಕ್ಕೆ ಬಂದು ನಿಂತಿದ್ದೇವೆ. ಇದೇ ಮಾದರಿಯನ್ನು ಉಳಿಸಿಕೊಳ್ಳ ಬಯಸುವವರು ಕ್ಲೀನ್ ಟೆಕ್ನಾಲಜಿಯ ಬಗ್ಗೆ ಮಾತನಾಡುತ್ತಾರೆಯೇ ಹೊರತು ಜೀವನ ವಿಧಾನದಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆಂಬ ವಿಚಾರವನ್ನು ಹತ್ತಿರವೂ ಸುಳಿಯಗೊಡುವುದಿಲ್ಲ. ಇದನ್ನು ಬಿಟ್ಟು ಪರಿಸರದ ಧಾರಣಾ ಶಕ್ತಿಯ ಮಿತಿಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಮಾದರಿ ಬೇಕು ಎಂದು ಮಾತನಾಡುವವರು ಸೂಚಿಸುವ ಮಾದರಿಯು ಅಪಾಯವಿಲ್ಲದ, ಪರಿಸರ ಪೂರಕವಾದ, ವಿಕೇಂದ್ರಿಕೃತ ಅಭಿವೃದ್ಧಿಯ ಕಲ್ಪನೆಯನ್ನು ಹೊಂದಿದೆ. ಇದು ಒಂದು ಮಟ್ಟಿಗೆ ನಮ್ಮ ಭೋಗದ ಜೀವನವನ್ನು ತ್ಯಜಿಸು ಎಂದು ಹೇಳುವ ಮಾದರಿಯದಾಗಿದೆ. ಈ ಮಾದರಿಯ ಬಗ್ಗೆ ಮಾತನಾಡಲು ಬಹಳ ದೊಡ್ಡ ನೈತಿಕ ಶಕ್ತಿ ಬೇಕು. ಆ ನೈತಿಕ ಶಕ್ತಿಯು ವೈಯುಕ್ತಿಕ ಬದುಕನ್ನು ಆ ಮಾದರಿಯಲ್ಲಿ ರೂಢಿಸಿಕೊಂಡಿದ್ದಾಗಷ್ಟೇ ನಮಗೆ ಲಭ್ಯವಾಗಿರುತ್ತದೆ. ಇದನ್ನು ಬದಲಾಯಿಸಿ ಎಂದು ಯಾರಿಗೆ ಹೇಳುವುದು? ಬದಲಾಯಿಸಿ ಎಂದು ಯಾರಿಗೆ ಹೇಳುತ್ತೇವೋ ಅವರ ಕೈಯಲ್ಲೂ ಇದರ ಲಗಾಮು ಇಲ್ಲ. ಅವರೂ ಸಹ ಇದರ ಓಟಕ್ಕೆ ಇಂಬು ಕೊಡುವವರೇ ಆಗಿರುತ್ತಾರೆ.

ಇಂದಿನ ನಮ್ಮ ನೀತಿ ನಿರೂಪಕರಿಗೆ ಈ ಅಭಿವೃದ್ಧಿ ಮಾದರಿಯೇ ಇಷ್ಟ. ಕೇಂದ್ರೀಕೃತವಾದ, ಅಪಾರ ಬಂಡವಾಳದ ಈ ಅಭಿವೃದ್ಧಿ ಮಾದರಿಯಿಂದ ಜನರನ್ನು ನಿಯಂತ್ರಿಸುವುದು ಮತ್ತು ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸುವುದು ಸುಲಭ. ಹಾಗಾಗಿ ಅದು ನಾಗರಿಕರಿಗೆ ಒಂದಿಷ್ಟು ಸವಲತ್ತುಗಳನ್ನು ನೀಡುತ್ತಾ ಈ ವ್ಯವಸ್ಥೆಯನ್ನು ಹಾಗೆಯೇ ಉಳಿಸಿಕೊಳ್ಳುತ್ತದೆ.

ಪ್ರಸ್ತುತ ಪ್ರಪಂಚ ಎದುರಿಸುತ್ತಿರುವ ಕೊರೋನಾ ಸಾಂಕ್ರಾಮಿಕ ರೋಗದ ಪರಿಸ್ಥಿತಿಯನ್ನು ಗಮನಿಸಿ. ಈ ಕಾಯಿಲೆಗೆ ಕಾರಣ ಪ್ರಕೃತಿಯ ಸಮತೋಲನ ತಪ್ಪಿದ್ದು. ಸಮತೋಲನ ಏಕೆ ತಪ್ಪಿತು? ಇಡೀ ಭೂಮಂಡಲವನ್ನು ತನ್ನದಾಗಿಸಿಕೊಳ್ಳಬೇಕೆನ್ನುವ ಮನುಷ್ಯನ ಆಸೆಯಿಂದ. ಇಂತಹ ಸಂಕಷ್ಟ ಸಮಯದಲ್ಲಾದರೂ ನಮಗೆ ನಾವು ಮಾಡಿರುವ ತಪ್ಪು ಅರಿವಿಗೆ ಬರುತ್ತಿದೆಯೇ? ಇಲ್ಲ. ನಾವು ನಡೆದು ಬಂದ ದಾರಿಯನ್ನು ಪುನರಾವಲೋಕನ ಮಾಡಬೇಕೆಂದು ಯಾರಾದರೂ ಮಾತನಾಡುತ್ತಿದ್ದಾರೆಯೇ? ಇಲ್ಲ. ಇಷ್ಟು ಭೀಕರ ಸಾವು ನೋವು ಆಗುತ್ತಿದ್ದರೂ ಈ ಸಮಸ್ಯೆಯನ್ನು ಕೇವಲ ಆಮ್ಲಜನಕದ ಕೊರತೆ, ಲಸಿಕೆ ಅಲಭ್ಯ, ಆಸ್ಪತ್ರೆಗಳಲ್ಲಿ ಹಾಸಿಗೆ ದೊರಕದಿರುವದು ಮುಂತಾದ ತಾಂತ್ರಿಕ ಸಮಸ್ಯೆಗಳಿಗಷ್ಟೇ ಸೀಮಿತಗೊಳಿಸಲಾಗುತ್ತದೆ. ಸಾರ್ವಜನಿಕರೂ ಹಾಗೆಯೇ ಮಾಡುತ್ತಿದ್ದಾರೆ, ಸರ್ಕಾರಗಳೂ ಹಾಗೆಯೇ ಅಂದು ಕೊಂಡಿವೆ. ಹೌದು ತುರ್ತಿನ ಸಮಯದಲ್ಲಿ ಮೇಲೆ ಎತ್ತಿದ ಪ್ರಶ್ನೆಗಳನ್ನು ಕೇಳಲಾಗುವುದಿಲ್ಲ ನಿಜ. ಈ ಸಂಕಷ್ಟ ಮುಗಿದ ಮೇಲೆ? ಎಲ್ಲವನ್ನೂ ಮರೆತು ಮತ್ತೆ ನಮ್ಮ ಹಳೆಯ ಜೀವನ ವಿಧಾನದ ಕಡೆಗೆ ಎಲ್ಲರೂ ತಿರುಗುತ್ತೇವೆ. ಮತ್ತೆ ನಮ್ಮ ಹಳೆಯ ಜಾಡಿಗೆ ತಿರುಗಬಾರದೆಂದರೆ ನಾವು ಈ ಸಮಯದಲ್ಲಿ ಅನುಭವಿಸಿದ ಕಹಿ ಅನುಭವದಿಂದ, ನಮ್ಮವರನ್ನು ಕಳೆದುಕೊಂಡ ನೋವಿನಿಂದ ಕೆಲವು ಸಂಕಲ್ಪವನ್ನು ಮಾಡುವುದು ಅನಿವಾರ್ಯವಾಗಿದೆ. ಕೆಲವು ಸಂಕಲ್ಪಗಳು ವೈಯುಕ್ತಿಕ ಮಟ್ಟದ್ದಾಗಿದ್ದರೆ ಕೆಲವು ಸಾರ್ವಜನಿಕ ನೆಲೆಯಲ್ಲಿ ಮಾಡಬೇಕಾದ್ದಾಗಿದೆ. ಈ ಸಂಕಲ್ಪಗಳನ್ನು ಮಾಡುವುದು ಮತ್ತು ರೂಢಿಗೆ ತರುವುದು ಕಷ್ಟ ಎನಿಸಬಹುದು ಆದರೆ ಮುಂದೆ ಪ್ರಕೃತಿ ಒಡ್ಡಬಹುದಾದ ಸವಾಲುಗಳನ್ನು ನೆನೆದುಕೊಂಡು ಆ ಬದಲಾವಣೆಗಳನ್ನು ಮಾಡಿಕೊಳ್ಳಲೇಬೇಕಿದೆ. ವೈಯುಕ್ತಿಕ ನೆಲೆಯಲ್ಲಿ ಮಾಡಬಹುದಾದ ಮೊದಲ ಸಂಕಲ್ಪ ಎಂದರೆ ಕೊಳ್ಳುಬಾಕತನವನ್ನು ಆದಷ್ಟು ಕಡಿಮೆ ಮಾಡಿಕೊಳ್ಳುವುದು. ಇದನ್ನು ನಾನು ಧೈರ್ಯವಾಗಿ ಹೇಳಬಲ್ಲೆ. ಏಕೆಂದರೆ ನನ್ನ ಹತ್ತಿರ ಇರುವುದು ಕೇವಲ ನಾಲ್ಕು ಜೊತೆ ಖಾದಿ ಬಟ್ಟೆಗಳು, ಚಪ್ಪಲಿಯಂತೂ ಒಂದು ಜೊತೆ. ಅದು ಹರಿದ ಮೇಲೆಯೇ ಇನ್ನೊಂದು ಖರೀದಿಸುವುದು. ಮಿಕ್ಕಂತೆ ನನ್ನ ಅಗತ್ಯಗಳೆಲ್ಲವನ್ನೂ ಕನಿಷ್ಠ ಮಟ್ಟಕ್ಕೆ ತಂದು ನಿಲ್ಲಿಸಿಕೊಂಡಿದ್ದೇನೆ. ನನ್ನದೇ ಎಂಬ ಪ್ರತ್ಯೇಕ ಕಪಾಟು ಕೂಡ ಇಲ್ಲ. ನನ್ನ ಇಬ್ಬರು ಮಕ್ಕಳ ಮದುವೆಯನ್ನು ಬಹಳ ಸರಳವಾಗಿ ಮಾಡಿದ್ದೇನೆ. ಅವರಿಗೂ ಸಹ ಕೊಳ್ಳುಬಾಕ ಸಂಸ್ಕೃತಿಯಿಂದ ಹೊರಗುಳಿಯುವ ವಿಚಾರ ಮನದಟ್ಟಾಗಿದೆ. ಅನಗತ್ಯವಾದ ಪ್ರಯಾಣವನ್ನು ಕಡಿಮೆ ಮಾಡಿದ್ದೇನೆ. ಮಿಕ್ಕಂತೆ ಯಾವುದೇ ದುಷ್ಟ ಚಟಗಳು ಇಲ್ಲದಿರುವುದರಿಂದ ವೈಯುಕ್ತಿಕ ಖರ್ಚು ಎಂಬುದು ಬಹಳ ಕಮ್ಮಿ ಇದೆ. ಹಾಗಾಗಿ ಹಣದ ಅಗತ್ಯ ಬಹಳ ಇಲ್ಲ. ಇಪ್ಪತ್ತೈದು ವರ್ಷದ ಹಳೆಯ ಕಾರನ್ನು ಬಳಸುತ್ತಿದ್ದೇನೆ. ಇದು ಕೇವಲ ಕಾರು ಆಗಿರದೆ ಸಾಮಾನುಗಳನ್ನು ಸಾಗಿಸುವ ವಾಹನವೂ ಆಗಿದೆ. ನನ್ನ ಹೆಚ್ಚಿನ ಸಮಯವನ್ನು ಸೇವಾ ಚಟುವಟಿಕೆ, ಕೃಷಿ, ಪರಿಸರ ಮತ್ತು ಗ್ರಾಮೋದ್ಯೋಗ ಚಟುವಟಿಕೆಯಲ್ಲಿ ಕಳೆಯುತ್ತೇನೆ. ಹಾಗಾಗಿ ನನ್ನ ಸಾಮಾನ್ಯ ಆರೋಗ್ಯ ಚೆನ್ನಾಗಿದೆ. ಸಂಕೀರ್ಣವಾಗಿ ಯೋಚಿಸುವುದನ್ನು ಕಡಿಮೆ ಮಾಡಿಕೊಂಡಿದ್ದೇನೆ. ಬದುಕನ್ನು ಹೆಚ್ಚು ಹೆಚ್ಚು ಪಾರದರ್ಶಕಗೊಳಿಸುವ ಕಡೆಗೆ ಪ್ರಯತ್ನ ನಡೆಸಿದ್ದೇನೆ. ಎಲ್ಲರನ್ನೂ ಪ್ರೀತಿಸುವುದನ್ನು ಕಲಿತಿದ್ದೇನೆ. ಹೋಲಿಕೆ ಮಾಡಿಕೊಳ್ಳುವುದನ್ನು ಹೆಚ್ಚೂ ಕಡಿಮೆ ಬಿಟ್ಟಿದ್ದೇನೆ. ನನ್ನ ಈ ಬದುಕು ಹಲವರ ಮೇಲೆ ಪ್ರಭಾವ ಬೀರಿದೆ. ಸಾರ್ವಜನಿಕವಾಗಿ ಮಾಡಬೇಕಿರುವುದೆಂದರೆ ನಮ್ಮ ಪಂಚಾಯತಿಗಳಿಗೆ ಹೆಚ್ಚಿನ ಶಕ್ತಿ ದೊರಕುವಂತೆ ಮಾಡುವುದು ಅವುಗಳ ವ್ಯಾಪ್ತಿಯಲ್ಲಿ ಬರುವ ಪ್ರಾಕೃತಿಕ ಸಂಪನ್ಮೂಲಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ನೀಡುವ ರಾಜಕೀಯ ವ್ಯವಸ್ಥೆಯ ಕಡೆಗೆ ಕೆಲಸ ಮಾಡಬೇಕಿದೆ. ಅವರಿಗೆ ಬೇಕಿದ್ದರೆ ಉಳಿಸಿಕೊಳ್ಳುತ್ತಾರೆ ಇಲ್ಲವೇ ಸಾಯುತ್ತಾರೆ ಎಂಬ ತೀರ್ಮಾನ ಮಾಡಬೇಕಿದೆ.

ಸದ್ಯಕ್ಕೆ ನಮ್ಮ ನೆಲೆಯಲ್ಲಿ ಮಾಡಬಹುದಾದ್ದು ಇಷ್ಟೆ. ಇನ್ನೂ ಮಿತಿಮೀರಿ ನಡೆದರೆ ಕೊರೋನಾ ಎಲ್ಲವನ್ನೂ ನೋಡಿಕೊಳ್ಳುತ್ತದೆ ಎಂದು ಅದರ ಮೇಲೆ ಭಾರ ಹಾಕಿ ಸುಖವಾಗಿ ನಿದ್ದೆ ಮಾಡುತ್ತಿದ್ದೇನೆ.



(ಮೇಲುಕೋಟೆಯಲ್ಲಿನ ಜನಪದ ಸೇವಾ ಟ್ರಸ್ಟ್‌ನ ಕಾರ್ಯದರ್ಶಿಯಾಗಿರುವ ಲೇಖಕರು ಖಾದಿ ಮತ್ತು ಗ್ರಾಮೋದ್ಯೋಗಗಳ ಪೋಷಣೆಯಲ್ಲಿ ತೊಡಗಿಕೊಂಡಿದ್ದಾರೆ)

ಆರಂಭಕ್ಕೆ ಐದು ಸರಳ ಸೂತ್ರಗಳು

–ಕೇಶವ ಎಚ್. ಕೊರ್ಸೆ

'ಆಧುನಿಕ ಅಭಿವೃದ್ಧಿ'ಯೆಂಬುದು ದೀರ್ಘಕಾಲ ನಿರ್ವಹಿಸಲು ಸಾಧ್ಯವಾಗದ ಹಾಗೂ ಬಹುಜನರಿಗೆ ಎಟುಕದ ವ್ಯಾಪಾರವಾಗಿ ಮಾರ್ಪಟ್ಟಿದೆ ಎಂಬುದರಲ್ಲಿ, ಈಗ ಯಾವುದೇ ಸಂಶಯಗಳು ಉಳಿದಿಲ್ಲ. ಏಕೆಂದರೆ, ಅನಾದಿಯಿಂದ ಪ್ರಕೃತಿಯ ಚಕ್ರೀಯ ನಿಯಮಗಳ ಮಿತಿಯಲ್ಲಿದ್ದ ನಮ್ಮ ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ವಿಧಾನಗಳು, ನಿಸರ್ಗದೊಂದಿಗೆ ಒಂದುಮಟ್ಟದ ಸಮತೋಲನದಲ್ಲಿದ್ದವು. ಈಗ ನಮ್ಮ ಜೀವನವಿಧಾನಗಳು ಈ ಶಿಸ್ತನ್ನೆಲ್ಲ ಮುರಿದು ಸಾಗುತ್ತಿರುವದೇ ಸಮಸ್ಯೆಗಳ ಮೂಲವಾಗಿದೆಯೆನ್ನಬೇಕು. ಹೀಗಾಗಿ, ಈಗ ಉಳಿದಿರುವ ಏಕೈಕ ದಾರಿಯೆಂದರೆ, ಈ 'ಅಭಿವೃದ್ಧಿ' ಸ್ವರೂಪಗಳನ್ನೆಲ್ಲ, ನಿಸರ್ಗದ ಚಕ್ರೀಯ ವ್ಯವಸ್ಥೆಯೊಳಗೆ ವಾಪಾಸು ತರುವುದೇ ಆಗಿದೆ.

ಈ ನಿಟ್ಟಿನಲ್ಲಿ ನಾವು ಮುಂದೆ ಹೇಗೆ ಸಾಗಬಹುದು? ಓರ್ವ ವ್ಯಕ್ತಿಯಾಗಿ, ಒಂದು ಕುಟುಂಬವಾಗಿ ಹಾಗೂ ಸಮಾಜವಾಗಿ ಹೇಗೆ ಹೆಜ್ಜೆಯಿಡಬಹುದು? ಈ ದಿಸೆಯಲ್ಲಿ ಕಳೆದ ಹಲವು ದಶಕಗಳಿಂದ ನಾವು ಕೈಗೊಂಡಿರುವ ಕೆಲವು ಪರಿಣಾಮಕಾರಿ ದಾರಿಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುವುದಾದರೆ, ಸಮುದಾಯವಾಗಿ ಇವನ್ನು ಅನುಷ್ಠಾನಗೊಳಿಸುವಲ್ಲಿ ನಾವು

ಪೂರ್ತಿ ಯಶಸ್ವಿಯಾಗಿದ್ದೇವೆ ಎಂದೇನೂ ಅಲ್ಲ. ಬಹಳಸಲ ಸೋತಿದ್ದೂ ಇದೆ. ಎಡವಿದರೂ ಮತ್ತೆ ಎದ್ದು, ಮುಂದಿನ ಗುರಿಯೆಡೆಗೆ ಸಾಗುವುದೇ ನಮ್ಮ ಇಂದಿನ ಪ್ರಯತ್ನವಾಗಬೇಕಿದೆ. ಅಂತಹ ಕೆಲವು ಸರಳ ಆದರೆ ಮಹತ್ವದ ಮಾರ್ಗಗಳು ಇಲ್ಲಿವೆ:

೧. ತ್ಯಾಜ್ಯ ನಿರ್ವಹಣೆ: ದಿನಂಪ್ರತಿ ನಾವು ಉತ್ಪಾದಿಸುವ ನಮ್ಮ ಮನೆಯ ತ್ಯಾಜ್ಯಗಳನ್ನು ಕಡಿಮೆ ಮಾಡಲೇಬೇಕಿದೆ. ಗೃಹತ್ಯಾಜ್ಯದಲ್ಲಿರುವ ಕೊಳೆಯುವ ಗುಣವಿರುವ ಸಾವಯವ ವಸ್ತುಗಳನ್ನೆಲ್ಲ ಮನೆ ಅಥವಾ ಊರಿನ ಮಟ್ಟದಲ್ಲಿಯೇ ಫಲವತ್ತಾದ ಗೊಬ್ಬರವನ್ನಾಗಿ ಪರಿವರ್ತಿಸುವ ಕಾರ್ಯವಾಗಬೇಕಿದೆ. 'ಕಸದಿಂದ ರಸ' ಎನ್ನುವ ಮಾತು ಅಕ್ಷರಶಃ ಸಾಕಾರಗೊಳ್ಳುವ ಮಾರ್ಗವಿದು. ಇನ್ನು, ಕೊಳೆಯದೇ ಉಳಿಯುವ ಇತರ ತ್ಯಾಜ್ಯಗಳನ್ನು ಸ್ಥಳೀಯ ಸರ್ಕಾರಗಳ ಸಹಯೋಗದೊಂದಿಗೆ ಸಂಗ್ರಹಿಸಿ, ಮರುಬಳಸುವ ಕಾರ್ಯಕ್ಕೆ ಕೈಜೋಡಿಸಬೇಕಿದೆ.

೨. ಮನೆಗೆ ಬೇಕು ಚಿಕ್ಕ ಕೈತೋಟ: ಹಳ್ಳಿಯಿರಲಿ– ಪೇಟೆಯಿರಲಿ, ಮನೆಯಂಗಳದಲ್ಲಿ ಚಿಕ್ಕದಾದರೂ ಕೈತೋಟ ಮಾಡಿ, ಕೆಲವಾದರೂ ಮನೆಬಳಕೆಯ ತರಕಾರಿ ಬೆಳೆಯಲೇಬೇಕಿದೆ. ಇದು ಮನೆಗೆ ಉತ್ತಮ ತರಕಾರಿ ನೀಡುವುದರ ಜೊತೆಗೆ, ದೇಹಕ್ಕೆ ಅಗತ್ಯವಿರುವ ವ್ಯಾಯಾಮವನ್ನೂ ನೀಡಬಲ್ಲದು. ಗೃಹತ್ಯಾಜ್ಯದ ಗೊಬ್ಬರದ ವಿನಿಯೋಗದ ಮಾರ್ಗವೂ ಆಗುತ್ತದೆ. ಇದು ಎಲ್ಲೆಡೆ ಸಾಧ್ಯವಾದರೆ, ಒಂದು ಕ್ರಾಂತಿಯೇ ಆಗಬಹುದು.

೩. ಒಂದೇ ಸಲ ಬಳಸುವ ಪ್ಲಾಸ್ಟಿಕ್ ಉತ್ಪನ್ನ ಕೈಬಿಡೋಣ: ನಮ್ಮ ಭೂಮಿ, ಜಲಮೂಲ, ವಾತಾವರಣವನ್ನೆಲ್ಲ ಮಾಲಿನ್ಯಗೊಳಿಸಿ, ಮಾನವನ ದೇಹವನ್ನೂ ಪ್ರವೇಶಿಸಿ, ನಮ್ಮ ಆರೋಗ್ಯವನ್ನು ಹಾಳುಗೆಡವುತ್ತಿರುವ, ಈ ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸುವ ಪ್ರಮಾಣವನ್ನು ಕಡಿಮೆ ಮಾಡಲೇಬೇಕಿದೆ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ, ಒಂದುಸಲ ಬಳಸಿ ಬಿಸಾಡುವ ಪಾಲಿಥೀನ್ ಕವರುಗಳನ್ನಾದರೂ ಬಳಸದಿರುವ ನಿರ್ಧಾರ ಕೈಗೊಳ್ಳಬೇಕಿದೆ.

೪. ವಾಹನ ಬಳಕೆ ಕಡಿಮೆ ಮಾಡೋಣ: ದೈನಂದಿನ ಕೆಲಸಕ್ಕಾಗಿ ಸಮೀಪದ ಓಡಾಟದಲ್ಲಿ, ಸ್ವಲ್ಪವಾದರೂ ವಾಹನ ಬಳಕೆ ಕಡಿಮೆ ಮಾಡೋಣ. ಸಾಧ್ಯವಾದಲ್ಲಿ ಸೈಕಲ್ಲನ್ನೂ ಓಡಿಸಬಹುದು. ಇದು ದೇಹ ಹಾಗೂ ವಾತಾವರಣದ ಆರೋಗ್ಯಕ್ಕೆ ಸಹಕಾರಿಯಲ್ಲವೇ?

೫. ಜಲಮೂಲಗಳ ರಕ್ಷಣೆ: ಊರಿನ ಬಾವಿ, ಕೆರೆ, ಹಾಗೂ ನದಿಗಳೇ ನಮ್ಮನ್ನು ಪೊರೆಯುವ ಜಲಮೂಲಗಳು. ಅವು ಮಲಿನವಾಗದಂತೆ ಹಾಗೂ ಅತಿಕ್ರಮಣವಾಗದಂತೆ ಕಾಳಜಿವಹಿಸಲೇಬೇಕಿದೆ. ಗ್ರಾಮ ಪಂಚಾಯತಿ ಅಥವಾ ನಗರಸಭೆಗಳೊಂದಿಗೆ ಈ ದಿಕ್ಕಿನಲ್ಲಿ ಕೈಜೋಡಿಸುವ ಸಾಮಾಜಿಕ ಜವಾಬ್ದಾರಿ ನಮ್ಮದಾಗಬೇಕಿದೆ.

ಇವು ಯಾವದೂ ಆದರ್ಶದ ಒಣಮಾತುಗಳಲ್ಲ ಅಥವಾ ಅಸಾಧ್ಯದ ಸಂಗತಿಗಳೂ ಅಲ್ಲ. ಇವನ್ನೆಲ್ಲ ಸಾಧಿಸಿದ ಹಲವಾರು ಸಾಧಕರು ನಮ್ಮ ನಡುವೆಯೇ ಇದ್ದಾರೆ. ಆದರೆ, ಇವನ್ನೆಲ್ಲ ಸಾಮೂಹಿಕ ಚಟುವಟಿಕೆಗಳನ್ನಾಗಿ ಜಾರಿಗೆ ತರಲು ಒಂದು ಸಮಾಜವಾಗಿ ನಾವು ಈವರೆಗೆ ಯಶಸ್ವಿಯಾಗಿಲ್ಲ ಅಷ್ಟೆ. ಈಗಲಾದರೂ ಅಂತಹ ನೈಜ ಬದಲಾವಣೆ ತರಲು, ವೈಯಕ್ತಿಕ ಹಾಗೂ ಕುಟುಂಬದ ನೆಲೆಯಲ್ಲಾದರೂ ಪ್ರಯತ್ನಿಸುವುದೇ, ನಾವು ಈ ದಿಕ್ಕಿನಲ್ಲಿ ಇಡಬಹುದಾದ ದಿಟ್ಟ ಹೆಜ್ಜೆಗಳಲ್ಲವೇ?



(ಸಣ್ಣ ಕೃಷಿಕರೂ ಆಗಿರುವ ಲೇಖಕರು ಶಿರ್ಸಿಯ ಸುತ್ತಮುತ್ತ ಗ್ರಾಮೀಣ ಪ್ರದೇಶದಲ್ಲಿ ಸಮುದಾಯಗಳ ಸಹಭಾಗಿತ್ವದಲ್ಲಿ ಸುಸ್ಥಿರ ಅಭಿವೃದ್ಧಿ ಸಂಶೋಧನೆ, ತರಬೇತಿ ಮತ್ತು ಪ್ರಯೋಗಗಳಲ್ಲಿ ತೊಡಗಿರುವವರು)

೫ನೇ ಪುಟದಿಂದ)

ಇನ್ನೊಬ್ಬರ ದುಃಖವೇ ನಮಗೆ ಸುಖಾವಹವಾಗಿ ಹೋಯಿತು. ಇನ್ನೊಬ್ಬರ ಸುಖವೇ ನಮಗೆ ದುಃಖದಾಯಕವಾಯಿತು! ನೀನು ಕಷ್ಟದಲ್ಲಿರುವಾಗ ನಿನಗಿಂತಲೂ ಕಷ್ಟದಲ್ಲಿರುವ ಜನರನ್ನು ನೋಡಿ ಅಷ್ಟು ಕಷ್ಟ ನಿನಗೆ ಬಂದಿಲ್ಲ ಎಂದು ಸಮಾಧಾನವನ್ನು ತಾಳು ಎಂಬ ಉಪದೇಶದ ಮಾತಿದೆ. ಏನಿದರ ಅರ್ಥ? ಅದು ಎಂಥ ಸಮಾಧಾನ? ಒಂದೊಮ್ಮೆ ಹೀಗೊಂದು ಸಮಾಧಾನವನ್ನು ನಮ್ಮನ್ನು ನೋಡಿ ಮಂದಿ ತಳೆಯುವರು ಎಂದು ತೀರ ಸಂಕಷ್ಟದಲ್ಲಿರುವವರಿಗೆ ತಿಳಿದರೆ ಅವರಿಗೆ ಹೇಗಾಗಬೇಡ? ತೀರ ದುಃಖದಲ್ಲಿರುವ ಅವರು ಈ ಕಾರಣದಿಂದಲೇ ಲೋಕವನ್ನು ತುಸುವಾದರೂ ನೆಮ್ಮದಿಯಲ್ಲಿ ಇಡುವರು ಎಂಬುದನ್ನೂ ನಾವು ನಂಬಬೇಕಾಗಿ ಬಂತೆ? Blessed are the-meek ಎಂದು ಮಹಾಪುರುಷ ಜೀಸಸ್ ಆಡಿದ ಮಾತು ನೆನಪಾಗುತ್ತದೆ.

ನಾವು ಘಟನೆಗಳಿಗೆ ತೀವ್ರವಾಗಿ ಸ್ಪಂದಿಸಿ ನಮ್ಮಲ್ಲಿ ಮೂಲಭೂತವಾಗಿ ಆಲೋಚನಾ ಕ್ರಾಂತಿಯೊಂದು ಸಂಭವಿಸಲು, ಅನುದಿನದ ಘಟನೆಗಳೇ ಸಾಕು ಎಂದು ಬುದ್ಧ ತೋರಿಸಿದ. ಅದಕ್ಕೆ ಕೊರೋನಾದ ದಾರುಣತೆಯನ್ನು ಕುರಿತು ಚಿಂತಿಸಬೇಕೆಂದೇನೂ ಇಲ್ಲ. ಏಕೆಂದರೆ ಸಾವಿನ ಪ್ರಶ್ನೆ ಅನುದಿನದ ಪ್ರಶ್ನೆ. ಎಲ್ಲವೂ 'ಅನಿತ್ಯ' ಎಂದು ತಿಳಿಯಲು, ಎಲ್ಲವೂ ಇಲ್ಲಿ ಅನುಕ್ಷಣವೂ ಬದಲಾಗುತ್ತಾ ನಡೆದಿದೆ ಎಂದು ತಿಳಿಯಲು, ಈ ಸತ್ಯವು ಅಂಗೈ ಗೆರೆಗಳಂತೆ ಕಾಣುತ್ತಿರುವಾಗ–ಯಾವುದು ಅಡ್ಡಿಯಾಗಿದೆ? ನಾವು ತಪ್ಪಾಗಿ ತಿಳಿದ ನಮ್ಮ ವೈಯಕ್ತಿಕತೆಯೇ ಅಡ್ಡಿಯಾಗಿದೆ. ವೈಯಕ್ತಿಕತೆಯು ಕಾಪಾಡಿಕೊಳ್ಳಬೇಕಾದ್ದು ಎಂಬ ಭಾವನೆಯೇ ಅಡ್ಡಿಯಾಗಿದೆ. ಕಾಪಾಡಿಕೊಳ್ಳಬೇಕಾದ್ದು ಎಂದರೆ ಶಾಶ್ವತವಾಗಿ ಉಳಿಸಿಕೊಳ್ಳಬೇಕಾದುದು ಎಂದು. ಅಂದರೆ 'ಶಾಶ್ವತ'ವನ್ನು ಕಲ್ಪಿಸಲಾಯಿತು. ಶಾಶ್ವತದ ಕಲ್ಪನೆಯ ಎದುರಿಗೆ–ಅನಿತ್ಯ; ಎಲ್ಲವೂ ಪ್ರತಿಕ್ಷಣವೂ ಬದಲಾಗುತ್ತ ನಡೆದಿದೆ– ಎಂಬುದೆಲ್ಲವೂ 'ಮಾಯೆ'ಯಾಗಿ ಕಾಣಿಸಿತು. ಇದರಿಂದ 'ಅನಿತ್ಯ' ಎನ್ನುವ ನಿಜಕ್ಕೆ ಸ್ಪಂದಿಸುವ ಸೂಕ್ಷ್ಮತೆಯೇ ಮುಕ್ಕಾಗಿ ಹೋಯಿತು. ವೇದಾಂತಿಗಳೂ ಹೇಳುವರು– ಬುದ್ಧ ಮಾತ್ರ ಅಲ್ಲ– ನಿತ್ಯಾನಿತ್ಯ ವಸ್ತು ವಿವೇಕವೂ ಮೂಲಭೂತವಾದ ಅರ್ಹತೆ ಎಂಬ ಮಾತನ್ನು. ಆದರೇನು, ನಮ್ಮ ಪಾಡು ಹೀಗಾಗಿ ಹೋಯಿತು.

ಒಂದೊಮ್ಮೆ ವೈಯಕ್ತಿಕತೆಯು ಕಳಚಿ ಹೋಯಿತು; ಅದನ್ನು ಮೀರುವುದಕ್ಕೆ ಸಾಧ್ಯವಾಯಿತು ಎನ್ನೋಣ. ಮುಂದಿನ ಅವಸ್ಥೆ ಏನು? ಆಗ ಆ ಜೀವಿಯು ಸಮುದಾಯದ ಭಾಗವಾಗುವನು. ಭಾಗವಲ್ಲ, ಸಮುದಾಯದ ಪ್ರತಿನಿಧಿಯೇ ಆಗುವನು. ಅವನ ಪ್ರಜ್ಞೆಯು ಸಮುದಾಯದ ಪ್ರಜ್ಞೆಯೇ ಆಗುವುದು. ಅವನ ದೇಹವು ಸಮುದಾಯದ ದೇಹವೇ ಎಂದು ಕೂಡ ಹೇಳಬಹುದು. ಹಲ್ಲಿಯು ತನ್ನ ಬಾಲವನ್ನು ಎಸೆದು ಶತ್ರುವಿನಿಂದ ಪಾರಾಗುವುದು. ಎಸೆಯಲ್ಪಟ್ಟ ಬಾಲವು ಅಷ್ಟು ಹೊತ್ತು ನೆಲದಲ್ಲಿ ಹೊರಳಾಡುತ್ತಾ ಎಗರುತ್ತ ತನ್ನ ಸ್ಪಂದನವನ್ನು ತೋರಿಸುವುದು. ಅಂಥ ಸ್ಪಂದನ ಶಕ್ತಿಯು ಸಮುದಾಯವನ್ನು ಕುರಿತಂತೆ ಮನುಷ್ಯ ಜೀವದಲ್ಲಿ ತೋರಿ ಬಂದರೆ ಅಂಥ ಜೀವವು ಒಳ ಬದುಕಿನ ಅರ್ಥ ದಾರಿಯನ್ನು ಕ್ರಮಿಸಿದಂತೆಯೇ. ಬದುಕಿನಲ್ಲಿ ದುಃಖ ತುಂಬಿದೆ ಎಂದು ಬುದ್ಧನು ಹೇಳುವಲ್ಲಿ ವೈಯಕ್ತಿಕ ದುಃಖವನ್ನು ಅವನು ಸೂಚಿಸುತ್ತಿಲ್ಲ ಮಾನವ ಸಮುದಾಯದ ದುಃಖವನ್ನು, ಲೋಕದ ದುಃಖವನ್ನು ಹೇಳುತ್ತಿದ್ದಾನೆ, ಸ್ಪಂದಿಸುತ್ತಿದ್ದಾನೆ.

ಕೊರೋನಾದ ಮರಣೋನ್ಮುಖ ಕಾಲದಲ್ಲಿ ಇದ್ದೇವೆ. ಬಹಳ ಮಂದಿ ತೀರಿಹೋಗಿದ್ದಾರೆ. ಬಹುಮಂದಿ ಬದುಕಿ ಉಳಿದಿದ್ದಾರೆ. ಮುಂದಿನ ಹಂತ ಹೇಗೋ ತಿಳಿಯದು. ಇಂಥ ಸನ್ನಿವೇಶದಲ್ಲಿ–ವ್ಯಕ್ತಿ; ಸಮುದಾಯ; ವೈಯಕ್ತಿಕತೆ; ಅದನ್ನು ಮೀರುವುದು ಇತ್ಯಾದಿ ತಾತ್ವಿಕತೆಯನ್ನು ಖಚಿತವಾಗಿ ಮೂರ್ತವಾಗಿ ಹೇಗೆ ಅರ್ಥಮಾಡಿಕೊಳ್ಳುವುದು? ನನಗೂ ತಿಳಿಯದು. ಆದರೆ ಈ ಕೆಳಗಿನ ಉಲ್ಲೇಖವನ್ನು ನಿಮ್ಮ ಮುಂದೆ ಮಂಡಿಸಿ ನಾನು ವಿರಮಿಸುವೆ.

ಡಾ. ಮನು ಕೊಠಾರಿ ಮತ್ತು ಡಾ. ಲೋಪಾ ಮೆಹತಾ ಎಂಬ ಈರ್ವರು ವೈದ್ಯ ಸಂಶೋಧಕರು ಈ ಎರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'The nature of cancer' ಮತ್ತು 'Death'. ಅದರಲ್ಲಿ ಬಂದಿರುವ ಉಲ್ಲೇಖ ಇದು: "One man's cancer is another four men's freedom from it. My severe diabetes is because of your milder or no diabetes. One child's cleft palate allows another 1000 children to escape it. One person's acute leukemia ensures that 32999 persons are free from it. Thus the top brass in the level of IQ and creativity owe a normal debt to the bottom levels. Every healthy, disease free individual carries with him an IOU card addressed to another individual not so privileged.

I had a brother who died at the age of 29 of a heart attack. And I realise that because he died of heart attack at 29, he allowed me to be privileged to live till the age of 48 or 60.

A time must come when we should realise that any disease is an expression of social duty at an individual level, involuntarily accepted, for who likes an onerous duty like cancer anyway. No man is an Island, and every man's cancer is mine."

ಇದನ್ನು ಓದುತ್ತಿದ್ದಂತೆ ಒಂದು ಕ್ರೈಸಿಸ್‌ನ ಹೊತ್ತಿನಲ್ಲಿ ನಮ್ಮಲ್ಲಿ ಉಂಟಾಗುವ ವಿಶೇಷ ಶಕ್ತಿ ಸಂಚಾರದ ಅರ್ಥವು ಹೊಳೆಯತೊಡಗಿತು. ಕೊರೊನಾದಿಂದ ಸತ್ತವರಿಗಿಂತ ಎಷ್ಟೋ ಪಟ್ಟು ಹೆಚ್ಚು ಬದುಕುಳಿದವರಿದ್ದಾರೆ ಎಂಬ ಮಾತಿನ ನಿಜವಾದ ಅರ್ಥವಾಗತೊಡಗಿತು. ನಮ್ಮ ಕರ್ತವ್ಯವೇನು ಎಂದೂ ನಿಚ್ಚಳವಾಯಿತು.

–ಲಕ್ಷ್ಮೀಶ ತೋಳ್ಪಾಡಿ




(ಬಹುಶ್ರುತ ವಿದ್ವಾಂಸರಾದ ಲೇಖಕರು ನಮ್ಮ ಮುಖ್ಯ ಆಧ್ಯಾತ್ಮಿಕ ಚಿಂತಕರಲ್ಲೊಬ್ಬರೂ ಹೌದು)

ಪ್ರಚಲಿತ-೫

ಭಾರತ ಸರ್ಕಾರದ ಕೋವಿಡ್ ನಿರ್ವಹಣೆ ವೈಖರಿ : 'ಲಾನ್ಸೆಟ್' ಸಂಪಾದಕೀಯ

ಭಾರತವನ್ನು ಈಗ ಕಾಡುತ್ತಿರುವ ಕೋವಿಡ್-೧೯ ಮಹಾಮಾರಿ ಭಾರತಕ್ಕೆ ಮಾತ್ರ ಆತಂಕಕಾರಿಯಾಗಿರದೆ ಅದರ ತೀವ್ರಗತಿಯ ಭೀಕರ ಸಾಂಕ್ರಾಮಿಕತೆ ಜಗತ್ತಿನ ಆರೋಗ್ಯ ಪರಿಸ್ಥಿತಿಗೂ ಆತಂಕ ತಂದಿದೆ. ಹಾಗಾಗಿಯೇ ಹಲವು ವಿದೇಶಿ ಸರ್ಕಾರಗಳು ಭಾರತದ ನೆರವಿಗೆ ಧಾವಿಸಿವೆ, ಜೊತೆಗೇ ಜಾಗತಿಕ ಮಾಧ್ಯಮಗಳು ಈ ಸಾಂಕ್ರಾಮಿಕವನ್ನು ಭಾರತ ಸರ್ಕಾರ ನಿರ್ವಹಿಸಿದ ಬಗೆಯನ್ನು ಟೀಕಿಸುತ್ತಾ, ವಿಮರ್ಶಿಸುತ್ತಾ, ಸಲಹೆಗಳನ್ನೂ ನೀಡುತ್ತಿವೆ. ಇಂತಹ ಬರಹಗಳಲ್ಲಿ ಗಮನಾರ್ಹವೆನಿಸಿರುವುದು ಬ್ರಿಟನ್‌ನ ಜಗತ್ಪ್ರಸಿದ್ಧ ಸ್ವತಂತ್ರ ವೈದ್ಯಕೀಯ ಸಾಪ್ತಾಹಿಕ 'ಲಾನ್ಸೆಟ್'ನ ಮೇ ೮ರ ಸಂಚಿಕೆಯ ಈ ಸಂಪಾದಕೀಯ-ಸಂ.





ಭಾರತದ ಕರೋನಾ ಸಂಕಷ್ಟದ ದೃಷ್ಯಗಳನ್ನು ಗ್ರಹಿಸುವುದು ಬಹಳ ಕಷ್ಟ. ವರದಿಗಳ ಪ್ರಕಾರ ಮೇ ೪ ರಂದು ಭಾರತದಲ್ಲಿ ಇದ್ದ ಕರೋನ ಪ್ರಕರಣಗಳು ೨೦.೨ ಮಿಲಿಯನ್. ಆ ಸಮಯಕ್ಕೆ ಸರಾಸರಿ ೩,೭೮,೦೦೦ ಹೊಸ ಪ್ರಕರಣಗಳು ಪ್ರತಿದಿನ ವರದಿಯಾಗುತ್ತಿದ್ದವು. ಸಾವಿನ ಸಂಖ್ಯೆ ೨೨೨೦೦೦ ದ ಮಟ್ಟವನ್ನು ತಲುಪಿತ್ತು. ತಜ್ಞರ ಅಂದಾಜಿನ ಪ್ರಕಾರ ಅಧಿಕೃತವಾಗಿ ಪ್ರಕಟಿಸಲ್ಪಡುತ್ತಿದ್ದ ಸಾವಿನ ಸಂಖ್ಯೆ ನಿಜವಾಗಿ ಸಾವವನ್ನಪ್ಪಿದವರ ಸಂಖ್ಯೆಗಿಂತ ಸಾಕಷ್ಟು ಕಡಿಮೆ ಇರುತ್ತಿತ್ತು. ಆಸ್ಪತ್ರೆಗಳು ಸೋಂಕಿತರಿಂದ ತುಂಬಿ ತುಳುಕುತ್ತಿದ್ದವು. ವೈದ್ಯಕೀಯ ಸಿಬ್ಬಂದಿ ಹೈರಾಣಾಗಿದ್ದರು. ಅವರೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿಗೊಳಗಾಗುತ್ತಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಜನರು (ವೈದ್ಯರು ಮತ್ತು ಜನಸಾಮಾನ್ಯರು) ವೈದ್ಯಕೀಯ ಆಮ್ಲಜನಕಕ್ಕಾಗಿ, ಆಸ್ಪತ್ರೆಯ ಹಾಸಿಗೆಗಳಿಗಾಗಿ ಇತರೆ ಅಗತ್ಯಗಳಿಗಾಗಿ ಮೊರೆಯಿಡುತ್ತಿದ್ದರು. ಆದರೂ ಮಾರ್ಚ್ ಮೊದಲನೇ ವಾರದಲ್ಲಿ ಕೋವಿಡ್‌ನ ಎರಡನೇ ಅಲೆ ಹೆಚ್ಚತೊಡಗಿದ್ದಾಗಲೇ ಭಾರತ ಸರ್ಕಾರದ ಆರೋಗ್ಯ ಸಚಿವ ಹರ್ಷವರ್ಧನ್ ಅವರು ಭಾರತವು ಕರೋನಾ ಪಿಡುಗಿನ ಅಂತ್ಯವನ್ನು ಸಮೀಪಿಸುತ್ತಿದೆ ಎಂದು ಘೋಷಿಸಿದ್ದರು. ಎರಡನೆಯ ಅಲೆಯ ಅಪಾಯದ ಬಗ್ಗೆ, ರೂಪಾಂತರಗೊಳ್ಳುವ ವೈರಾಣುಗಳ ಬಗ್ಗೆ ಹಲವಾರು ತಜ್ಞರು ಎಚ್ಚರಿಕೆಗಳನ್ನು ನೀಡುತ್ತಿದ್ದರೂ, ಕೆಲವು ತಿಂಗಳುಗಳಿಂದ ಸೋಂಕಿನ ಮಟ್ಟ ಸತತವಾಗಿ ಕಡಿಮೆಯಾಗುತ್ತಾ ಬರುತ್ತಿದೆ, ಭಾರತವು ಕರೋನಾವನ್ನು ಗೆದ್ದುಬಿಟ್ಟಿದೆ ಎಂಬುದು ಭಾರತ ಸರ್ಕಾರದ ಧೋರಣೆಯಾಗಿತ್ತು. ಭಾರತವು ಸಮೂಹ ರೋಗನಿರೋಧಕ ಶಕ್ತಿಯನ್ನು ಗಳಿಸಿಕೊಂಡುಬಿಟ್ಟಿದೆ ಎಂಬ ತಪ್ಪು ಸಂದೇಶ ಜನರಲ್ಲಿ ಸಂತುಷ್ಟಿಯನ್ನು ಮೂಡಿಸಿ ಅಸಮರ್ಪಕ ಸಿದ್ಧತೆಗೆ ಕಾರಣವಾಯಿತು. ಆದರೆ ಜನವರಿಯಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು ನಡೆಸಿದ ಸಮೀಕ್ಷೆಯಿಂದ ಸರಾಸರಿ ೨೧% ಜನರಲ್ಲಿ ಮಾತ್ರ ಸಾರ್ಸ್- ಕೋವ್ -೨ ಎಂಬ ವೈರಾಣುವಿಗೆ ರೋಗ ನಿರೋಧಕ ಪ್ರತಿಕಾಯಗಳು ಸೃಷ್ಟಿಯಾಗಿರುವುದು ಕಂಡುಬಂದಿತು. ಆ ಸಮಯಕ್ಕೆ ನರೇಂದ್ರ ಮೋದಿಯವರ ಸರ್ಕಾರವು ಸಾಂಕ್ರಾಮಿಕವನ್ನು ನಿಯಂತ್ರಿಸುವುದಕ್ಕಿಂತ ಹೆಚ್ಚು ಟ್ವಿಟ್ಟರ್‌ಗಳಲ್ಲಿ ಬರುತ್ತಿದ್ದ ಟೀಕೆಗಳನ್ನು ತೆರವು ಮಾಡಿಸುವುದರಲ್ಲಿ ಆಸಕ್ತಿ ಹೊಂದಿದ್ದಂತೆ ಕಂಡುಬಂದಿತು.

ಸಾಂಕ್ರಾಮಿಕವನ್ನು ಭಾರೀ ಪ್ರಮಾಣದಲ್ಲಿ ಹರಡಬಲ್ಲ ಸೂಪರ್‌ಸ್ಪ್ರೆಡರ್ ಕಾರ್ಯಕ್ರಮಗಳ ಬಗ್ಗೆ ಎಚ್ಚರಿಕೆಗಳನ್ನು ನೀಡಿದ್ದರೂ ಸರ್ಕಾರವು ದೇಶದ ವಿವಿಧ ಭಾಗಗಳಿಂದ ಮಿಲಿಯಾಂತರ ಜನರನ್ನು ಆಕರ್ಷಿಸಿದ ಧಾರ್ಮಿಕ ಕಾರ್ಯಕ್ರಮಗಳಿಗೆ ಅನುಮತಿಯನ್ನು ನೀಡಿತು. ಕೋವಿಡ್-೧೯ ನಿಯಂತ್ರಣ ಮುನ್ನೆಚ್ಚರಿಕೆಗಳನ್ನು ಕಡೆಗಣಿಸಿ ಹಲವಾರು ರಾಜಕೀಯ ರ‍್ಯಾಲಿಗಳನ್ನು ನಡೆಸಲಾಯಿತು. ಕೋವಿಡ್-೧೯ ಮುಗಿದು ಹೋದ ಕಥೆ ಎಂಬ ತಪ್ಪು ಸಂತುಷ್ಟಿಯು ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮವನ್ನು ನಿಧಾನಗೊಳಿಸಿ ಈವರೆಗೆ ಬರೀ ೨% ನಷ್ಟು ಜನಕ್ಕೆ ಮಾತ್ರ ಲಸಿಕೆ ನೀಡಲು ಸಾಧ್ಯವಾಗುವಂತೆ ಮಾಡಿತು.

ಕೇಂದ್ರದ ಮಟ್ಟದಲ್ಲಿ, ಲಸಿಕೆ ನೀಡುವ ಕಾರ್ಯಕ್ರಮವು ಬೇಗನೆ ನಿರ್ಲಕ್ಷ್ಯಕ್ಕೊಳಗಾಯಿತು. ಕೇಂದ್ರ ಸರ್ಕಾರವು ರಾಜ್ಯಗಳ ಜೊತೆ ಯಾವ ರೀತಿಯ ಸಮಾಲೋಚನೆಯನ್ನೂ ನಡೆಸದೆ ೧೮ ವರ್ಷಕ್ಕೆ ಮೇಲ್ಪಟ್ಟವರಿಗೂ ಲಸಿಕೆ ನೀಡಬೇಕೆಂದು, ಮತ್ತು ಇದರ ಜವಾಬ್ದಾರಿಯನ್ನು ರಾಜ್ಯಗಳೇ ಹೊರಬೇಕೆಂದು, ಲಸಿಕೆ ನೀತಿಯಲ್ಲಿ ಬದಲಾವಣೆ ಮಾಡಿತು. ಇದರಿಂದ ರಾಜ್ಯಗಳ ಮೇಲಿನ ಹೊರೆ ಹೆಚ್ಚಿ, ಲಸಿಕೆಗಳ ಲಭ್ಯತೆ ಕ್ಷೀಣಿಸಿ ಭಾರೀ ಗೊಂದಲ ಮೂಡಿತು. ಮಾರುಕಟ್ಟೆಯಲ್ಲಿ ರಾಜ್ಯಗಳು ಮತ್ತು ಖಾಸಗಿ ಆಸ್ಪತ್ರೆಗಳು ಲಸಿಕೆಗಾಗಿ ಸ್ಪರ್ಧೆ ನಡೆಸಬೇಕಾಯಿತು.

ಉತ್ತರಪ್ರದೇಶ ಮತ್ತು ಮಹಾರಾಷ್ಟ್ರಗಳಂತಹ ರಾಜ್ಯಗಳು ಸರಿಯಾಗಿ ತಯಾರಿ ನಡೆಸದೆ ಇದ್ದುದರಿಂದ ಒಮ್ಮೆಲೆ ಹೆಚ್ಚಿದ ಸೋಂಕಿತರಿಂದಾಗಿ ಆಮ್ಲಜನಕದ ಕೊರತೆಯುಂಟಾಯಿತು, ಆಸ್ಪತ್ರೆಗಳಲ್ಲಿ ಸ್ಥಳಾವಕಾಶವಿಲ್ಲದಂತಾಯಿತು, ಚಿತಾಗಾರಗಳೂ ಕೂಡ ತುಂಬಿ ತುಳುಕಿದವು. ಸಂಕಷ್ಟವು ಎಲ್ಲರಿಗೂ ಸಮನಾಗಿರಲಿಲ್ಲ. ಕೆಲವು ರಾಜ್ಯಸರ್ಕಾರಗಳಂತೂ ಆಮ್ಲಜನಕ ಮತ್ತು ಆಸ್ಪತ್ರೆಗಳಲ್ಲಿ ಸ್ಥಳ ಕೇಳಿದವರ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆಯ ಅಡಿಯಲ್ಲಿ ಕ್ರಮ ಕೈಗೊಳ್ಳುವುದಾಗಿ ಬೆದರಿಕೆ ಹಾಕಿದವು. ಕೇರಳ ಮತ್ತು ಒರಿಸ್ಸಾದಂತಹ ಕೆಲವು ರಾಜ್ಯಗಳು ತುಸು ಉತ್ತಮವಾಗಿ ತಯಾರಾಗಿದ್ದವು. ಈ ರಾಜ್ಯಗಳು ಎರಡನೆಯ ಅಲೆಯ ಸಂದರ್ಭದಲ್ಲಿ ಹೊರರಾಜ್ಯಗಳಿಗೆ ಕಳುಹಿಸಲು ಸಾಧ್ಯವಾಗುವಂತೆ ಹೆಚ್ಚುವರಿ ವೈದ್ಯಕೀಯ ಆಮ್ಲಜನಕ ಉತ್ಪಾದನಾ ಸಾಮರ್ಥ್ಯವನ್ನು ಸೃಷ್ಟಿಸಿಕೊಂಡಿದ್ದವು.

ಈ ಸಂಕಷ್ಟದಿಂದ ಪಾರಾಗಲು ಈಗ ಭಾರತವು ದ್ವಿವಿಧ ತಂತ್ರವನ್ನು ಅನುಸರಿಸಬೇಕು. ಮೊದಲನೆಯದಾಗಿ ಹದಗೆಟ್ಟಿರುವ ಲಸಿಕಾ ಕಾರ್ಯಕ್ರಮವನ್ನು ಕ್ರಮಬದ್ಧಗೊಳಿಸಿ ಹೆಚ್ಚು ತ್ವರಿತಗತಿಯಲ್ಲಿ ಅದನ್ನು ಕಾರ್ಯಗತಗೊಳಿಸಬೇಕು. ಲಸಿಕೆ ಪೂರೈಕೆಯನ್ನು ಹೆಚ್ಚಿಸುವಲ್ಲಿ ಈಗ ಎರಡು ತಡೆಗಳಿವೆ. ಲಸಿಕೆ ಪೂರೈಕೆಯನ್ನು ಹೆಚ್ಚಿಸುವುದು (ಅವುಗಳಲ್ಲಿ ಕೆಲವು ವಿದೇಶಗಳಿಂದ ಬರಬೇಕಿದೆ) ಮತ್ತು ಕೇವಲ ನಗರದ ಜನರನ್ನಷ್ಟೇ ಅಲ್ಲದೆ ನಮ್ಮ ಜನಸಂಖ್ಯೆಯ ೬೫% ರಷ್ಟು ಅಂದರೆ ೮೦೦ ಮಿಲಿಯನ್‌ನಷ್ಟು ಇರುವ, ಆದರೆ ಸಾರ್ವಜನಿಕ ಆರೋಗ್ಯ ಮತ್ತು ಪ್ರಾಥಮಿಕ ಶುಶ್ರೂಷಾ ವ್ಯವಸ್ಥೆಯಿಲ್ಲದ, ಗ್ರಾಮೀಣ ಜನರನ್ನು ಮತ್ತು ಬಡವರನ್ನೂ ಒಳಗೊಳ್ಳುವಂತಹ ಲಸಿಕಾ ಕಾರ್ಯಕ್ರವನ್ನು ಪ್ರಾರಂಭಿಸುವುದು. ತಮ್ಮ ಸಮುದಾಯವನ್ನು ಚೆನ್ನಾಗಿ ಬಲ್ಲ ಸ್ಥಳೀಯರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಹಕಾರದೊಂದಿಗೆ ಸಮನಾದ ಲಸಿಕೆ ವಿತರಣಾ ವ್ಯವಸ್ಥೆಯನ್ನು ಸರ್ಕಾರವು ಸೃಷ್ಟಿಸಬೇಕು.

ಎರಡನೆಯದಾಗಿ ಲಸಿಕೆ ನೀಡುವ ಕಾರ್ಯಕ್ರಮ ಚಾಲನೆಯಾಗುತ್ತಿರುವ ಹಾಗೇ ಭಾರತವು ಸಾರ್ಸ್-ಕೋವ್-೧೯ ವೈರಾಣು ಹರಡುವಿಕೆಯನ್ನು ಸಾಧ್ಯವಿದ್ದಷ್ಟೂ ನಿಯಂತ್ರಿಸಬೇಕು. ಪ್ರಕರಣಗಳು ಹೆಚ್ಚುತ್ತಿರುವ ಹಾಗೆ ಸರ್ಕಾರವು ಖಚಿತವಾದ ಅಂಕಿಅಂಶಗಳನ್ನು ಕಾಲಕಾಲಕ್ಕೆ ಪ್ರಕಟಿಸಬೇಕು, ಮತ್ತು ಸದ್ಯಕ್ಕೆ ಏನು ಮಾಡಲಾಗುತ್ತಿದೆ ಮತ್ತು- ಕೆಲವು ದಿನಗಳ ಕೇಂದ್ರೀಯ ಲಾಕ್‌ಡೌನ್ ಒಳಗೊಂಡಂತೆ - ಸಾಂಕ್ರಾಮಿಕದ ಹರಡುವಿಕೆಯ ವೇಗವನ್ನು ತಗ್ಗಿಸುವುದಕ್ಕಾಗಿ ಯಾವ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ ಎಂಬುದನ್ನು ಪ್ರಾಮಾಣಿಕವಾಗಿ ಜನರಿಗೆ ತಿಳಿಸಬೇಕು. ಹೊಸದಾಗಿ ಹುಟ್ಟುತ್ತಿರುವ ಮತ್ತು ಹೆಚ್ಚು ವೇಗವಾಗಿ ಹರಡಬಲ್ಲಂತಹ ಸಾರ್ಸ್-ಕೋವ್-೨ ವೈರಸ್ಸಿನ ರೂಪಾಂತರಗೊಳ್ಳುವ ವಿಭಿನ್ನ ಮಾದರಿಗಳ ಜಾಡು ಪತ್ತೆಮಾಡುವುದಕ್ಕಾಗಿ, ಅದನ್ನು ಅರ್ಥ ಮಾಡಿಕೊಳ್ಳುವುದಕ್ಕಾಗಿ ಮತ್ತು ನಿಯಂತ್ರಿಸುವುದಕ್ಕಾಗಿ ಡಿ ಎನ್ ಎ ವಿಶ್ಲೇಷಣೆ ಕೂಡ ಮಾಡಬೇಕಾಗುವುದು. ಸ್ಥಳೀಯ ಸರ್ಕಾರಗಳು ರೋಗ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುತ್ತಿವೆ. ಆದರೆ ಜನರಿಗೆ ಮುಖಕವಚ ಧರಿಸುವ, ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವ, ಭಾರೀ ಜನ ಸೇರುವುದನ್ನು ತಡೆಯುವ, ಸ್ವಯಂ ಪ್ರತ್ಯೇಕವಾಸದ ಅಗತ್ಯವನ್ನು

ಜನರಿಗೆ ಮನವರಿಕೆ ಮಾಡುವ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೆ ಇದೆ. ಟೀಕೆಗಳನ್ನು, ಮುಕ್ತ ಚರ್ಚೆಗಳನ್ನು ದಮನ ಮಾಡುವ ಮೋದಿಯವರ ಕ್ರಮಗಳು ಕ್ಷಮಾರ್ಹವಲ್ಲ.

ಆರೋಗ್ಯ ಮಾಪನ ಮತ್ತು ಮೌಲ್ಯನಿರ್ಧರಣಾ ಸಂಸ್ಥೆಯು (ದಿ ಇನ್ಸ್ಟಿಟ್ಯೂಟ್ ಫಾರ್ ಹೆಲ್ತ್ ಮೆಟ್ರಿಕ್ಸ್ ಅಂಡ್ ಇವ್ಯಾಲ್ಯುಯೇಷನ್) ಆಗಸ್ಟ್ ೧ ರ ಹೊತ್ತಿಗೆ ಭಾರತದಲ್ಲಿ ಕೋವಿಡ್-೧೯ ರಿಂದ ಒಂದು ಮಿಲಿಯನ್ ಜನರು ಪ್ರಾಣ ಕಳೆದುಕೊಳ್ಳಬಹುದು ಎಂದು ಅಂದಾಜು ಮಾಡಿದೆ. ಇದೇನಾದರೂ ನಿಜವಾದರೆ ಒಂದು ಸ್ವಯಂಕೃತ ರಾಷ್ಟ್ರೀಯ ವಿಪತ್ತನ್ನು ಉದ್ಘಾಟಿಸಿದ ಜವಾಬ್ದಾರಿ ಮೋದಿ ಸರ್ಕಾರದ್ದಾಗಿರುತ್ತದೆ. ಪ್ರಾರಂಭದಲ್ಲಿ ಕೋವಿಡ್-೧೯ ಅನ್ನು ನಿಯಂತ್ರಿಸಿದ ಯಶಸ್ಸನ್ನು ಕಳೆದುಕೊಂಡಂತಾಗುತ್ತದೆ. ಏಪ್ರಿಲ್ ವರೆಗೆ ಸರ್ಕಾರದ ಕೋವಿಡ್-೧೯ ಕಾರ್ಯಪಡೆ ಸಭೆಯನ್ನೇ ನಡೆಸಿರಲಿಲ್ಲ. ಆ ತಪ್ಪು ತೀರ್ಮಾನದ ಪರಿಣಾಮಗಳನ್ನು ನಾವಿಂದು ಕಾಣುತ್ತಿದ್ದೇವೆ. ಈಗ ಸಂಕಷ್ಟವು ಹೆಚ್ಚುತ್ತಿರುವಾಗ ಭಾರತವು ತನ್ನ ಪ್ರತಿಕ್ರಿಯೆಯನ್ನು ಪುನರೂಪಿಸಿಕೊಳ್ಳಬೇಕು. ಈ ಪ್ರಯತ್ನದ ಯಶಸ್ಸು ಸರ್ಕಾರವು ತನ್ನ ತಪ್ಪುಗಳನ್ನು ಒಪ್ಪಿಕೊಂಡು ಜವಾಬ್ದಾರಿಯುತ ನಾಯಕತ್ವವನ್ನು ನೀಡುವುದರ ಮೇಲೆ, ಪಾರದರ್ಶಕವಾಗಿರುವುದರ ಮೇಲೆ, ವಿಜ್ಞಾನವನ್ನು ಆಧರಿಸಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ರೂಪಿಸುವುದರ ಮೇಲೆ ಅವಲಂಬಿತವಾಗಿದೆ.

(ಕನ್ನಡಕ್ಕೆ: ಎಂ. ರಾಜು)

ನವಿಲುಗರಿ

ಗಾರುಡಿಗ



ಕವಿತೆಗಳು ಏಳುತಿವೆ
ನನ್ನ ಮಗ್ಗುಲಿನಿಂದ


ನೀ
ಎದ್ದು ಹೋಗುವಾಗಲೆಲ್ಲ
ಈ ಹಾಸಿಗೆಯಿಂದ

ತಂಬೂರಿಯಿಂದ ಹೊರಬಂದ
ನಾದದ ಹಾಗೆ
ಮುಸ್ಸಂಜೆಯಿಂದ ಹೊರಬಂದ
ಬಣ್ಣಗಳ ಹಾಗೆ

ಒಮ್ಮೆ ಗುಲಾಬಿಯ ಹಿಸುಕಿದ
ಕೆಂಪುಬಣ್ಣ
ಮತ್ತೊಮ್ಮೆ ಉಸಿರುಗಟ್ಟಿದ ದೀಪದ
ಕಪ್ಪುಬಣ್ಣ

ಗಾರುಡಿಗ ನೀನು
ಒಣ ಕೊರಡಿನಂತಿದ್ದ ನನ್ನೊಳಗೆ
ಒಂದೇ ರಾತ್ರಿಯಲಿ
ಕವಿತೆ
ಹೊರಡಿಸಿದೆ –ಶೋಭಾ ನಾಯಕ

(ಇವರ 'ಶಯ್ಯಾಗೃಹದ ಸುದ್ದಿಗಳು' ಕವನ ಸಂಕಲನದಿಂದ ಆಯ್ದ ಪದ್ಯ)



ಪ್ರಣಯ ಕವಿತೆ



ನೀನು ಕಾದು ಕೆಂಡವಾದ
ಸ್ವರ್ಣಗೋಳವನ್ನು
ನುಂಗಿರುವೆಯಾ.?

ನೀನೊಂದು ಸಲ
ಪ್ರೀತಿಸಿ ನೋಡು
ನಿನಗದನ್ನು ಸರಾಗವಾಗಿ
ನುಂಗಬಹುದು!

ನೀನು ಸಮುದ್ರದ ಆಳಗಳೆಡೆಗೆ
ಸಾಲು ಅಲೆಗಳ ಮುಖಾಂತರ
ಪ್ರಯಾಣಿಸಿ ದಡದಿಂದ ದಡಕ್ಕೆ
ಹಾರಿ ಬಿದ್ದಿರುವೆಯಾ?

ನೀನೊಂದು ಸಲ
ಪ್ರೀತಿಸಿ ನೋಡು, ಆಗ
ನಿನಗೆ ಆಳಗಳ
ಒಳಚೆಲುವು
ಗೊತ್ತಾಗಬಲ್ಲುದು!

ನೀನು ವಜ್ರದ ಸೂಜಿಯಿಂದ
ಹೃದಯದ ಭಿತ್ತಿಯ ಮೇಲೆ
ಕಲ್ಪಿತ ಚಿತ್ರಗಳ ಬಿಡಿಸಿರುವೆಯಾ?

ನೀನೊಂದು ಸಲ
ಪ್ರೀತಿಸಿ ನೋಡು,
ನೀನೊರ್ವ ಶ್ರೇಷ್ಠ
ಕಲಾವಿದನಾಗಬಹುದು!

–ಮಂಜುಳಾ ಹಿರೇಮಠ

(ಇವರ ಇತ್ತೀಚಿನ 'ಗಾಯಗೊಂಡವರಿಗೆ' ಕವನ ಸಂಕಲನದಿಂದ ಆಯ್ದ ಪದ್ಯ)

ಮರೆತುಬಿಡು



ದರ-ದರನೇ ಎಳೆದು
ಶಾಲೆಯಂಗಳಕ್ಕೆ ನೂಕಿ
ಜೋರಾಗಿ ಬೆತ್ತದ
ರುಚಿ ತೋರಿಸಿದಾಗ
ನಿನ್ನನ್ನು ಕೆಕ್ಕರಿಸಿ ನೋಡಿದ್ದೆ

ಹೊಲಕ್ಕೆ ಕರೆದೊಯ್ದು
ಕುಂಟೆ ಕೂರಿಗೆ ಕೈಗಿಟ್ಟು
ಬದುಕಿನ ಹಾದಿ ತೋರಿಸಿದಾಗ
ದೂರದಿಂದಲೇ ಕಲ್ಲೆಸೆದು ಓಡಿದ್ದೆ.

ನೀರು ತರಲಿಕ್ಕೆ ನಾಲ್ಕು ಬಿಗಿದಾಗ
ಕಿರಾಣಿ ತರಲು ಹೇಳಿ
ಜವಾಬ್ದಾರಿ ತೋರಿದಾಗ
ಬೈದು ಬೆನ್ನು ಮಾಡಿದ್ದೆ


ಇವತ್ತು ಮಗಳು ಇದಿರಾಡಿದಳು
ನೀನು ನೆನಪಾದೆ ಅಪ್ಪ....

–ರಮೇಶ ಸಿ. ಬನ್ನಿಕೊಪ್ಪ, ಹಲಗೇರಿ

(ಇವರ ಇತ್ತೀಚಿನ ಕವನ ಸಂಕಲನ 'ಕಾಣೆಯಾದ ನಗುವ ಚಂದಿರ'ದಿಂದ ಆಯ್ದ ಪದ್ಯ)



ಚಿತ್ರಗಳು: ವಿಜಯಶ್ರೀ ಹಾಲಾಡಿ



ಕರೋನಾ



ವಾಕರಿಕೆ ಹುಟ್ಟಿಸಿದ ಗೃಹ ಬಂಧನ
ನಮಗಾಗಿ ನಾವೇ ಇರಲೊಲ್ಲೆವು

ಜಗಕಾಗಿ ಒಳಗಿದ್ದ ಗಾಂಧಿ, ಮಡೇಲಾ, ಸೂಕಿಯ
ನೋವು ಅರ್ಥವಾಗಿವಿದಿ ಹೇಗೆ?

ಕಾಣದ ಹುಳ
ಕಂಡರಿಯದಷ್ಟೂ ಕಲಿಸಿದ ಪಾಠಗಳು
ಸ್ತಬ್ಧತೆ, ನಿಶ್ಯಬ್ದ, ನಿರ್ಲಿಪ್ತತೆ

ಜಗತ್ತು ತಲ್ಲಣಿಸಿದ ಪರಿಗೆ
ಶಬ್ದಕೋಶಕ್ಕೆ ಹೊಸ ಶಬ್ದ ನೀಡಬೇಕು.

–ಮಹೇಶ ಬಳ್ಳಾರಿ

(ಇವರ ಇತ್ತೀಚಿನ 'ಐ ಕಾಂಟ್ ಬ್ರೀದ್' ಸಂಕಲನದಿಂದ ಆಯ್ದ ಪದ್ಯ)

ಒಂದು ಲಲಿತ ಪ್ರಬಂಧ

ಗೋಕಟ್ಟೆ ಕಥನ

–ಮಲ್ಲಿಕಾರ್ಜುನ ಹೊಸಪಾಳ್ಯ



ಚಿತ್ರ: ಗುಜ್ಜಾರ್

ದನಕರು ಕುಡಿಯೋಕೆ ಗೋಕುಂಟೆ ಕಟ್ಟಿದ
ಗೋಕುಂಟೆ ಬಳಿಯೊಂದು ಗೋಕಲ್ಲು ನೆಟ್ಟಂತ
ಆ ಹಿರಿಯರ ಪಾದಕ್ಕೆ ಶರಣು
ಅವರು ಮುಟ್ಟಿದ ಮಣ್ಣಿಗೆ ಶರಣು.

ಗೋಕಟ್ಟೆ ಅನ್ನಿ, ಗೋಕುಂಟೆ ಅನ್ನಿ ಅಥವಾ ಗವ್ ಕಟ್ಟೆ ಅಂತಾದರೂ ಕರೆಯಿರಿ. ಅವುಗಳ ಕೆಲಸ ಒಂದೇ. ಜೀವಾದಿಗಳಿಗೆ ನೀರುಣಿಸುವುದು. ಅವುಗಳ ಬಾಯಾರಿಕೆ ತಣಿಸುವುದು. ಹೆಸರಿಗಷ್ಟೇ ಗೋ ಕಟ್ಟೆ. ಆದರೆ ಅವು ಎಮ್ಮೆ, ಕುರಿ, ಮೇಕೆ, ಹಂದಿ, ನಾಯಿ, ಕತ್ತೆ, ನರಿ, ಜಿಂಕೆ, ಮೊಲವೇ ಮುಂತಾದ ಸಕಲೆಂಟು ಜೀವಾದಿಗಳಿಗೂ ನೀರುಣಿಸುವ ತಾಣಗಳು. ಬಹುಶಃ ಹಿಂದೆ ಗೋವುಗಳೇ ಹೆಚ್ಚು ಇದ್ದುದರಿಂದ ಅಥವಾ ಕರೆಯಲು ಸಲೀಸು ಎಂದುಕೊಂಡು ಈ ರೀತಿ ಹೆಸರು ಬಂದಿರಬಹುದು.

ನಮ್ಮ ಹೊಲದ ಮೇಗಳ ಖರಾಬು ಜಮೀನಿನಲ್ಲಿ ಒಂದು ಗೋಕಟ್ಟೆ ಇತ್ತು. ಅದರ ಮೂರು ದಿಕ್ಕಿಗೂ ಬೆಟ್ಟ ಗುಡ್ಡಗಳು ಹಬ್ಬಿದ್ದು ಆಯಕಟ್ಟಿನ ಜಾಗದಲ್ಲಿ ಅದನ್ನು ನಿರ್ಮಿಸಲಾಗಿತ್ತು. ಅದರ ಮೇಲ್ಭಾಗದಲ್ಲಿ ಇಳಿಜಾರಾದ ಒಂದು ಹೆಬ್ಬಂಡೆ ಇದ್ದು ಅದರ ಮೇಲೆ ಬಿದ್ದ ನೀರೆಲ್ಲಾ ಆ ಕಟ್ಟೆಯಲ್ಲಿ ಶೇಖರಣೆಯಾಗುತ್ತಿದ್ದುದರಿಂದ ವರ್ಷೊಂಭತ್ತು ಕಾಲವೂ ನೀರಿನ ಕೊರತೆಯೇ ಆಗುತ್ತಿರಲಿಲ್ಲ. ಒಂದು ದೋಣಿ ದುಮುಕಲು ಮಳೆ ಬಂದರೂ ಸಾಕು ಅದು ತುಂಬುತ್ತಿತ್ತು.

ಅದೇನೂ ಬೃಹತ್ ಗಾತ್ರವಿರಲಿಲ್ಲ. ವಿಶಾಲವಾಗಿಯೂ ಇರಲಿಲ್ಲ. ಗೋಕಟ್ಟೆಗೆ ಇಳಿಜಾರಿನ ಕಡೆ ೩೦ ಮೀಟರಿನಷ್ಟು ಉದ್ದದ ಒಂದು ಮಣ್ಣಿನ ಏರಿ ಹಾಕಿ ನೀರು ನಿಲ್ಲುವಂತೆ ಮಾಡಿದ್ದರು ಅಷ್ಟೇ. ಒಂದಾಳುದ್ದ ನೀರು ನಿಲ್ಲುತ್ತಿತ್ತು.

ಅಲ್ಲಿಗೆ ದನ–ಕರು, ಕುರಿ–ಮೇಕೆ ಮೇಯಿಸಲು ಬರುವ ಮಾರುತಿಪುರ, ಗೊಲ್ಲರಹಟ್ಟಿ, ಬಸವನಹಳ್ಳಿ, ದಿನ್ನೆಹಟ್ಟಿ ಗ್ರಾಮಗಳ ಜಾನುವಾರುಗಳಿಗೆ ಬಾಯಾರಿಕೆ ತಣಿಸಲು ಅದೊಂದೇ ಆಧಾರ. ಅಷ್ಟೇ ಅಲ್ಲ, ಮೂರು ದಿಕ್ಕಿಗೂ ಇದ್ದ ಗರಲು ಬೆಟ್ಟ, ಅಪ್ಪೋರ ಬೆಟ್ಟ, ಪಕ್ಷಿ ಬಂಡೆ, ಉಸ್ಕಲ್ ಗುಟ್ಟೆ, ಸಣ್ಣಗಣಿಮೆ, ಕರೇಕಲ್ಲು ಒಬ್ಬೆಗಳಲ್ಲಿ ವಾಸವಿದ್ದ ಕರಡಿ, ಕಪ್ಪಲುನರಿ, ತೋಳ, ಕುಂದಿಲಿಗಳಿಗೂ ಅದು ನೀರುಣಿಸುತ್ತಿತ್ತು. ಹಗಲು ಸಾಕು ಪ್ರಾಣಿಗಳಿಗೆ, ಇರುಳು ಕಾಡು ಪ್ರಾಣಿಗಳಿಗೆ.

ನಾವು ೭೦ರ ದಶಕದಲ್ಲಿ ಅಲ್ಲಿ ಜಮೀನು ಕೊಳ್ಳುವ ವೇಳೆಗಾಗಲೇ ಆ ಗೋಕಟ್ಟೆ ಇತ್ತು. ಹಳ್ಳಿಗರೇ ಶ್ರಮದಾನ ಮಾಡಿ ಅದನ್ನು ಕಟ್ಟಿದ್ದರಂತೆ. ಅದನ್ನು ಎಲ್ಲರೂ ಗವ್ ಕಟ್ಟೆ ಅಂತಲೇ ಕರೆಯುತ್ತಿದ್ದರು. ಸಂಜೆಯಾಗುತ್ತಿದ್ದಂತೆ ಅದರ ಪರಿಸರವೆಲ್ಲಾ ಗುಯ್ಯೋ ಅಂತ ಸದ್ದು ಹೊರಡಿಸುತ್ತಿತ್ತು. ಸಣ್ಣುಡುಗನಾಗಿದ್ದಾಗ ನಾನು ಆ ಸದ್ದಿನ ದೆಸೆಯಿಂದಾಗಿಯೇ ಅದಕ್ಕೆ ಗವ್ ಕಟ್ಟೆ ಎಂದು ಕರೆಯುತ್ತಾರೆ ಎಂದುಕೊಂಡಿದ್ದೆ.

ಆ ಗೋಕಟ್ಟೆ ಬಳಿ ಸದಾ ಒಂದಲ್ಲಾ ಒಂದು ಸದ್ದು ಇದ್ದೇ ಇರುತ್ತಿತ್ತು. ಹಿಟ್ಟೊತ್ತಿಗೆ ಜೀವಾದಿಗಳನ್ನು ಮೇಯಿಸಲು ಅಲ್ಲಿಗೆ ಬರುತ್ತಿದ್ದ ಹುಡುಗರು ಹೊತ್ತು ಮುಣುಕುವವರೆಗೂ ಗಲಲಲೋ ಅಂತ ಗಲಾಟೆ ಮಾಡುತ್ತಿದ್ದರು. ಜೀವಾದಿಗಳನ್ನು ಮೇಯಲು ಬಿಟ್ಟು ಇವರ ಉಪ್ಪುಪ್ ಕಡ್ಡಿ ಆಟ, ಕಲ್ಲು ಬೀಸೋ ಆಟ, ಗಿಲ್ಲಿದಾಂಡು, ಕಬಡ್ಡಿಗಳೇ ಮುಂತಾದ ಸಕಲೆಂಟು ಆಟಗಳೂ ಅಲ್ಲಿ ನಡೆಯುತ್ತಿದ್ದವು. ಆಗಾಗ ಜಗಳಗಳೂ. ಧಗೆ ಹೆಚ್ಚಾದರೆ ಆಟ ನಿಲ್ಲಿಸಿ ಅಂಗಿ ಬಿಚ್ಚೆಸೆದು ಆ ಹೊಂಡು ನೀರಿಗೆ ಧುಡುಮ್ಮನೇ ಡೈ ಹೊಡೆಯುತ್ತಿದ್ದರು. ಮನಸೋ ಇಚ್ಚೆ ಈಜುತ್ತಿದ್ದರು. ಗವ್ ಕಟ್ಟೆ ಪಕ್ಕದ ಹೆಬ್ಬಂಡೆಯಲ್ಲಿ ಒಂದು ದೊಡ್ಡ ಗವಿ ಇತ್ತು. ಅದು ಬಿಸಿಲಿದ್ದಾಗ ನೆರಳನ್ನೂ ಮಳೆ ಬಂದಾಗ ಆಸರೆಯನ್ನೂ ನೀಡುತ್ತಿತ್ತು. ಗೋಕಟ್ಟೆ ಬಳಿ ಜನಸಂದಣಿ ಹೆಚ್ಚಲು ಈ ವಿಶೇಷ ಫೆಸಿಲಿಟಿಯೂ ಒಂದು ಕಾರಣ.

ನಾನೂ, ನನ್ನ ಅಣ್ಣಂದಿರೂ ಸೇರಿ ನಮ್ಮೂರಿನ ಬಹುತೇಕರು ಈಜು ಕಲಿತಿದ್ದೇ ಈ ಹೊಂಡದ ನೀರಿನ ಲೋಕಲ್ ಸ್ವಿಮ್ಮಿಂಗ್ ಪೂಲಿನಲ್ಲಿ. ಮಕ್ಕಳಿಸ್ಕೂಲು ಮನೇಲಲ್ವೇ ಎಂಬುದು ನಮಗೆ ಅನ್ವಯಿಸುವುದಿಲ್ಲ. ಯಾಕೆಂದರೆ ನಮ್ಮ ಅರ್ಧ ಇಸ್ಕೂಲು ಈ

ಆ ಗೋಕಟ್ಟೆ ಬಳಿ ಸದಾ ಒಂದಲ್ಲಾ ಒಂದು ಸದ್ದು ಇದ್ದೇ ಇರುತ್ತಿತ್ತು. ಹಿಟ್ಟೊತ್ತಿಗೆ ಜೀವಾದಿಗಳನ್ನು ಮೇಯಿಸಲು ಅಲ್ಲಿಗೆ ಬರುತ್ತಿದ್ದ ಹುಡುಗರು ಹೊತ್ತು ಮುಣುಕುವವರೆಗೂ ಗಲಲಲೋ ಅಂತ ಗಲಾಟೆ ಮಾಡುತ್ತಿದ್ದರು. ಜೀವಾದಿಗಳನ್ನು ಮೇಯಲು ಬಿಟ್ಟು ಇವರ ಉಪ್ಪುಪ್ ಕಡ್ಡಿ ಆಟ, ಕಲ್ಲು ಬೀಸೋ ಆಟ, ಗಿಲ್ಲಿದಾಂಡು, ಕಬಡ್ಡಿಗಳೇ ಮುಂತಾದ ಸಕಲೆಂಟು ಆಟಗಳೂ ಅಲ್ಲಿ ನಡೆಯುತ್ತಿದ್ದವು. ಆಗಾಗ ಜಗಳಗಳೂ. ಧಗೆ ಹೆಚ್ಚಾದರೆ ಆಟ ನಿಲ್ಲಿಸಿ ಅಂಗಿ ಬಿಚ್ಚೆಸೆದು ಆ ಹೊಂಡು ನೀರಿಗೆ ಧುಡುಮ್ಮನೇ ಡೈ ಹೊಡೆಯುತ್ತಿದ್ದರು. ಮನಸೋ ಇಚ್ಚೆ ಈಜುತ್ತಿದ್ದರು. ಗವ್ ಕಟ್ಟೆ ಪಕ್ಕದ ಹೆಬ್ಬಂಡೆಯಲ್ಲಿ ಒಂದು ದೊಡ್ಡ ಗವಿ ಇತ್ತು. ಅದು ಬಿಸಿಲಿದ್ದಾಗ ನೆರಳನ್ನೂ ಮಳೆ ಬಂದಾಗ ಆಸರೆಯನ್ನೂ ನೀಡುತ್ತಿತ್ತು. ಗೋಕಟ್ಟೆ ಬಳಿ ಜನಸಂದಣಿ ಹೆಚ್ಚಲು ಈ ವಿಶೇಷ ಫೆಸಿಲಿಟಿಯೂ ಒಂದು ಕಾರಣ.

ನಾನೂ, ನನ್ನ ಅಣ್ಣಂದಿರೂ ಸೇರಿ ನಮ್ಮೂರಿನ ಬಹುತೇಕರು ಈಜು ಕಲಿತಿದ್ದೇ ಈ ಹೊಂಡದ ನೀರಿನ ಲೋಕಲ್ ಸ್ವಿಮ್ಮಿಂಗ್ ಪೂಲಿನಲ್ಲಿ. ಮಕ್ಕಳಿಸ್ಕೂಲು ಮನೇಲಲ್ವೇ ಎಂಬುದು ನಮಗೆ ಅನ್ವಯಿಸುವುದಿಲ್ಲ. ಯಾಕೆಂದರೆ ನಮ್ಮ ಅರ್ಧ ಇಸ್ಕೂಲು ಈ ಕಟ್ಟೆಯೇ. ಹತ್ತಾರು ಆಟಗಳು, ದನ-ಕರುಗಳನ್ನು ಕರೆಯುವ ವಿಧಾನ ಹಾಗೂ ಥರಾಥರದ ಬೈಗುಳಗಳನ್ನು ಕಲಿತಿದ್ದೇ ಈ ಕಟ್ಟೆಯ ಇಸ್ಕೂಲಿನಲ್ಲಿ.

ಕಟ್ಟೆಯೇ. ಹತ್ತಾರು ಆಟಗಳು, ದನ–ಕರುಗಳನ್ನು ಕರೆಯುವ ವಿಧಾನ ಹಾಗೂ ಥರಾಥರದ ಬೈಗುಳಗಳನ್ನು ಕಲಿತಿದ್ದೇ ಈ ಕಟ್ಟೆಯ ಇಸ್ಕೂಲಿನಲ್ಲಿ.

ಹೊತ್ತು ಮುಣುಕಿ ನರಮಾನವರ ಸದ್ದುಗಳು ಅಡಗುತ್ತಿದ್ದಂತೆ ಅಲ್ಲಿ, ಆ ಗೋಕಟ್ಟೆಯ ಪರಿಸರದಲ್ಲಿ ಕತ್ತಲು ಕವುಚಿಕೊಳ್ಳುತ್ತಿತ್ತು. ಆಗ ಆ ಮಕ್ಕತ್ತಲಲ್ಲಿ ಮತ್ತೊಂದು ಸದ್ದು ಸುರುವಾಗುತ್ತಿತ್ತು. ಅದು ಜೊಯ್ಯೋ ಎಂಬ ಕೀಟಗಳ ಸದ್ದು, ಕೊಟರ್ರೋ ಎಂಬ ಮಂಡರುಗಪ್ಪೆಗಳ ಸದ್ದು. ಆ ಸದ್ದುಗಳು ನಮಗಾಗಿಯೇ ಆರಂಭವಾಗಿವೆಯೇನೋ ಎಂಬಂತೆ ಅಲ್ಲಿ ನೃತ್ಯ ಶುರುವಾಗುತ್ತಿತ್ತು. ಅದು ಬೆಳಕಿನ ನೃತ್ಯ. ಅಂದರೆ ಬೆಳಕಿನ ಹುಳುಗಳಾದ ಮಿಂಚುಳುಗಳ ನೃತ್ಯ.

ಅಬ್ಬಾ ಅದಂತೂ ಮರೆಯಲಾರದ ಅನುಭವ. ಸಾವಿರಾರು ಮಿಂಚು ಹುಳುಗಳು ಒನದಾಡುತ್ತಿದ್ದವು. ಮೇಲಕ್ಕೆ ಏರುವುದು, ಕೆಳಕ್ಕೆ ಇಳಿಯುವುದು, ದೂರ ಹೋಗುವುದು, ಮತ್ತೆ ಬರುವುದು. ಒಟ್ಟಾರೆ ಅದೊಂದು ಬೆಳಕಿನ ಸಂತೆ. ಅಷ್ಟು ಅಸಂಖ್ಯ ಮಿಂಚು ಹುಳುಗಳನ್ನು ನಾನು ಈವರೆಗೆ ಮತ್ತೆ ಕಂಡಿಲ್ಲ. ಸುತ್ತ ಐದಾರು ಕಿಲೋಮೀಟರ್ ಎಲ್ಲಿಯೂ ವಿದ್ಯುತ್ ದೀಪ ಇಲ್ಲದ ಜಮೀನು ನಮ್ಮದು. ಅಲ್ಲಿ ಚುಕ್ಕಿ ಬೆಳಕು, ಆಗಾಗ ಚಂದ್ರನ ಬೆಳಕು ಬಿಟ್ಟರೆ ಮಿಕ್ಕೆಲ್ಲಾ ಕತ್ತಲೇ ಇರುತ್ತಿತ್ತು. ಈ ಕಪ್ಪಪ್ಪೆ ಕತ್ತಲಿನ ಹಿನ್ನೆಲೆಯಲ್ಲಿ ತಮ್ಮೊಳಗಿನ ಪುಟ್ಟ– ಪುಟ್ಟ ಬ್ಯಾಟರಿಗಳನ್ನು ಆರಿಸುತ್ತಾ–ಉರಿಸುತ್ತಾ ಹಾರಾಡುತ್ತಿದ್ದ ಆ ಹುಳುಗಳ ಬೆಳಕು ಇನ್ನಷ್ಟು ಮೆರುಗು ಪಡೆಯುತ್ತಿತ್ತು.

ಅಲ್ಲೇ ಪಕ್ಕದ ವಿಶಾಲ ಬಂಡೆಯ ಮೇಲೆ ನಾವು ವರ್ಷಕ್ಕೆ ಎರಡು ಸಲ ಭತ್ತದ ಕಣ ಮಾಡುತ್ತಿದ್ದೆವು. ಆಗ ಇಡೀ ವಾರ ಕಣದಲ್ಲೇ ವಾಸ. ಆ ಸಮಯದಲ್ಲಿ ಗೋಕಟ್ಟೆಯ ಈ ಬೆರಗಿನ ಲೋಕ ನೋಡಲು ಸಿಗುತ್ತಿತ್ತು. ತುಸು ಎತ್ತರದ ಬಂಡೆಯ ಮೇಲೆ ಕುಳಿತರೆ ನಿಚ್ಚಳವಾಗಿ ಕಾಣುತ್ತಿದ್ದ ಆ ದೃಶ್ಯವು ಗ್ರೀಕ್ ರಂಗಮಂದಿರವಾದ ಕಲೋಸಿಯಮ್ಮಿಗಿಂತ ಯಾವುದರಲ್ಲೂ ಕಡಿಮೆ ಇರುತ್ತಿರಲಿಲ್ಲ.

ಇನ್ನು, ಎರಡು ಕಾರಣಕ್ಕಾಗಿ ಹೆಣ್ಣು ಮಕ್ಕಳಿಗೆ ಈ ಗೋಕಟ್ಟೆ ಇಷ್ಟವಾಗಿತ್ತು. ಒಂದು–ಬಟ್ಟೆ ಒಗೆಯಲು ಸದಾ ನೀರು ಲಭ್ಯ. ಇನ್ನೊಂದು–ಕಟ್ಟೆಯಲ್ಲಿ ಬೆಳಕರಿದರೆ ಅರಳಿ ನಿಲ್ಲುತ್ತಿದ್ದ ಚೆಂದನೆಯ ಬಿಳೀ ತಾವರೆ ಹೂಗಳು. ಹತ್ತು ಗಂಟೆ ನಂತರ ಹುಡುಗರು ಬಂದು ಈಜಾಡಿ ನೀರನ್ನೆಲ್ಲಾ ಹೊಂಡು ಮಾಡುತ್ತಿದ್ದುದರಿಂದ ಹೆಣ್ಣುಮಕ್ಕಳು ಬೆಳಿಗ್ಗೆಯೇ ಬಟ್ಟೆ ಒಗೆಯಲು ಬರುತ್ತಿದ್ದರು. ಬೆಳಗಿನ ಹೊತ್ತು ತಾವರೆ ಹೂಗಳೂ ಸಹ ಫಳಫಳಾಂತ ಹೊಳೆಯುತ್ತಾ ಅರಳಿರುತ್ತಿದ್ದವು. ಅವುಗಳ ಆಸೆಯಿಂದಲೂ ಅವರು ಬೇಗ ಬರುತ್ತಿದ್ದರು ಅನ್ನಬಹುದು. ಕೈಗೆಟಕುವಂತಿದ್ದರೆ ಅವರೇ ಕೀಳುತ್ತಿದ್ದರು. ಕಟ್ಟೆಯ ನಡೂ ಮಧ್ಯ ಇರುವ ಹೂಗಳನ್ನು ಕಿತ್ತುಕೊಡುವಂತೆ ಹತ್ತಿರದಲ್ಲಿನ ಹುಡುಗರಿಗೆ "ಅಪ್ಪಣಿ ಬಾಯಿಲ್ಲಿ ಹುವ್ವ ಕಿತ್ಕೊಡು" ಅಂತ ಆವಾಜ್ ಹಾಕುತ್ತಿದ್ದರು. ಪಕ್ಕದಲ್ಲೇ ಹೊಲ ಇದ್ದುದರಿಂದ ಆ ಆವಾಜ್ ಹಾಕಿಸಿಕೊಳ್ಳುವ ಹುಡುಗ ಬಹುತೇಕ ನಾನೋ ಇಲ್ಲಾ ನಮ್ಮಣ್ಣನೋ ಆಗಿರುತ್ತಿದ್ದೆವು.

ನಾನಾದರೋ ನಿಕ್ಕರನ್ನು ಕೈಲಿ ಹಿಡಿದು ಮೇಲಕ್ಕೆತ್ತಿಕೊಳ್ಳುತ್ತಾ ನೀರು ತೊಡೆ ನೆನೆಸುವವರೆಗೂ ಇಳಿದು ಹೂ ಕೀಳುತ್ತಿದ್ದೆ. ಅಲ್ಲಿಂದ ಮೇಲಕ್ಕೆ ನೆನೆಸಿಕೊಳ್ಳಲು ಇಷ್ಟವಾಗುತ್ತಿರಲಿಲ್ಲ. ಆದರೆ ಆ ಹೆಂಗಸರು ಬಡಪೆಟ್ಟಿಗೆ ಬಿಡುತ್ತಿದ್ದರೇ. "ಇಳಿಯಪ್ಪಣಿ ನಿಂದೇನ್ ಮಳಕೆ ಒಡ್ಯಲ್ಲ" ಅಂತ ಮರ್ಮಾಂಗಕ್ಕೆ ತಾಕುವ ಬೈಗುಳ ಎಸೆಯುತ್ತಿದ್ದರು.

ಅನಿವಾರ್ಯವಾಗಿ ಇಳಿಯಲೇಬೇಕಿತ್ತು. ಹೆಣ್ಣುಮಕ್ಕಳಿಗೆ ಎದುರಾಡುವುದುಂಟೇ.

ಇಷ್ಟೆಲ್ಲಾ ಸಿಹಿ ನೆನಪುಗಳ ಈ ಕಟ್ಟೆ ಒಮ್ಮೆ ನನ್ನ ಜೀವ ತೆಗೆಯುತ್ತಿತ್ತು. ಒಂದು ದಿನ ಆಗಿನ್ನೂ ಈಜು ಕಲಿಯುತ್ತಿದ್ದ ನಾನು ಕಟ್ಟೆಯ ಮಧ್ಯಭಾಗಕ್ಕೆ ಹೋಗಿಬಿಟ್ಟೆ. ಕೆಸರಿನಲ್ಲಿ ಕಾಲು ಸಿಗಾಕಿಕೊಂಡಿತು. ಗಾಬರಿಯಲ್ಲಿ ಹಿಮ್ಮುಖವಾಗಿ ಬಿದ್ದು ಇನ್ನೇನು ಮುಳುಗುವಾಗ ಅಣ್ಣ ಬಂದು ಎಳೆದುಕೊಂಡರು.

೮೦ರ ದಶಕದಲ್ಲಿ ಒಂದು ವರ್ಷ ಏಮಾಏಮಿ ಮಳೆ ಭರ್ತಿ ಒಂದು ವಾರ. ನೀರಿನ ರಭಸಕ್ಕೆ ಕಟ್ಟೆ ತುಂಬಿ ಏರಿ ಒಡೆದು ಹೋಯಿತು. ಅಯ್ಯೋ ಗೋಕಟ್ಟೆ ಕತೆ ಮುಗಿಯಿತಲ್ಲಾ ಅಂದುಕೊಳ್ಳುವಾಗ, ಮಳೆಗಾಲ ಮುಗಿದ ಒಂದು ಸೋಮವಾರ ಅಕ್ಕ-ಪಕ್ಕದ ಊರವರೆಲ್ಲಾ ಗುದ್ಲಿ, ಸಲಿಕೆ, ಮಂಕರಿ, ಪಿಕಾಸಿಗಳನ್ನು ಹಿಡಿದುಕೊಂಡು ಜೇನು ಹುಳುಗಳಂತೆ ಬಂದು ಒಡೆದಿದ್ದ ಕಟ್ಟೆಯನ್ನು ಮರಳಿ ಕಟ್ಟಿದರು. ವಿರೂಪವಾಗಿ ಕಾಣುತ್ತಿದ್ದ ಏರಿ ಅರ್ಧ ದಿನಕ್ಕೆಲ್ಲಾ ಹೊಸ ಮಣ್ಣಿನಿಂದ ಭದ್ರವಾಗಿತ್ತು. ಹೊಚ್ಚ ಹೊಸದಾಗಿತ್ತು.

ಮಳೆಗಾಲ ಕಡಿಮೆಯಾದ ವರ್ಷ ಮಾರ್ಚ್-ಏಪ್ರಿಲ್ ಹೊತ್ತಿಗೆ ನೀರು ಕಡಿಮೆಯಾಗುತ್ತಿತ್ತು. ಆಗ ಮೀನು ಹಿಡಿಯುವವರ ಸುಗ್ಗಿ. ಕಟ್ಟೆಯಲ್ಲಿ ನೀರನ್ನು ಉಗ್ಗಿ ಕೆಸರಿನಲ್ಲಿ ಒದ್ದಾಡುವ ಮೀನುಗಳನ್ನು ಗಬಕ್ಕನೆ ಹಿಡಿದು ದಡಕ್ಕೆ ಎಸೆಯುತ್ತಿದ್ದರು. ಕೊರವ, ಮಳ್ಳೆ ಮೀನು ಯಥೇಚ್ಚವಾಗಿ ದೊರೆಯುತ್ತಿದ್ದವು. ಕೇವಲ ನರಮಾನವರಷ್ಟೇ ಅಲ, ಈ ಮೀನು ಸುಗ್ಗಿಗೆ ಕೊಕ್ಕರೆ, ರಣಹದ್ದುಗಳಿಗೂ ಜತೆಯಾಗುತ್ತಿದ್ದವು.

ಆಹಾ. ಆ ಒಂದು ಪುಟ್ಟ ಗೋಕಟ್ಟೆ ಎಷ್ಟೆಲ್ಲಾ ಜೀವಂತಿಕೆಯನ್ನು ತನ್ನೊಳಗೆ ಇಟ್ಟುಕೊಂಡಿತ್ತು.

ಗೋಕಟ್ಟೆಗಳು ನಮ್ಮ ರಾಜ್ಯದ ಪ್ರಮುಖ ಪಾರಂಪರಿಕ ಜಲಮೂಲಗಳು. ಸುರಂಗ, ಮದಕ, ತಲಪರಿಗೆ, ತೆರೆದಬಾವಿ, ಕಲ್ಯಾಣಿ, ಗುಂಡ್ಯ, ಒರತೆ, ದೊಣೆ, ಕಟ್ಟ, ಬಾವಡಿ, ಸಿಸಿಂದ್ರ ಇತ್ಯಾದಿ ವೈವಿಧ್ಯಮಯ ಜಲಮೂಲ ಹಾಗೂ ಜಲಸಂರಕ್ಷಣಾ ವಿಧಾನಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಕಾಣಬಹುದು. ಅವುಗಳಲ್ಲಿ ಗೋಕಟ್ಟೆ ಪ್ರಮುಖವಾದುದು. ಉಳಿದವು ಬಹುತೇಕ ಜನರ, ದೇವಾಲಯಗಳ ಹಾಗೂ ಕೃಷಿ ಬಳಕೆಗೆ ಮೀಸಲಾಗಿದ್ದರೆ ಗೋಕಟ್ಟೆಗಳು ಮಾತ್ರವೇ ಪಶು-ಪಕ್ಷಿ ಜೀವಾದಿಗಳ ದಾಹ ತಣಿಸುವ ತಾಣಗಳಾಗಿರುವುದು ವಿಶೇಷ.

ಕೆರೆಗಳ ನಿರ್ಮಾಣಕ್ಕೂ ಮುನ್ನವೇ ಗೋಕಟ್ಟೆಗಳು ಇದ್ದಿರಬಹುದು. ಬಹುಶಃ ಗೋಕಟ್ಟೆಗಳ ಪರಿಕಲ್ಪನೆಯೇ ವಿಸ್ತರಣೆಯಾಗಿ ಕೆರೆಗಳಾಗಿರುವ ಸಾಧ್ಯತೆಯೂ ಇದೆ. ಅಲ್ಲದೆ ಈಗ ಜನಪ್ರಿಯವಾಗಿರುವ ಹಾಗೂ ಸರ್ಕಾರದ ಪ್ರಮುಖ ಯೋಜನೆಯೂ ಆಗಿರುವ ಕೃಷಿ ಹೊಂಡಗಳ ಮೂಲವೂ ಗೋಕಟ್ಟೆಗಳೇ. ಕರಾವಳಿಯಲ್ಲಿ ಕಂಡುಬರುವ ಮದಕಗಳೆಂಬ ಜಲಮೂಲವು ಬಹುತೇಕ ಗೋಕಟ್ಟೆಯನ್ನೇ ಹೋಲುತ್ತದೆ. ಗಾತ್ರದಲ್ಲಿ ತುಸು ದೊಡ್ಡದು ಅಷ್ಟೆ. ಕೋಲಾರ ಹಾಗೂ ಚಿಕ್ಕಬಳ್ಳಾಪುರದ ಕಡೆ ಗಂಗೆಕಟ್ಟೆ, ಕುಂಟೆ ಎಂಬ ಹೆಸರು ವ್ಯಾಪಕವಾಗಿದೆ.

ಅಲ್ಲದೆ ನಮ್ಮಲ್ಲಿ ಯಥೇಚ್ಚ ಗೋಮಾಳಗಳಿದ್ದವು. ಜಾನುವಾರುಗಳು ಮೇಯಲು ಬೃಹತ್ ಹುಲ್ಲುಗಾವಲುಗಳನ್ನು ಮೀಸಲಿರಿಸಲಾಗಿತ್ತು. ಆ ಗೋಮಾಳಗಳಲ್ಲಿ ಜೀವಾದಿಗಳು ನೀರು ಕುಡಿಯಲು ಕಟ್ಟಿದ ರಚನೆಗಳಿಗೆ ಗೋಕಟ್ಟೆ ಎಂದು ಕರೆಯುತ್ತಿದ್ದರು. ಹೆಚ್ಚಾಗಿ ಹಳೇ ಮೈಸೂರು ಭಾಗದಲ್ಲಿ ಇಂತಹ ಗೋಮಾಳಗಳನ್ನು ಕಾಣಬಹುದು.

ಹಾವೇರಿ ಭಾಗದಲ್ಲಿ ಊರಿನ ಪಕ್ಕದಲ್ಲೇ ಈ ರಚನೆಗಳಿರುತ್ತವೆ. ಒಂದೊಂದು ಹಳ್ಳಿಯಲ್ಲಿ ೨-೩ ಕುಂಟೆಗಳಿರುವುದೂ ಉಂಟು. ಬಯಲಲ್ಲಿ ಮೇಯ್ದು ಬಂದ ಜೀವಾದಿಗಳು ಈ ಕುಂಟೆಗಳಲ್ಲಿ ನೀರು ಕುಡಿದು ಕೊಟ್ಟಿಗೆ ಇಲ್ಲವೇ ರೊಪ್ಪ ಸೇರುವುದು ರೂಢಿ.

ಸಾಮಾನ್ಯವಾಗಿ ಗೋಕಟ್ಟೆಗಳನ್ನು ಜೀವಾದಿಗಳು ಮೇಯುವ ಕಾವಲ್‌ಗಳು, ಬೆಟ್ಟಗುಡ್ಡಗಳ ತಪ್ಪಲು, ಕಾಡಿನ ಅಂಚು, ಊರಿನ ಹೊರಗೆ ನಿರ್ಮಿಸಲಾಗುತ್ತಿತ್ತು. ಊರೊಟ್ಟಿನ ಜನರೇ ಸೇರಿ ಕಟ್ಟುತ್ತಿದ್ದರು. ಇದೊಂದು ಪುಣ್ಯದ ಕೆಲಸವೆಂದು ಭಾವಿಸಿ ಕೆಲವೆಡೆ ವೈಯಕ್ತಿಕವಾಗಿ ನಿರ್ಮಿಸಿರುವುದೂ ಉಂಟು. ಕಟ್ಟಿದವರ ನೆನಪಿಗಾಗಿ ಕೆಲವು ಗೋಕಟ್ಟೆಗಳನ್ನು ಅವರ ಹೆಸರಿನಲ್ಲೇ ಕರೆಯುತ್ತಾರೆ. ಹನುಮಪ್ಪನ ಕಟ್ಟೆ, ಗಂಗಮ್ಮನ ಕಟ್ಟೆ, ಸಿದ್ದರ ಕಟ್ಟೆ ಇತ್ಯಾದಿ.

ಜೀವಾದಿಗಳ ಬಾಯಾರಿಕೆ ತಣಿಸುವುದು, ಅಂತರ್ಜಲ ಮರುಪೂರಣಗೊಳಿಸುವುದು ಗೋಕಟ್ಟೆಗಳ ಮುಖ್ಯ ಕೆಲಸವಾದರೂ ಸಹ ಕೆಲವೆಡೆ ಅವುಗಳಿಂದ ಸಣ್ಣ ಪ್ರಮಾಣದ ಕೃಷಿಯನ್ನೂ ಮಾಡುತ್ತಾರೆ. ಕಟ್ಟೆಯ ನೀರು ಹೊತ್ತೊಯ್ದು ತರಕಾರಿ, ಸೊಪ್ಪು, ಹೂ ಬೆಳೆಸುತ್ತಾರೆ. ತುಮಕೂರು ಭಾಗದಲ್ಲಿ ಕರೆಮುಗೆಯಲ್ಲಿ ನೀರು ಹೊತ್ತೊಯ್ದು ತೆಂಗಿನ ಸಸಿ ಹಾಗೂ ಎಲೆ ತೋಟ ಉಳಿಸಿಕೊಂಡ ಉದಾಹರಣೆಗಳನ್ನೂ ಕಾಣಬಹುದು.

ನಮ್ಮೂರಿನ ಸುತ್ತಲೂ ಕನಿಷ್ಠ ಐದಾರು ಗೋಕಟ್ಟೆಗಳಿದ್ದವು. ಆದರೆ ಈಗ ಉಳಿದಿರುವುದು ಒಂದೋ ಎರಡೋ ಮಾತ್ರ. ಎಲ್ಲವೂ ಒತ್ತುವರಿ ಭೂತಕ್ಕೆ ಸಿಲುಕಿವೆ. ರಾಜ್ಯದ ಗೋಕಟ್ಟೆಗಳ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಿಲ್ಲ. ಇವುಗಳನ್ನು ಸರ್ಕಾರವು ದಾಖಲಿಸಿಲ್ಲದ ಕಾರಣ ಹಿಂದೆ ಎಷ್ಟು ಇದ್ದವು, ಈಗ ಎಷ್ಟು ಉಳಿದಿವೆ ಎಂಬ ಅಂಕಿ-ಅಂಶ ಸಿಗುವುದು ಕಷ್ಟ.

ಆರಂಭದಲ್ಲಿ ಹೇಳಿದ ನಮ್ಮ ಹೊಲದ ಬಳಿಯ ಗೋಕಟ್ಟೆ ಈಗಲೂ ಹಾಗೇ ಇದೆ. ಅದೊಂದು ಸಮಾಧಾನ. ಆದರೆ ಈಗ ಅಲ್ಲಿ ಮುಂಚಿನಂತೆ ಜನ-ಜಾನುವಾರುಗಳ ಗದ್ದಲ ಇರುವುದಿಲ್ಲ. ತೀರಾ ಅಪರೂಪ. ಏಕೆಂದರೆ ಸುತ್ತ ಏಳಳ್ಳಿಗಳಲ್ಲಿ ಜಾನುವಾರುಗಳೇ ಕ್ಷೀಣಿಸಿವೆ.

ಹಸು, ಎತ್ತು, ಎಮ್ಮೆ, ಕುರಿ, ಮೇಕೆಗಳ ಸಂಖ್ಯೆ ಕಡಿಮೆಯಾಗಲು ಕಾರಣಗಳಿವೆ. ಆದರೆ ನಮ್ಮ ಗೋಕಟ್ಟೆ ಬಳಿ ಅಸಂಖ್ಯಾತವಾಗಿದ್ದ ಮಿಂಚು ಹುಳುಗಳೇ ಕಾಣುತ್ತಿಲ್ಲ. ಅವುಗಳ ಸಂಖ್ಯೆ ಯಾಕೆ ಕಡಿಮೆಯಾಯಿತು ಎಂಬುದು ದೊಡ್ಡ ಪ್ರಶ್ನೆ. ಆತಂಕದ ವಿಷಯವೂ ಹೌದು. ನಮ್ಮ ಗೋಕಟ್ಟೆ ಬಳಿ ಕತ್ತಲಾದ ಮೇಲೆ ಎಷ್ಟೋ ಹೊತ್ತು ಕುಳಿತರೂ ಬೆರಳೆಣಿಕೆಯಷ್ಟು ಮಾತ್ರ ಕಾಣುತ್ತವೆ. ಅವುಗಳಲ್ಲೂ ಹಾರಾಟದ ಸಂಭ್ರಮವಿಲ್ಲ. ಸುಮ್ಮನೆ ಬೇಜಾರಿನಲ್ಲಿ ತೇಲಾಡುವಂತೆ ಅನಿಸುತ್ತದೆ ಅಷ್ಟೇ. ಹಾಗಾಗಿ ಈಗ ನಮ್ಮ ಗೋಕಟ್ಟೆಯಲ್ಲಿ ನೀರಿದ್ದರೂ, ತಾವರೆ ಹೂಗಳಿದ್ದರೂ ಮಿಂಚುಹುಳುಗಳೇ ಇಲ್ಲವಾಗಿ ಅದರ ಚಹರೆ ತುಂಬಾ ಬದಲಾಗಿದೆ.


ಇದು ಬರೀ ನಮ್ಮೂರಿನ ಗೋಕಟ್ಟೆಗಳಲ್ಲಿ ಆಗಿರುವ ವಿದ್ಯಮಾನವಲ್ಲ. ರಾಜ್ಯದ ಬೇರೆ-ಬೇರೆ ಭಾಗದ ಸ್ನೇಹಿತರೂ ಮಿಂಚು ಹುಳುಗಳು ಅಪರೂಪವಾಗಿರುವುದನ್ನೇ ಹೇಳುತ್ತಾರೆ. ಜೀವ ವಿಜ್ಞಾನಿಗಳು ಈ ಬಗ್ಗೆ ಗಮನಹರಿಸುವ ತುರ್ತಿದೆ. ಬಹುಶಃ ಈಗ ರಾತ್ರಿ ಹೊತ್ತು ಎಲ್ಲಿ ನೋಡಿದರೂ ಬೆಳಕೇ ಇರುತ್ತದೆ. ವಿದ್ಯುತ್ ಕಂಬಗಳು ಕಾಡು-ಮೇಡುಗಳನ್ನೂ ಹೊಕ್ಕಿದ್ದು ದೀಪ ಉರಿಯುತ್ತಲೇ ಇರುತ್ತದೆ. ಕತ್ತಲು ಕಣ್ಮರೆಯಾಗಿಬಿಟ್ಟಿದೆ. ಆಕಾಶದಲ್ಲಿ ನಕ್ಷತ್ರಗಳನ್ನು ಕಾಣುವುದೂ ಸಾಧ್ಯವಿಲ್ಲ ಈಗ. ಹಾಗಾಗಿ ಕತ್ತಲಲ್ಲೇ ಬದುಕುವ ಮಿಂಚು ಹುಳುಗಳ ವಂಶಾಭಿವೃದ್ಧಿಗೆ ತೊಂದರೆ ಆಗಿರಲೂಬಹುದು.

ಇನ್ನು ಅಲ್ಲಿ ಹುಡುಗರು ಈಜುವುದನ್ನು ನೋಡಿ ಎಷ್ಟೋ ಕಾಲವಾಯಿತು. ಮೀನು ಹಿಡಿಯುವವರು ಅತ್ತ ಸುಳಿಯುವುದಿಲ್ಲ. 'ನೂರ್ ರುಪಾಯ್ ಕೊಟ್ರೆ ಕಣ್ಣಿಗೆ ಬೇಕಾದ್ ಮೀನು ಮಾರ್ಕೆಟ್ಟಿನಲ್ಲಿ ಸಿಗುತ್ತವೆ' ಎನ್ನುವ ಮನೋಭಾವ ಬಂದಿದೆ. ಮನೆ ಮುಂದೆಯೇ ನಲ್ಲಿಗಳು ಬಂದಿದ್ದು ಹೆಣ್ಣು ಮಕ್ಕಳು ಇಷ್ಟು ದೂರ ಮಂಕರಿಯಲ್ಲಿ ಬಟ್ಟೆ ತುಂಬಿಕೊಂಡು ನಡಕೊಂಡು ಬಂದು ಬಟ್ಟೆ ಯಾಕೆ ಒಗೆಯುತ್ತಾರೆ. ತಾವರೆ ಹೂಗಳು ನಿತ್ಯ ಅರಳುತ್ತವೆ, ಮಧ್ಯಾಹ್ನಕ್ಕೆಲ್ಲಾ ಬಾಡುತ್ತವೆ. ಯಾವಾಗಲೋ ಹಬ್ಬ-ಗಿಬ್ಬ ಬಂದಾಗ ಕೆಲವರು ಬಂದು ಹೂ ಕಿತ್ತುಕೊಂಡು ಹೋಗುತ್ತಾರೆ.

ನಮ್ಮೂರಿನ ಗೋಕಟ್ಟೆಯನ್ನು ಗಮನಿಸಿದರೆ ಸಾಕು ನಮ್ಮ ಬದುಕು, ಪರಿಸರ, ಕೃಷಿ, ಊರೊಟ್ಟಿನ ಸಂಬಂಧ, ಪಶುಸಂಗೋಪನೆಯಲ್ಲಿ ಆಗಿರುವ ಪರಿವರ್ತನೆಯನ್ನು ಸ್ಪಷ್ಟವಾಗಿ ಗುರುತಿಸಬಹುದು.

* * *


ಶುರುವಿನಲ್ಲಿ ಪ್ರಸ್ತಾಪಿಸಿರುವುದು ಕೋಟಿಗಾನಹಳ್ಳಿ ರಾಮಯ್ಯನವರ ಕವನದ ಅರ್ಥಪೂರ್ಣ ಸಾಲುಗಳು. ಗೋಕುಂಟೆ ಕಟ್ಟಿದ ಹಿರಿಯರ ಪಾದಗಳಿಗೆ ಶರಣು ಹೇಳಬೇಕು ಎನ್ನುವ ರಾಮಯ್ಯನವರ ಆಶಯ ಒಳ್ಳೆಯದೇ. ಅದಕ್ಕೆ ಮುಂಚೆ ನಮ್ಮ ಕಿರಿ ತಲೆಮಾರು ಗೋಕಟ್ಟೆಗಳೆಂಬ ವಿಶಿಷ್ಟ ಜಲಮೂಲಗಳ ಪರಂಪರೆಯನ್ನು ಉಳಿಸಿಕೊಳ್ಳಬೇಕು.



(ಜಲಸಂವರ್ಧನ ಕ್ಷೇತ್ರದ ತಜ್ಞರಾದ ಲೇಖಕರು ಈಗ ಹೊಸಪೇಟೆಯಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಕೃಷಿ ಸಂಬಂಧಿತ ವ್ಯವಹಾರಗಳ ಸಲಹಾಕಾರರಾಗಿದ್ದಾರೆ)



ಜವರಾಯ ಬಂದಾನೆ ಬರಿಗೈಲಿ ಬರಲಿಲ್ಲ..
ಒಳ್ಳೊಳ್ಳೆ ಮರಗಳನೇ ಕಡಿದೊಯ್ದಾ...



ಕಳೆದ ಒಂದು ತಿಂಗಳಲ್ಲಿ ನಮ್ಮನ್ನಗಲಿದ ಹಲವು ಮಹನೀಯರನ್ನು ನೆನೆಯುತ್ತಾ 'ಹೊಸ ಮನುಷ್ಯ' ತನ್ನ ಶ್ರದ್ಧಾಂಜಲಿಗಳನ್ನು ಸಲ್ಲಿಸುತ್ತಿದೆ-

'ಚಿಪ್ಕೋ' ಆಂದೋಲನದ ಹರಿಕಾರ ಸುಂದರಲಾಲ್ ಬಹುಗುಣ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ಹಿರಿಯ ರಾಜಕೀಯ ಮುತ್ಸದ್ದಿ ಕೆ.ಆರ್. ಪೇಟೆ ಕೃಷ್ಣ, ಹಿರಿಯ ಯಕ್ಷಗಾನ ಮತ್ತು ತತ್ವಶಾಸ್ತ್ರ ವಿದ್ವಾಂಸ ಎಂ.ಎ. ಹೆಗಡೆ, ಪತ್ರಕರ್ತ ಗೆಳೆಯ ಮಹದೇವ ಪ್ರಕಾಶ್, ಕವಿ ಮಿತ್ರ ಜರಗನಹಳ್ಳಿ ಶಿವಶಂಕರ್, ಹೋರಾಟಗಾರ ವಿಟ್ಠಲ ಭಂಡಾರಿ, ಹಿರಿಯ ಛಾಯಾಗ್ರಾಹಕ ನೇತ್ರ ರಾಜು, ಸಂಘಟಕ ಕೊಪ್ಪಳದ ಎಸ್.ಎನ್ ತಿಮ್ಮನ ಗೌಡ್ರ ಮತ್ತು ಕುಪ್ಪಳಿಯ ಕವಿಶೈಲದ ಮಾರ್ಗದರ್ಶಿ ಯು.ಜಿ. ಮಾನಪ್ಪನವರು...

ಪುಸ್ತಕಾವಲೋಕನ

ಪು: ಬೃಹದಾರಣ್ಯಕ (ಕಾದಂಬರಿ) ಲೇ: **ಗಂಗಾಧರ ಬೀಚನಹಳ್ಳಿ** ಪ್ರ: **ಭೂಮಿಶ್ರೀ ಪ್ರಕಾಶನ**, ಮೈಸೂರು (೯೪೮೦೭೮೪೯೦೮) ಪು: ೪೨೦ ಬೆಲೆ: ರೂ. ೪೦೦/-

ಅಭಿವೃದ್ಧಿ ಮೀಮಾಂಸೆಯ ಸರಳೀಕೃತ ಕಥನ



ನಮ್ಮ ಹಿರಿಯ ಕಥೆಗಾರ ಗಂಗಾಧರ ಬೀಚನಹಳ್ಳಿ ಸಾಕಷ್ಟು ಬಿಡುವಿನ ನಂತರ ಮಹತ್ವಾಕಾಂಕ್ಷೆಯ ಒಂದು ಬೃಹತ್ ಕಾದಂಬರಿಯನ್ನು ಬರೆದಿದ್ದಾರೆ. ಈ ದೀರ್ಘ ಬಿಡುವಿನ ವೇಳೆಯಲ್ಲಿ ಅವರು ತನ್ನ ಸುತ್ತಣ ಬದುಕಿನ ಬಗ್ಗೆ ಸಾಕಷ್ಟು ಯೋಚಿಸಿದ್ದಾರೆ. ರೈತಾಪಿ ಮೂಲದ ಅವರು ತುಮಕೂರಿನಲ್ಲಿದ್ದ ಎಚ್‌ಎಂಟಿ ಕೈಗಡಿಯಾರದ ಕಾರ್ಖಾನೆಯಲ್ಲೂ ನೌಕರಿ ಮಾಡಿದವರು. ಈ ಎರಡೂ ನೆಲೆಗಳ ಅನುಭವಗಳು ಅವರ ಈ ಆಲೋಚನಾ ಲಹರಿಯನ್ನು ರೂಪಿಸಿ ದೇಶ ಇಂದು ಸಾಗುತ್ತಿರುವ ದಿಕ್ಕು ದೆಸೆಗಳ ಬಗ್ಗೆ ಅವರಲ್ಲಿ ಒಂದು ಜಿಜ್ಞಾಸೆಗೆ ಕಾರಣವಾದಂತಿದ್ದು, ಈ ಕಾದಂಬರಿ ಈ ಜಿಜ್ಞಾಸೆಗೆ ಒಂದು ಭಿತ್ತಿ ಒದಗಿಸಿದಂತಿದೆ. ಈ ಜಿಜ್ಞಾಸೆಗೆ ಅವರು ಆಯ್ದುಕೊಂಡಿರುವ ಕೇಂದ್ರ ವಸ್ತು ಇಂದು ಕರೋನಾ ಸೇರಿದಂತೆ ಹಲವು ಅನಾಹುತಗಳಿಗೆ ಕಾರಣವಾಗಿದೆಯೆಂದು ಹೇಳಲಾಗುವ ನಮ್ಮ 'ಅಭಿವೃದ್ಧಿ ಮಾದರಿ'.

ಲೇಖಕರು ತಮ್ಮ ಜಿಜ್ಞಾಸೆಗೆ ಒಂದು ಕಥೆಯ ಚೌಕಟ್ಟು ನೀಡಲು ಅರಣ್ಯಕ ಎಂಬ ಒಂದು ದೇಶ, ಅದರಲ್ಲಿ ಸೌಮ್ಯಾವರಣ ಎಂಬ ಪ್ರಾಂತ್ಯ ಮತ್ತು ಅದರಲ್ಲಿನ ಮಾನಸಪುರ ಎಂಬ ಸಣ್ಣ ಊರೊಂದನ್ನು ಕಲ್ಪಿಸಿಕೊಂಡು ಅದನ್ನು ತಮ್ಮ ಕಥೆಗಾರಿಕೆಯ ಮುಖ್ಯ ನೆಲೆಯಾಗಿಸಿಕೊಂಡು ಅಲ್ಲೊಂದು ರಾಗಯಂಕಾ (ರಾಷ್ಟ್ರೀಯ ಗಡಿಯಾರ ಯಂತ್ರ ಕಾರ್ಖಾನೆ) ಎಂಬ ಕೈಗಾರಿಕೆಯ ಸ್ಥಾಪನೆಯಾಗುವ ಬೆಳವಣಿಗೆಯ ಸುತ್ತ ಈ ಕಾದಂಬರಿಯನ್ನು ಕಟ್ಟಿದ್ದಾರೆ. ಅದಕ್ಕಾಗಿ ಇಂಥಹುದೇ ಹಲವು ಕಾಲ್ಪನಿಕ ಊರುಗಳು ಮತ್ತು ಪಾತ್ರಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಉದಾ: ಪುರಸ್ಥಲಿ, ಕಲ್ಯಾಣನಗರಿ, ವ್ಯಾಘ್ರಪುರಿ, ಪ್ರಸ್ಥಾನಪುರ, ನಿಜಗುಣ ಸಂಪನ್ನ, ಜಂಬುಕೇಶ್ವರ ಧನುರ್ಧರ, ದಿವ್ಯಾನಂದ ನಭೋವಿಹಾರಿ, ಸಿದ್ಧಾಂಶು ಗೌತಮ, ಮಧುಕೇಶ ಸಂಭ್ರಮಿತ, ಮೈತ್ರೇಯಿ ವಿಶ್ವಪ್ರಭೆ, ಶರಭ ಸೌರಭೆ, ಉನ್ಮುಕ್ತೆ ಪತ್ರಲೋಚನೆ ಇತ್ಯಾದಿ ಇತ್ಯಾದಿ. ಈ ಅರಣ್ಯಕದ ಪರ್ವತಶ್ರೇಣಿ ರಜತಾದ್ರಿಯಾದರೆ, ಮಾನಸಪುರದ ಬಳಿಯ ಬೆಟ್ಟಶ್ರೇಣಿ ಮಾತುಂಗೇಶ್ವರ. ಈ ಕಾದಂಬರಿಯಲ್ಲಿ ಜರುಗುವ ಹಲವು ಘಟನೆಗಳು ಕೈ ಗಡಿಯಾರ ಕಾರ್ಖಾನೆಯೊಂದರ ಅವನತಿಗೆ ಸಂಬಂಧಿಸಿದ ಕಥೆಯ ಸ್ಥಳ ಮತ್ತು ಪಾತ್ರಗಳನ್ನು ನೆನಪಿಗೆ ತರಬಹುದಾದದ್ದರಿಂದ ಮತ್ತು ಅದು ಈ ಕಾದಂಬರಿಯ ಮುಖ್ಯ ಗಮನವನ್ನು ವಿಚಲಿತಗೊಳಿಸಬಹುದಾದದ್ದರಿಂದ ಈ ಕಾಲ್ಪನಿಕ ಸ್ಥಳ ಮತ್ತು ಪಾತ್ರಗಳು ಅಗತ್ಯವಾಗಿದೆಯೆಂದು ಭಾವಿಸಬಹುದು.

ರಾಷ್ಟ್ರದ ಲೌಕಿಕ ಉನ್ನತಿಯ ಹೆಸರಲ್ಲಿ ಆರಂಭವಾಗುವ ರಾಗಯಂಕಾ ನಿಂತಿರುವುದು ಅದರ ಮೂಲ ಜಾಗದಲ್ಲಿದ್ದ ರೈತಾಪಿ ಜನರ ಜಮೀನುಗಳನ್ನು ಕಿತ್ತುಕೊಂಡು, ಒಂದು ಜೀವನ ದೃಷ್ಟಿ ಮತ್ತು ಕ್ರಮಗಳನ್ನು ಅಸ್ತವ್ಯಸ್ತಗೊಳಿಸಿ. ಜಮೀನು ಕೊಟ್ಟವರ ಕುಟುಂಬಕ್ಕೊಂದು ಉದ್ಯೋಗವೆಂಬ ಆಮಿಷಕ್ಕೆ ಒಳಗಾಗಿ ಅದರಲ್ಲಿ ನೌಕರರಾಗಿರುವವರ ಸ್ಥಿತಿಯನ್ನು ಈ ಕಾದಂಬರಿ ವರ್ಣಿಸುವುದು ಹೀಗೆ: ಬಡತನ-ಸಿರಿತನಗಳ ಕಲ್ಪನೆಯೇ ಇಲ್ಲದೆ ತಮ್ಮ ಅನ್ನವನ್ನು ತಾವೇ ದುಡಿದುಕೊಂಡ ತಮ್ಮದೇ ಘನತೆಯಲ್ಲಿ ಬಾಳುತ್ತಿದ್ದ ಜನ ಇಲ್ಲಿ ದುಡಿಮೆಯ ವೇಳೆಯ ಮಧ್ಯೆ, ಕಾರ್ಖಾನೆ ರಿಯಾಯ್ತಿ ದರದಲ್ಲಿ ಒದಗಿಸುವ ಅಲ್ಪ ತಿಂಡಿ ತೀರ್ಥಗಳಿಗಾಗಿ ಆ ವಿರಾಮ ವೇಳೆಯ ಗಂಟೆ ಹೊಡೆಯಲೆಂದೇ ಕಾಯುತ್ತಾ, ಆ ಗಂಟೆ ಕೇಳಿದೊಡನೆ ರಸಾಯನಿಕದಿಂದ ಅಶುದ್ಧವಾಗಿದ್ದ ತಮ್ಮ ಕೈಗಳನ್ನು ಶುಚಿಗೊಳಿಸಿಕೊಂಡು, ಮತ್ತೆ ದುಡಿಮೆಗೆ ವಾಪಸಾಗಲು ಎಲ್ಲಿ ತಡವಾಗುವುದೋ ಸಂಬಳದ ಒಂದು ಭಾಗ ಕಡಿತವಾಗುವುದೋ ಎಂಬ ಆತಂಕದಿಂದ ತಮ್ಮ ದುಡಿಮೆಯ ಮಳಿಗೆಗಳ ಸಣ್ಣ ಬಾಗಿಲುಗಳ ಮೂಲಕ ಉಪಹಾರಗೃಹದೆಡೆಗೆ ಒಬ್ಬರ ಮೇಲೆ ಒಬ್ಬರು ಬಿದ್ದು ಪ್ರಾಣಿಗಳಂತೆ ನುಗ್ಗುವರು!

ಮನುಷ್ಯರನ್ನು ಪ್ರಾಣಿಗಳನ್ನಾಗಿ ಮಾಡುವ ಇಂತಹ ಮೈಮರೆವಿನ ಕ್ಷಣಗಳೇ ಕೈಗಾರಿಕೀಕರಣದ ಕೇಂದ್ರದಲ್ಲಿರುವ ದುರಂತ ಪ್ರಜ್ಞೆಯ ಬೀಜ ಕ್ಷಣಗಳು. ಆದರೆ ಸದರಿ ಕಾದಂಬರಿಯ ದೌರ್ಬಲ್ಯವೆಂದರೆ ಆದು ತಾನು ಕಾಣುವ ಇಂತಹ ಕ್ಷಣಗಳನ್ನು ವಿಸ್ತರಿಸಿ ಅವುಗಳ ಆಳಕ್ಕೆ ಹೋಗದೆ ಪುಟಗಟ್ಟಲೆಯ ನೀತಿ ಪಾಠಗಳು, ಹಳೆಯ ಲೆಕ್ಕಾಚಾರಗಳು, ಪುರಾಣ ಪ್ರವಚನ ಶೈಲಿಯ ಭೀಷಣ ಭಾಷಣಗಳಂತಹ ವಾಚ್ಯ ಸಂಗತಿಗಳ ಮೇಲೆ ತನ್ನ ಕಥೆಯನ್ನು, ಅದರ ತರ್ಕವನ್ನು ಕಟ್ಟುತ್ತಾ ಹೋಗುವುದು. ಇಡೀ ಕಾದಂಬರಿಯಲ್ಲಿ ಇಂತಹ ಸೂಕ್ಷ್ಮ ಗ್ರಹಿಕೆಯ ಕ್ಷಣದ ಹತ್ತಿರಕ್ಕೆ ಬರುವ ಇನ್ನೊಂದೇ ಘಟನೆ ಎಂದರೆ, ಕಾರ್ಖಾನೆ ಸ್ಥಾಪನೆಯ ಸಂದರ್ಭದ ಭಾಗವಾಗಿ ಬಾಡಿಗೆ ಹೆಣ್ಣಾಗಬೇಕಾಗಿ ಬರುವ ಶರಭ ಸೌರಭೆ ಅಂತಿಮವಾಗಿ ಎದುರಿಸುವ ತನ್ನ ಮನಸ್ಸಿನ ಒಳತೋಟಿಯ ಕ್ಷಣ ಮತ್ತು ಇದಕ್ಕೆ ಇದೇ ಕಾರ್ಖಾನೆ ಸೃಷ್ಟಿಸುವ, ಸುಲಭವಾಗಿ ಹಣ ಮಾಡುವ ಜಾಲದಲ್ಲಿ ಸಿಕ್ಕಿಕೊಂಡು ಕೊನೆಗೊಂದು ದಿನ ಇದ್ದಕ್ಕಿದಂತೆ ಎದುರಿಸಬೇಕಾಗಿ ಬರುವ ಶೂನ್ಯತೆಯಲ್ಲಿ ರಮ್ಯಪ್ರಕಾಶ ಕುಸುಮಾಂಗದನು ಪ್ರತಿಸ್ಪಂದಿಸುವ ಕ್ಷಣ. ಇಂತಹ ಸ್ಪಂದನಶೀಲ ಕ್ಷಣಗಳನ್ನು ಮುಖ್ಯ ಕಥೆಗೆ ಹೆಣೆದು ಕಾದಂಬರಿಯಲ್ಲಿನ ದುರಂತವನ್ನು ಆಳಗೊಳಿಸಲಾಗದ ಲೇಖಕರು ಕಥೆ ಕಟ್ಟಲು ನಂಬಿರುವುದು, ಕೈಗಾರಿಕೀಕರಣದ ವಿರುದ್ಧದ ಪ್ರಚಲಿತವಿರುವ, ರಾಜಕಾರಣಿಗಳು, ವ್ಯಾಪಾರಿಗಳು, ಧರ್ಮಗುರುಗಳು ಮತ್ತು ಅಧಿಕಾರಶಾಹಿ ಒಗ್ಗೂಡಿ ನಡೆಸುವ ಲಾಭೋದ್ಯಮ ಹೇಗೆ ಸಮಾಜದ ನೆಮ್ಮದಿಯನ್ನು ಕೆಡಿಸುತ್ತಿದೆ ಎಂಬುದನ್ನು ಕುರಿತ ಜನಪ್ರಿಯ ಕಥೆ-ಉಪಕಥೆಗಳನ್ನು ಹೇಳುವ ಸುಲಭ ದಾರಿಗಳನ್ನೇ.

ಹೌದು, ಕುರುಡು ಕೈಗಾರಿಕೀಕರಣದ ಮೂಲಕ ನಾವು ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿ, ಪರಿಸರ ವೈಪರೀತ್ಯಗಳು, ಹೆಚ್ಚುತ್ತಿರುವ ಅಸಮಾನತೆ ಮತ್ತು ಅದರ ಪರಿಣಾಮವಾಗಿ ಸೃಷ್ಟಿಯಾಗುತ್ತಿರುವ ಮೂರ್ತ ಮತ್ತು ಅಮೂರ್ತ ಹಿಂಸೆ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಮೇಲೆರಗುತ್ತಿರುವ ನಿಗೂಢ ರೋಗ ರುಜಿನಗಳ ಮೂಲಕ ಅನಾಹುತಕಾರಿ ಎನ್ನಿಸತೊಡಗಿದೆ. ಆದರೆ ಈ ಅನ್ನಿಸಿಕೆಯನ್ನು ಗಟ್ಟಿಗೊಳಿಸುವ ಪ್ರಯತ್ನ ಇಲ್ಲಿ ಮಾಡಲಾಗಿರುವಂತೆ ಜನಪ್ರಿಯ ಘಟನಾವಳಿಯನ್ನಾಧರಿಸಿದ ಸರಳೀಕೃತ ಕಥನಗಾರಿಕೆ ಮತ್ತು ಕಳೆದುಹೋದ ಆದರ್ಶಗಳನ್ನು ಕುರಿತ ಆವೇಶದ ಮಾತುಗಾರಿಕೆ ಮೂಲಕ ಮಾಡಿದರೆ ಅದು ವ್ಯತಿರಿಕ್ತ ಪರಿಣಾಮಕ್ಕೆ ಕಾರಣವಾದೀತು.

ಉದಾಹರಣೆಗೆ ಈ ಕಾದಂಬರಿಯಲ್ಲಿ ಅಭಿವೃದ್ಧಿಗೆ ಸಂಕೇತವಾಗಿ ಬರುವ ರೆಸಾರ್ಟ್‌ಗಳು ಹತ್ತಿರದ ಹಳ್ಳಿಗಳ ಸುಂದರ ಹುಡುಗಿಯರನ್ನು ಅಪಹರಿಸಿ ವೇಶ್ಯೆಯರನ್ನಾಗಿ ಮಾಡುತ್ತವೆ ಎಂದು ನಂಬಿಸಲು ಹೊರಡುವ ರೀತಿ ಮತ್ತು ಹಾಗೆ ಅಪಹರಿಸಲ್ಪಟ್ಟ ಓರ್ವ ಹುಡುಗಿ ಈ ಕಾದಂಬರಿಯ ಒಂದು ಪಾತ್ರವಾಗಿ ಲೇಖಕರಿಂದ ಕುಚೋನ್ನತೆ ಎಂಬ ಅಭಿದಾನ ಪಡೆಯುವುದು ಎಂತಹ ಕ್ರೂರ ವ್ಯಂಗ್ಯವೆನಿಸಿಬಿಟ್ಟು ಈ ಅಭಿವೃದ್ಧಿ ವಿರೋಧಿ ಸಂಕಥನ ತೀರಾ ಹವ್ಯಾಸಿ ಎನಿಸಿಬಿಡುತ್ತದೆ. ಇದಕ್ಕೆ ಬದಲಾಗಿ ಮಣ್ಣಿನ ವಾಸನೆಯ ಸಮೃದ್ಧ ಸಂಪನ್ಮೂಲಗಳಿರುವ ಬೀಚನಹಳ್ಳಿಯವರು ಈ ಕಥೆಗೆ ಸಮಾನಾಂತರವಾಗಿಯೇ ಬದುಕಿನ ಒಂದು ಪರ್ಯಾಯ ಮಾದರಿಯನ್ನು ಕಟ್ಟಿಕೊಟ್ಟಿದ್ದರೆ?

-ಡಿ.ಎಸ್. ನಾಗಭೂಷಣ

ಪು: **ಹರನೆಂಬುದೇ ಸತ್ಯ** (ಹಳಗನ್ನಡ ಕಾವ್ಯಗಳನ್ನು ಕುರಿತ ಹೊಸ ನೋಟಗಳು) ಲೇ: **ಕೃಷ್ಣಮೂರ್ತಿ ಹನೂರು** ಪ್ರ: ಲೋಹಿಯಾ ಪ್ರಕಾಶನ, ಬಳ್ಳಾರಿ (೦೮೩೯೨-೨೫೭೪೧೨) ಪು: ೧೬೦ ಬೆಲೆ: ರೂ.೧೦೦/-

ಎಲ್ಲರನ್ನೊಳಗೊಳ್ಳುವ ಕನ್ನಡ ಕಾವ್ಯ ಪರಂಪರೆ



ಈ ಹೊತ್ತಿಗೆಯು ಕನ್ನಡ ಕಾವ್ಯ ಪರಂಪರೆಯನ್ನು ಕುರಿತ ಹನ್ನೊಂದು ಬರಹಗಳನ್ನು ಒಳಗೊಂಡಿದೆ. ಇಲ್ಲಿಯ ಒಂದೊಂದು ಬರಹವು ಕೂಡ ಕನ್ನಡ ಕಾವ್ಯ ಪರಂಪರೆಯ ವೈಶಿಷ್ಟ್ಯವನ್ನು ಪ್ರಕಟಿಸುವ ಇರಾದೆಯನ್ನು ಹೊಂದಿವೆ. ಕಥನ ಬಗೆಗಳು ಮತ್ತು ಮಾದರಿಗಳು ಮೈದಾಳಿದ ವಿನ್ಯಾಸಗಳನ್ನು ಈ ಬರಹಗಳು ಪ್ರಕಟಿಸುತ್ತವೆ. ಚರಿತ್ರೆ ಮತ್ತು ಪುರಾಣಗಳ ನಡುವಣ ನಂಟಸ್ತಿಕೆಯನ್ನು ಅರಿಯುವುದಕ್ಕೂ ಬೇಕಾಗುವ ಕುರುಹುಗಳನ್ನು ಯಥೇಚ್ಛವಾಗಿ ಪ್ರತೀ ಲೇಖನದಲ್ಲಿ ಕಾಣುತ್ತೇವೆ. ಕನ್ನಡ ಸಾಹಿತ್ಯ ಸನ್ನಿವೇಶದಲ್ಲಿ ಬಳಸುವ 'ನಿರೂಪಣೆ' ಎನ್ನುವ ಪರಿಕಲ್ಪನೆಗೆ ಸಾಟಿಯಾಗಿ ಇಂಗ್ಲೀಷ್‌ನ 'ಡಿಸ್ಕೋರ್ಸ್' ಎಂಬ ಪರಿಕಲ್ಪನೆಯನ್ನು ಬಳಸುವುದಾದರೆ, (ಹಳಗನ್ನಡ) ಕನ್ನಡ ಕಾವ್ಯಗಳ ಮೂಲಕ ಪಡೆಯುವ ತಿಳಿವು ಬದುಕಿನ ಡಿಸ್ಕೋರ್ಸ್ ಆಗಿಯೇ ನಮಗೆ ಲಭ್ಯವಾಗುತ್ತದೆ. ಅಂದರೆ ಕವಿಗಳು 'ಭಕ್ತಿ' ಮತ್ತು 'ಭವ' ಎಂಬೀ ನಿಲುವುಗಳನ್ನು ತಿರುಗು ಮುರುಗು ಮಾಡಿದ ಬದುಕಿನ ವೈರುಧ್ಯಗಳನ್ನು ನಿಚ್ಚಳಗೊಳಿಸುವ ನೆಲೆಗಳಾಗಿ ಕಾಣುತ್ತವೆ. ಬದುಕಿನ ಸಾರ್ಥಕತೆಯನ್ನು ಕಾಣುವುದೇ ವೈಭವದ ನಶ್ವರತೆಯ ಮೂಲಕ ಅನ್ನುವುದು ಜೈನ ಕವಿಗಳ ಧ್ಯೇಯ ವಾಕ್ಯವಾಗಿದೆ. ಇದು ಕೇವಲ ಆದರ್ಶದ ಬದುಕಿನ ಕಲ್ಪನೆ ಮಾತ್ರವಾಗದೇ, ಅದುವೇ ನಮ್ಮ ದೈನಂದಿನ ಸಹಜ ಬದುಕಿನ ಲಯವಾಗಬೇಕು ಎಂಬ ಅಭೀಪ್ಸೆಯನ್ನು ಜೈನ ಕವಿಗಳಲ್ಲಿ ನೋಡಬಹುದಾಗಿದೆ. ಹೀಗೆ ಶುರುವಾದ ಕನ್ನಡದ ಕಾವ್ಯಕಥನ ಮಾದರಿಯಲ್ಲಿ ಏರ್ಪಟ್ಟಿರುವ ಪಲ್ಲಟಗಳನ್ನು ಎರಡು ಪ್ರಮುಖ ನೆಲೆಯಲ್ಲಿ ಗುರುತಿಸಬಹುದು. ಒಂದು ಭಾಷಿಕ ಪಲ್ಲಟ ಮತ್ತೊಂದು ಸಾಹಿತ್ಯಕ ಪಲ್ಲಟ. ಸಾಹಿತ್ಯದ ನಿರೂಪಣೆಗಳ ಸ್ವರೂಪ, ಗುರಿ ಮತ್ತು ಭಾಷೆಯನ್ನು ಬದಲಾಯಿಸುವ ಮೂಲಕ ಬದುಕಿನ ದೃಷ್ಟಿಕೋನಗಳಲ್ಲಿ ಏರ್ಪಟ್ಟ ಪಲ್ಲಟಗಳನ್ನು ನಮ್ಮೀ ಕವಿಗಳು ತೋರಿಸಿಕೊಟ್ಟಿದ್ದಾರೆ.

'ಓದು ಕಾವ್ಯದಿಂದ ಹಾಡು ಕಾವ್ಯ'ಗಳ ತಾತ್ವಿಕ ವಿನ್ಯಾಸಕ್ಕೂ ಈ ಪಲ್ಲಟಗಳೇ ಮೂಲಚೂಲವಾಗಿವೆ.

ಹಳಗನ್ನಡ ಸಾಹಿತ್ಯದ ಈ ಒಟ್ಟು ವಿದ್ಯಮಾನವನ್ನು, ಹನೂರು ಅವರು ಮೂರು ಮುಖ್ಯ ಚಳುವಳಿಯ ಮಾರ್ಗಗಳನ್ನಾಗಿ ಗುರುತಿಸುತ್ತಾರೆ. (೧). ಜೈನ ಕವಿಗಳು ಅರಮನೆಯ ಬದುಕಿನ ವಿರುದ್ಧ ನಡೆಸಿದ ಚಳುವಳಿ (೨). ವಚನಕಾರರ ಸಾಮಾಜಿಕ ಚಳುವಳಿ (೩). ದಾಸವರೇಣ್ಯರ ಸೌಮ್ಯಪಂಥದ ಸಾಮಾಜಿಕ ಅರಿವಿನ ಚಳುವಳಿ ಎಂಬುದಾಗಿ ಇವುಗಳನ್ನು ನೋಡಬಹುದು. ಬದುಕಿನ ದುರಂತ, ವಿಷಾದ, ಸಂಘರ್ಷದಂತಹ ವಿವರಗಳು ಕನ್ನಡ ಕಾವ್ಯಗಳಲ್ಲಿ ಯಥೇಚ್ಛವಾಗಿ ಒಡಮೂಡಿವೆ. ಹಿಂಸೆಯನ್ನು ವಿವರಿಸುವ ಮೂಲಕವೇ ಹಿಂಸೆಯ ಮೂಲವನ್ನು ಅನಾವರಣಗೊಳಿಸುವ ಮತ್ತು ಅಹಿಂಸೆಯ ಮನೋಧರ್ಮವನ್ನು ನೆಲೆಗೊಳಿಸುವ ಬಗೆಗಳು ಇಲ್ಲಿ ಎದ್ದು ಕಾಣುತ್ತವೆ. ಮಾನವಸಾರವನ್ನು ಸಾರುವ ಈ ಕಥನಗಳು ಒಂದೇ ಆದರೂ ಅವುಗಳೊಳಗೆಯೇ ಹಲವು ವೈರುಧ್ಯಗಳು ಹೇಗೆ ತಲೆಯೆತ್ತಿವೆ ಎಂಬುದನ್ನೂ ಇಲ್ಲಿ ಗಮನಿಸಬಹುದು. ಕನ್ನಡ ಕಾವ್ಯ ಪರಂಪರೆಯಲ್ಲಿ ಏರ್ಪಟ್ಟಿರುವ ಕಾವ್ಯದ ಆಶಯಗಳನ್ನೂ ಇಲ್ಲಿ ಗುರುತಿಸಬಹುದು. ಪಂಪ, ರನ್ನರಕ್ಕಿಂತ ವಚನ ಚಳವಳಿ ಆತ್ಮೋನ್ನತಿಯೇ ದೊಡ್ಡದೆಂಬ ಮಾರ್ಗದಲ್ಲಿ ಶರಣರು ಕಾಯಕ ಮತ್ತು ಭಕ್ತಿ ತತ್ವವನ್ನು ಪ್ರಚಾರಕ್ಕೆ ತಂದರು.

ದಿಟ, ಪಂಪ ಹೇಳುವ ಕಾವ್ಯ ಧರ್ಮ ಮತ್ತು ಕುಮಾರವ್ಯಾಸ ಹೇಳುವ ಮನುಷ್ಯ ಧರ್ಮ ಪರಸ್ಪರ ಪೂರಕವಾಗಿವೆ. ಭಕ್ತಿ ಆರಾಧನೆಗಳ ನಡುವಣ ಭಿನ್ನತೆಗಳನ್ನು ಕಾವ್ಯವೊಂದು ಪ್ರಕಟಿಸುವ ಜೀವಕಾರುಣ್ಯ ಎಂತಹದು? ಅದು ನಮ್ಮ ಬದುಕಿಗೆ ಹೇಗೆ ಒತ್ತಾಸೆಯಾಗಬಲ್ಲದು ಅನ್ನುವುದನ್ನು ಇಲ್ಲಿ ಕಾಣುತ್ತೇವೆ. "ಕನ್ನಡ ಪರಂಪರೆಯಲ್ಲಿ ಸಂದುಹೋದ ಯಾವುದೇ ಕವಿ ಎಷ್ಟೇ ಮಾನವೀಯ ಚಿಂತನೆಗಳನ್ನು ಜೀವಪರ ಧೋರಣೆಗಳನ್ನು ಹೊಂದಿದ್ದರೂ, ಆಯಾ ಕವಿ ಅನುಸರಿಸಿದ ಧರ್ಮ, ದೈವನಿಷ್ಠೆ ಇವುಗಳನ್ನು ಮಾತ್ರ ಬಿಟ್ಟುಕೊಟ್ಟಂತೆ ತೋರುವುದಿಲ್ಲ" (ಪು:೧೦೨). 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಹೇಳಿದ ಪಂಪ ಜೈನಧರ್ಮ ಬ್ರಾಹ್ಮಣ ಧರ್ಮಕ್ಕಿಂತ ಶ್ರೇಷ್ಠ ಎನ್ನುತ್ತಾನೆ. ವಚನಕಾರರು ಮತ್ತು ವೀರಶೈವ ಕವಿಗಳು ಲೋಕದ ಜನವೆಲ್ಲ ಹರನನ್ನೇ ನಂಬುವಂತೆ ಹೇಳುತ್ತಾರೆ. ಜಾತಿ, ಕುಲ ಪದ್ಧತಿಯನ್ನು ವಿರೋಧಿಸುವ ಇವರೆಲ್ಲರೂ ತಮ್ಮ ಧರ್ಮವನ್ನೇ ಎತ್ತಿಹಿಡಿಯುವ ಇರಾದೆಯನ್ನು ಹೊಂದಿದ್ದಾರೆ.

ಕನ್ನಡ ಕಾವ್ಯ ಪರಂಪರೆಯ ಸಾಮಾನ್ಯ, ಅಸಾಮಾನ್ಯ, ಪಂಡಿತ, ಪಾಮರ ಮತ್ತು ಪ್ರಖರ ವೈಚಾರಿಕ ಧೋರಣೆಯ ನಡೆಯೇ ಅತ್ಯಂತ ವೈವಿಧ್ಯಮಯವಾಗಿವೆ. ವೈಚಾರಿಕತೆ, ಭಾಷೆ ಹಾಗೂ ಕಾವ್ಯ ಧೋರಣೆಗಳೊಳಗಿನ ಬಹುಳತೆ ಇಲ್ಲಿ ಎದ್ದು ಕಾಣುತ್ತದೆ. ಆದರೆ ಜೈನ, ಶೈವ, ವೈಷ್ಣವ ಪಂಥಗಳಿಗೆಯೇ ಪೂರಕವಾಗಿ ಮೈದಾಳಿದ ಪಠ್ಯಗಳಲ್ಲಿ ಜೀವಪರವಾದದ್ದು ಮತ್ತು ಜೀವವಿರೋಧಿಯಾದದ್ದು ಯಾವುದು? ಎನ್ನುವ ಪ್ರಶ್ನೆ ಮಾತ್ರ ಮುಂದುವರೆಯುತ್ತದೆ. ಜೈನ ಮತ್ತು ವೈಷ್ಣವ ಕವಿಗಳು ರಾಮಾಯಣ, ಮಹಾಭಾರತ ಕಾವ್ಯಗಳನ್ನು ಮಾತ್ರ ಅನುಸರಿಸಿದರೆ, ಶೈವ ಕವಿಗಳು ಅತ್ಯಂತ ಸಾಮಾನ್ಯರನ್ನೇ ಕುರಿತು ತಮ್ಮ ಕಾವ್ಯವನ್ನು ರಚಿಸಿದರು. "ಬದುಕಿನ ಸಂಘರ್ಷಗಳನ್ನು ಮೂಲಭೂತ ತಿಳಿವಳಿಕೆಯನ್ನು ಒಂದು ಕಥೆಯ ಮೂಲಕ ಹೇಳುವ ಪ್ರಾಚೀನ ಕಥನ ಮೂಲಗಳನ್ನು ಬಿಟ್ಟು ಶರಣರು ನೇರವಾಗಿ ವಚನಗಳ ಮೂಲಕ ಬದುಕಿನ ತತ್ವಗಳನ್ನು ಉಪನಿಷತ್ತುಗಳಂತೆ ಬಿತ್ತರಿಸಿದರು" (ಪು:೧೧೧). ಹಾಗೂ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಪ್ರಾತಿನಿಧ್ಯ ಪಡೆದ ಸುಳಿವುಗಳು ಈ ವಚನ ಸಾಹಿತ್ಯದಿಂದ ಹರಿಹರ, ರಾಘವಾಂಕರಲ್ಲಿ ಮುಂದುವರೆಯುತ್ತವೆ ಎಂಬುದು ಗಮನಾರ್ಹ.


ಜಾನಪದ ಸಾಹಿತ್ಯದ ಜೊತೆಗೆ ಅನುಸಂಧಾನಗೊಳಿಸುವ ಮತ್ತು ಮುಖಾಮುಖಿಯಾಗಿಸುವ ನಿಲುವುಗಳು ಈ ಬರಹಗಳಲ್ಲಿ ಪ್ರಕಟವಾಗಿವೆ. ಸಾಹಿತ್ಯಕ ನಿಲುವುಗಳನ್ನು ಮಾತ್ರ ಸಮಂಜಸಗೊಳಿಸುವುದಷ್ಟೆಯಲ್ಲ ಬದಲಾಗಿ ಬದುಕಿನ ಅನುಭವಗಳ ಇಡೀ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿನ್ಯಾಸಗಳು ಹೇಗೆ ನಮ್ಮ ಕನ್ನಡ ಕಾವ್ಯ ಪರಂಪರೆಯಲ್ಲಿ ನೆಲೆಗೊಂಡಿವೆ ಎನ್ನುವುದನ್ನು ಅರಿಯುವುದಕ್ಕೆ ಸಾಧ್ಯವಾಗುತ್ತದೆ.

-ಮೇಟಿ ಮಲ್ಲಿಕಾರ್ಜುನ

ಪು: **ಆನಂದಾಮೈಡ್** ಲೇ: **ನಾಗೇಶ ಹೆಗಡೆ** ಪ್ರ: **ಭೂಮಿ ಬುಕ್ಸ್**, ಬೆಂಗಳೂರು (೯೪೪೯೧೭೭೬೨೮) ಪು : ೧೬೪ ಬೆಲೆ :**ರೂ.೧೬೦/-**

ವಿಜ್ಞಾನ-ತಂತ್ರಜ್ಞಾನಗಳ ಭಯ-ಬೆರಗುಗಳ ಲೋಕ

ವಿಜ್ಞಾನ-ತಂತ್ರಜ್ಞಾನ, ಪರಿಸರಕ್ಕೆ ಸಂಬಂಧಿಸಿದ ಜಾಗತಿಕ ವಿದ್ಯಮಾನಗಳನ್ನು ಕನ್ನಡದ ಓದುಗರಿಗೆ ತಲುಪಿಸುವ ಲೇಖಕರಲ್ಲಿ ಪ್ರಮುಖರಾದವರು ನಾಗೇಶ ಹೆಗಡೆಯವರು. 'ಆನಂದಾಮೈಡ್' ೨೦೧೯ ಮತ್ತು ೨೦೨೦ರಲ್ಲಿ ಪ್ರಜಾವಾಣಿಯಲ್ಲಿ ಬರೆದ ಒಟ್ಟು ೩೩ ಲೇಖನಗಳ ಸಂಗ್ರಹ. 'ಆನಂದಾಮೈಡ್' ಎಂಬ ಶೀರ್ಷಿಕೆಯ ಲೇಖನ ಮಾದಕವಸ್ತುಗಳ ಜಾಲದಲ್ಲಿ ಸಿನಿಮಾನಟಿಯರು ಸಿಲುಕಿಕೊಂಡಿರುವ ಸುದ್ದಿಗಳು



ಬಂದ ಸಂದರ್ಭದಲ್ಲಿ ಬರೆದಂತಹದು. ದೇಹಕ್ಕೆ ಅಗತ್ಯವಿದ್ದಾಗ ಸಂತಸವನ್ನು ಸ್ಫುರಿಸಬಲ್ಲ ರಸ ಮಿದುಳಿನಲ್ಲೇ ಉತ್ಪತ್ತಿಯಾಗುತ್ತದೆ. ಇದಕ್ಕೆ ರಾಫೆಲ್ ಮೆಕ್ಕೊಲಮ್ ಎಂಬ ವಿಜ್ಞಾನಿ 'ಆನಂದಾಮೈಡ್' ಎಂದು ಹೆಸರಿಸಿದ ಎನ್ನುತ್ತಾರೆ.

ಹೆಚ್ಚಿನ ಲೇಖನಗಳೆಲ್ಲಾ ಕೋವಿಡ್‌ಗೆ ಸಂಬಂಧಿಸಿದವು ಮತ್ತು ವೈಜ್ಞಾನಿಕ ಆವಿಷ್ಕಾರಗಳ ಅಡ್ಡಪರಿಣಾಮಗಳ ಬಗ್ಗೆ ಎಚ್ಚರ ಮೂಡಿಸುವ ಲೇಖನಗಳಾಗಿವೆ. ಹಾಗೆಯೇ ಪರಿಸರ, ಜಲಸಂಪತ್ತು, ಗ್ರಾಮೀಣ ಬದುಕಿನ ಕುರಿತ ಭರವಸೆ ಹುಟ್ಟಿಸುವ ಪ್ರಯತ್ನಗಳು ನಡೆದಿರುವ ಬಗ್ಗೆ ಲೇಖನಗಳನ್ನೂ ನೋಡಬಹುದು. ಮಹಾರಾಷ್ಟ್ರದ ಪೋಪಟ್ ರಾವ್ ಪವಾರ್, ಅಣ್ಣಾ ಹಜಾರೆ ಮತ್ತು ರಾಜೇಂದ್ರಸಿಂಗ್ ಮುಂತಾದವರ ಪ್ರಯತ್ನಗಳ ಬಗ್ಗೆ ಮತ್ತು ಮಳೆಕೊಯ್ಲಿನ ಮಹತ್ವವನ್ನು "ವಾಟರ್ ಕಪ್" ಸ್ಪರ್ಧೆಯನ್ನು ಹಳ್ಳಿಹಳ್ಳಿಗಳಲ್ಲಿ ನಡೆಸಿ ಅಂತರ್ಜಲ ಹೆಚ್ಚಿಸಲು ಕಾರಣರಾದ ಹಿಂದೀ ಚಲನಚಿತ್ರನಟ ಅಮೀರ್ ಖಾನ್ ಅವರ ಬಗ್ಗೆಯೂ ಬರೆದಿದ್ದಾರೆ.

ಅಮೇರಿಕಾದ ಸಂವಿಧಾನದಂತೆ, ಅಲ್ಲಿ ಸರ್ಕಾರ ಮತ್ತು ಚರ್ಚ್ ಪ್ರತ್ಯೇಕವಾಗಿಯೇ ಇವೆ. ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಬೈಬಲ್ ಓದಬಾರದೆಂದು ಮತ್ತು ಚಂದ್ರನ ಮೇಲೆ ಇಳಿಯಲು ಹೊರಟ ಗಗನಯಾತ್ರಿಗಳು ಅಲ್ಲಿ ಧಾರ್ಮಿಕ ಕ್ರಿಯೆಗಳನ್ನು ನಡೆಸಬಾರದೆಂದು ೧೯೬೪-೬೯ ರಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡಿ ಗೆದ್ದ ಮೆಡಲಿನ್ ಓ' ಹೇರ್ ಎಂಬ ಸ್ತ್ರೀವಾದಿ ಮಹಿಳೆ, ಆಕೆಯ ಮಗ ಮತ್ತು ಮೊಮ್ಮಗಳನ್ನು ೧೯೯೫ರಲ್ಲಿ ಬರ್ಬರವಾಗಿ ಹತ್ಯೆ ಮಾಡಿದ ದಾರುಣ ಸಂಗತಿ 'ಕಕ್ಷೆಯಲ್ಲಿ ದೇವರಥ ಮತ್ತು ಭಕ್ತಿರಸ' ಎಂಬ ಲೇಖನದಲ್ಲಿದೆ. ವಿಜ್ಞಾನದಲ್ಲಿ ಏನು ಸಾಧಿಸಿದರೇನು? ಧರ್ಮದ ಹೆಸರಿನಲ್ಲಿ ಮನುಷ್ಯತ್ವವನ್ನು ಕಳೆದುಕೊಳ್ಳದಂತೆ ಮಾಡಲು ಏನೂ ಆವಿಷ್ಕಾರ ಮಾಡಿಲ್ಲವೇ ಎಂದು ಕೇಳುವಂತಾಗುತ್ತದೆ.

ಮಿಡತೆ ದಾಳಿಯ ಬಗ್ಗೆ ಬರೆಯುತ್ತಾ ಆ ಮಿಡತೆಗಳನ್ನು ರಾತ್ರಿ ಹೊತ್ತು ಒಟ್ಟು ಮಾಡಿ ಹುಗಿದು ಸಾವಯವ ಗೊಬ್ಬರ ಮಾಡಬಹುದಾದ ಸಾಧ್ಯತೆಗಳ ಬಗ್ಗೆ ನಮ್ಮ ಕೃಷಿವಿಜ್ಞಾನಿಗಳು ಯಾಕೆ ಸಲಹೆ ನೀಡುವುದಿಲ್ಲ? ಅವರು ಮತ್ತೆ ಕೀಟನಾಶಕಗಳನ್ನು ಸಿಂಪಡಿಸಿ ಭೂಮಿಗೆ ವಿಷ ಉಣ್ಣಿಸುವಂತಹ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುತ್ತಾರಲ್ಲಾ? ಎಂಬ ಪ್ರಶ್ನೆಗಳನ್ನು ಎತ್ತುತ್ತಾರೆ.

'ಹಿಂದಿರುಗುವುದೇ ಮುಂದಿನ ದಾರಿ' ಎಂಬ ಲೇಖನದಲ್ಲಿ ಗಾಂಧೀಜಿಯವರ ಸರಳ ಜೀವನದ ಮಾದರಿಯೇ ಪರಿಹಾರ ಎಂಬ ಬಗ್ಗೆ ಚರ್ಚಿಸಿದ್ದಾರೆ. ಕಾರ್ಬನ್ ಹೆಚ್ಚಿಸುವ ಫಾಸಿಲ್ ಇಂಧನಗಳ ಬಳಕೆಗಿಂತ ಸೌರಶಕ್ತಿ, ಗಾಳಿಶಕ್ತಿ, ಗೊಬ್ಬರ ಅನಿಲದಂತಹ ಸುಸ್ಥಿರ ಅಭಿವೃದ್ಧಿಗೆ ದಾರಿ ಮಾಡುವ ಬದಲೀ ಇಂಧನಗಳನ್ನು ಬಳಸುವ ತಂತ್ರಜ್ಞಾನದ ಬಗ್ಗೆ ಗಮನ ಸೆಳೆಯುತ್ತಾರೆ. ಪರಿಸರ ಹೋರಾಟಗಾರ್ತಿ ಗ್ರೇತಾ ಥನ್‌ಬರ್ಗ್‌ಳ ಹೋರಾಟ ಬೆಂಬಲಿಸಿ ಕೆಲವರು ಜೀರೋ ಕಾರ್ಬನ್ ಬದುಕಿಗೆ ಹೊಂದಿಕೊಳ್ಳುತ್ತಿದ್ದಾರೆ. ನಮ್ಮ ನಾಯಕರು ಗಾಂಧೀಜಿಯವರಂತೆ ಸರಳಜೀವನವನ್ನು ನಡೆಸಿ ಎಳೆಯರಿಗೆ ಮಾದರಿಯಾದರೆ ಇದು ಸಾಧ್ಯ ಎಂಬ ಬಗ್ಗೆ ಚರ್ಚಿಸಿದ್ದಾರೆ. ನಮ್ಮ ಪ್ರಧಾನಿಯವರು ಸೌರಶಕ್ತಿಯನ್ನು ಹಾಡಿಹೊಗಳಿ ಎಲ್ಲಾ ಆಸಕ್ತ ರಾಷ್ಟ್ರಗಳನ್ನೂ ಸೇರಿಸಿ 'ಅಂತಾರಾಷ್ಟ್ರೀಯ ಸೋಲಾರ್ ಅಲೆಯನ್ಸ್' ಎಂಬ ಸಂಘಟನೆಯನ್ನು ಹುಟ್ಟುಹಾಕಿದವರು. ಆದರೆ ಕೊರೋನಾ ಅವಧಿಯಲ್ಲಿ ಬಹುಕೋಟಿ ಕಂಪನಿಗೆ ಕಲ್ಲಿದ್ದಲು ಗಣಿಗಳನ್ನು ಆರಂಭಿಸಲು ಅನುಮತಿ ನೀಡಿದ್ದಾರೆ. "ಶಕ್ತಿತಜ್ಞರಿಗೆ ಶಾಕ್ ಕೊಟ್ಟಿದ್ದಾರೆ, ಶಾಖ ಹೆಚ್ಚಾಗಿ ಬಳಲುತ್ತಿರುವ ಭೂಮಿಗೆ ಮತ್ತಷ್ಟು ಶಾಖ ಕೊಡುವಂತೆ ಮಾಡಿದ್ದಾರೆ" ಎಂದು ಮಾರ್ಮಿಕವಾಗಿ ಹೇಳುತ್ತಾರೆ.


ಜಗತ್ತಿನಾದ್ಯಂತ ವಿಜ್ಞಾನ-ತಂತ್ರಜ್ಞಾನವನ್ನು ಲಾಭಕೋರ ಕಂಪನಿಗಳು, ರಾಜಕೀಯ ಶಕ್ತಿಗಳು ಒಂದಾಗಿ ನೈತಿಕ ಪ್ರಶ್ನೆಗಳನ್ನು ಕಡೆಗಣಿಸಿ ಬಳಸಿರುವುದನ್ನು ಈ ಲೇಖನಗಳಲ್ಲಿ ನೋಡಬಹುದು. ಈ ಲೇಖನಗಳು ಪ್ರತ್ಯೇಕ ಲೇಖನಗಳೆಂದು ಅನಿಸದೇ ಒಂದೇ ದಾರದಲ್ಲಿ ಪೋಣಿಸಿದಂತಿದ್ದು ವಿಜ್ಞಾನ, ತಂತ್ರಜ್ಞಾನ, ಪರಿಸರದ ಮೇಲಿನ ವಿದ್ಯಮಾನಗಳ ಕುರಿತು ಬೆಳಕು ಚೆಲ್ಲಿ ನಮ್ಮನ್ನು ಆಲೋಚನೆಗೆ ಹಚ್ಚುತ್ತವೆ.

ವೈಜ್ಞಾನಿಕ ಕ್ಷೇತ್ರದಲ್ಲಿ ಮಾಡಿರುವ ಅದ್ಭುತವಾದ ಆವಿಷ್ಕಾರಗಳಿಂದ ಜೀವನಮಟ್ಟ ಸುಧಾರಣೆಯಾಗಿ ಸುಖ ಅನುಭವಿಸುತ್ತೇವೆಂದು ಅಂದುಕೊಂಡಿದ್ದೇವೆ. ಆದರೆ ಆ ರೀತಿಯ ಸುಖಕ್ಕೆ ನಾವು ತೆರುತ್ತಿರುವ ಬೆಲೆ ಹವಾಮಾನ ವೈಪರೀತ್ಯ, ಪರಿಸರ ಮಾಲಿನ್ಯದ ರೂಪದಲ್ಲಿ ನಮ್ಮನ್ನು ಸಂಕಷ್ಟಕ್ಕೀಡುಮಾಡಿದೆಯೆಂಬ ಸಂಗತಿಗಳನ್ನು ಮತ್ತು ಜೈವಿಕ ತಂತ್ರಜ್ಞಾನ ಮತ್ತು ರೋಬಾಟಿಕ್ ತಂತ್ರಜ್ಞಾನಗಳಲ್ಲಿ ಮಾಡಿದ ಪ್ರಯೋಗಗಳ ಬಗ್ಗೆ ಬೆಚ್ಚಿ ಬೀಳಿಸುವಂತಹ ಸಂಗತಿಗಳನ್ನು ಲೇಖಕರು ಇಲ್ಲಿ ಚುರುಕಾದ ವಿಡಂಬನೆ ಮತ್ತು ದಟ್ಟ ವಿಷಾದಗಳ ವಿಶಿಷ್ಟ ಮಿಶ್ರಣದ ಪರಿಣಾಮಕಾರಿ ಶೈಲಿಯಲ್ಲಿ ನಿರೂಪಿಸಿದ್ದಾರೆ.

-ಕೆ. ಪದ್ಮಾಕ್ಷಿ

ಪು : ಅಮರ ಸುಳ್ಯದ ರೈತ ಹೋರಾಟ (೧೮೩೪- ೧೮೩೭) ಲೇ: ಡಾ.ಪುರುಷೋತ್ತಮ ಬಿಳಿಮಲೆ ಪ್ರ : ಅಹರ್ನಿಶಿ ಪ್ರಕಾಶನ ಶಿವಮೊಗ್ಗ (೯೪೪೯೧೭೪೬೬೨) ಪು:೧೧೬ ಬೆಲೆ: ರೂ. ೧೧೦/-

ಐತಿಹಾಸಿಕ ರೈತ ಹೋರಾಟವೊಂದರ ಬಹುಶಿಸ್ತೀಯ ಅಧ್ಯಯನ



ಇಂದಿನ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಹಾಗೂ ಕೊಡಗು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ೧೮೩೪ರಲ್ಲಿ ಆರಂಭಗೊಂಡು ೧೮೩೭ರವರೆಗೆ ನಡೆದ ರೈತ ಹೋರಾಟವನ್ನು ಆಧರಿಸಿ ರಚಿತವಾದ ಅಧ್ಯಯನ ಗ್ರಂಥವಿದು. 'ಇಂದಿನ ರೈತ ಹೋರಾಟಗಳಿಗೆ ಈ ಪ್ರಾಂತೀಯ ಹೋರಾಟವು ಪ್ರೇರಣೆ ನೀಡುವಷ್ಟು ಸಶಕ್ತವಾಗಿದೆ' ಎಂಬ ಬಲವಾದ ನಂಬಿಕೆಯೆ ಈ ಕೃತಿಯ ರಚನೆಗೆ ಕಾರಣವಾಗಿದೆ(ಪು.೨೦). ಒಟ್ಟು ಹತ್ತು ಅಧ್ಯಾಯಗಳ ಮೂಲಕ ಈ ಹೋರಾಟದ ಚಾರಿತ್ರಿಕ ಸಂದರ್ಭ, ಅಲ್ಲಿನ ಸಮುದಾಯಗಳು, ಅವರು ಎದುರಿಸುತಿದ್ದ ಸಮಸ್ಯೆಗಳನ್ನು ಭಿನ್ನ ಆಯಾಮಗಳಲ್ಲಿ ನಿರೂಪಿಸಿದ ಕಥನವಿದು.

೧೮೩೪ಕ್ಕಿಂತ ಮೊದಲು ಬ್ರಿಟಿಷರ ವಿರುದ್ಧ ದೇಶದ ವಿವಿಧ ಭಾಗಗಳಲ್ಲಿ ಹಲವು ಹೋರಾಟಗಳು ನಡೆದಿವೆ. ಕರ್ನಾಟಕದಲ್ಲೂ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣರು ಕೈಗೊಂಡ ಹೋರಾಟ ಹಾಗು ೧೮೩೧ರಲ್ಲಿ ನಗರ ಬಂಡಾಯ ಹೀಗೆ ವಸಾಹತುಶಾಹಿಯ ವಿರುದ್ಧ ಹಲವು ಪ್ರತಿರೋಧಗಳು ಘಟಿಸಿವೆ. ಇದನ್ನು 'ಪ್ರಾಂತೀಯ ಹೋರಾಟಗಳು' ಎಂಬ ಅಧ್ಯಾಯದಲ್ಲಿ ಲೇಖಕರು ಚರ್ಚಿಸಿದ್ದಾರೆ. ಈ ಎಲ್ಲ ಹೋರಾಟಗಳಿಗೆ ಕಾರಣವಾದ ಸಂಗತಿಗಳು ಹೆಚ್ಚುಕಮ್ಮಿ ಒಂದೇ ಆಗಿವೆ. ಹಾಗಾದರೆ ಈ ಹೋರಾಟವನ್ನು ಕುರಿತ ಅಧ್ಯಯನ ಏಕೆ ಅಗತ್ಯ ಎಂಬ ಪ್ರಶ್ನೆ ಮೂಡುವುದು ಸಹಜ. ಬಿಡಿಬಿಡಿಯಾಗಿ ನಡೆದ ಈ ಹೋರಾಟಗಳು ರಾಷ್ಟ್ರವ್ಯಾಪಿಯಾದ ದೊಡ್ಡ ಚಳವಳಿಗಳ ಹುಟ್ಟಿಗೆ ಅಗತ್ಯವಾದ ಮನೋಭೂಮಿಕೆಯನ್ನು ಹೇಗೆ ರೂಪಿಸಿದ್ದವು ಎಂಬುದನ್ನು ಇಂತಹ ಅಧ್ಯಯನಗಳ ಮೂಲಕ ಅರಿಯಲು ಸಾಧ್ಯ.

ಚಾರಿತ್ರಿಕ ಘಟನೆಯೊಂದನ್ನು ಆಧರಿಸಿ ರಚಿತವಾದ ಈ ಕೃತಿ ಐತಿಹಾಸಿಕ ಘಟನೆಗಳ ಶುಷ್ಕವಾದ ಮಾಹಿತಿಗಳ ಚರ್ಚೆಯಲ್ಲಿ ನಿಲ್ಲುವುದಿಲ್ಲ ಎಂಬುದು ಗಮನಾರ್ಹ. ಅಂದಿನ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳ ಸಂಕೀರ್ಣ ವ್ಯವಸ್ಥೆಯ ಚರ್ಚೆಯನ್ನು ಒಳಗೊಳ್ಳುವ ಮೂಲಕ ಈ ಬರಹವು ಸಾಂಸ್ಕೃತಿಕ ಆಯಾಮವನ್ನು ಹೊಂದಿದೆ. ಈ ಕೃತಿಯ ರಚನೆಗೆ ಇತಿಹಾಸ ಕೃತಿಗಳು, ಬ್ರಿಟಿಷ್ ಅಧಿಕಾರಿಗಳ ವರದಿ, ಕೈಫಿಯತ್ತು, ಪಾಡ್ದನಗಳು, ಜನಾಂಗೀಯ ಅಧ್ಯಯನ ಹೀಗೆ ಹಲವು ಜ್ಞಾನಶಿಸ್ತುಗಳ ಅರಿವನ್ನು ಬಳಸಿಕೊಳ್ಳಲಾಗಿದೆ. ಆದುದರಿಂದ ಈ ಅಧ್ಯಯನಕ್ಕೆ ಬಹುಶಿಸ್ತೀಯ ಆಯಾಮ ದೊರೆತಿದೆ. ಈ ಬರಹದ ಮುಖ್ಯ ಗುಣವೆಂದರೆ ಎಲ್ಲಿಯು ತಾನು ಹೇಳುತ್ತಿರುವುದು ಅಂತಿಮ ಎಂದು ಸಾಧಿಸುತ್ತಿಲ್ಲ ಎಂಬುದು. ಇದು ತನಗೆ ಲಭಿಸಿದ ಆಕರಗಳ ಪರಿಶೀಲನೆ, ಕ್ಷೇತ್ರಕಾರ್ಯದ ಅನುಭವದಿಂದ ಮೂಡಿದ ಅಭಿಪ್ರಾಯವಿದು ಎಂಬ ಸೂಕ್ಷ್ಮ ಎಚ್ಚರದೊಂದಿಗೆ ನಿರೂಪಿಸುತ್ತಾರೆ. ತನಗೆ ಕಂಡ ಅಂಶಗಳ ಕಡೆ ಬೆಳಕು ಚೆಲ್ಲುತ್ತಾರೆ. ಈ ಕುರಿತು ಮತ್ತಷ್ಟು ಅಧ್ಯಯನದ ಅಗತ್ಯತೆಯನ್ನು ಸೂಚಿಸುತ್ತಾರೆ.


ಅಮರ ಸುಳ್ಯದ ರೈತ ಹೋರಾಟಕ್ಕೆ ಕೊಡಗಿನ ಅರಸೊತ್ತಿಗೆಯ ಸ್ಥಾನಂತರದಲ್ಲಾದ ಪಲ್ಲಟಗಳು, ಬ್ರಿಟಿಷರ ಆರ್ಥಿಕ ನೀತಿ, ತೆರಿಗೆ ನೀತಿ, ಮತಾಂತರದ ಪ್ರಶ್ನೆ ಇವೆಲ್ಲವನ್ನು ಕಾರಣಗಳೆಂದು ಗುರುತಿಸುತ್ತಾರೆ. ಆದರೆ ಈ ತತ್‌ಕ್ಷಣದ ಕಾರಣಗಳಿಂದಲೇ ರೈತ ಹೋರಾಟವು ಆರಂಭವಾಯಿತಾದರೂ, ಬೇರೆ ಬೇರೆ ಕಾಲಘಟ್ಟಗಳಲ್ಲಿ ಘಟಿಸಿದ ಬೆಳವಣಿಗೆಗಳು ಸೇರಿ ಅಂತಿಮವಾಗಿ ಸ್ಫೋಟಿಸಿತು ಎಂಬ ಲೇಖಕರ ನಿಲುವು ಸರಿಯಾಗಿದೆ. ಹೋರಾಟಗಾರರು ಶೋಧಿಸಿಕೊಂಡ ಹೊಸ ತಂತ್ರಗಳು, ಹೋರಾಟದ ವಿಧಾನ, ಹೋರಾಟದ ಭೌಗೋಳಿಕ ವ್ಯಾಪ್ತಿ ಎಲ್ಲವನ್ನು ಚರ್ಚಿಸಲಾಗಿದೆ. ಈ ಹೋರಾಟವು ಜನರ ಬಾಯಲ್ಲಿ 'ಕಲ್ಯಾಣಪ್ಪನ ಕಾಟಕಾಯಿ' ಎಂದೇ ಪ್ರಸಿದ್ಧವಾಗಿದೆ. ಇದು ವಸಾಹತುಕಾರರು ಮೂಡಿಸಿದ ಅಭಿಪ್ರಾಯ. ಕಲ್ಯಾಣಪ್ಪನ ದರೋಡೆ, ಲೂಟಿ ಎಂಬ ಅರ್ಥವುಳ್ಳ ಈ ಅಭಿಪ್ರಾಯವನ್ನು ಕೆಲವರು ಒಪ್ಪಿ ಈ ಹೋರಾಟದ ಮಹತ್ವವನ್ನು ಕುಗ್ಗಿಸಿದ್ದಾರೆ. ಇಂತಹ ಅಭಿಪ್ರಾಯಗಳ ಕುರಿತು ಇರಬೇಕಾದ ಎಚ್ಚರವನ್ನು ಕೃತಿ ಸೂಚಿಸುತ್ತದೆ.

ಇದು ಅರೆಭಾಷೆ ಹೋರಾಟವಲ್ಲ. ಎಲ್ಲ ಸಮುದಾಯಗಳ ಪಾಲ್ಗೊಳ್ಳುವಿಕೆಯಿಂದ ರೂಪಗೊಂಡ ಹೋರಾಟವಿದು ಎಂದು ಲೇಖಕರು ಗುರುತಿಸುತ್ತಾರೆ. ಹಾಗೆ ಭಾಗವಹಿಸಿದ ಕೆಲವರನ್ನು ಕೃತಿ ಉಲ್ಲೇಖಿಸುತ್ತದೆ. ಆದರೆ ಗೌಡರನ್ನು ಹೊರತುಪಡಿಸಿ ಉಳಿದ ಸಮುದಾಯಗಳ ಪಾತ್ರವೇನು ಎಂಬುದನ್ನು ಖಚಿತವಾಗಿ ಗುರುತಿಸುವಲ್ಲಿ ಕೃತಿ ಸೋಲುತ್ತದೆ. ಹೀಗೆ ಕೆಲವು ಮಿತಿಗಳ ನಡುವೆಯು ಇದು ಸ್ಥಳೀಯ ಚರಿತ್ರೆಯ ಮಹತ್ವದ ದಾಖಲೆಯಾಗಿದೆ.

–ಸುಧಾಕರ ದೇವಾಡಿಗ

ಪು: ಮಾಧ್ಯಮ ಸಂಕಥನ ಲೇ: ಹೆಚ್. ಈಶ್ವರ ಪ್ರ: ವಿಕಾಸ ಪ್ರಕಾಶನ, ಬೆಂಗಳೂರು (೯೯೦೦೯೫೨೦೪) ಪು: ೧೧೨ ಬೆಲೆ: ರೂ. ೧೦೦/-

ಮಾಧ್ಯಮ ಲೋಕ ಕುರಿತ ಅಪರೂಪದ ಜಿಜ್ಞಾಸೆ



ಸಮಕಾಲೀನ ಮಾಧ್ಯಮ ಕ್ಷೇತ್ರದ ಬಗ್ಗೆ ಜಿಜ್ಞಾಸೆ ನಡೆಸುವ ಅಪರೂಪದ ಪುಸ್ತಕವಿದು. ಹೆಚ್.ಎಸ್.(ಹಾರೋಗದ್ದೆ ಶ್ರೀನಿವಾಸ) ಈಶ್ವರ ಅವರು ಈ ಕೃತಿಯಲ್ಲಿ ಮಾಧ್ಯಮ ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ಕುರಿತು ಜಿಜ್ಞಾಸೆ ನಡೆಸಿದ್ದಾರೆ. ಮೈಸೂರು–ಬೆಂಗಳೂರು ಮತ್ತು ಮಣಿಪಾಲ ವಿಶ್ವವಿದ್ಯಾಲಯಗಳಲ್ಲಿ ಮೂರುವರೆ ದಶಕಗಳ ಕಾಲ ಮನಃಶಾಸ್ತ್ರ ಮತ್ತು ಸಂವಹನ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ ಈಶ್ವರ ಅವರ ಈ ಪುಟ್ಟ ಪುಸ್ತಕದಲ್ಲಿ ಮೂರು ಉಪನ್ಯಾಸಗಳೂ ಸೇರಿದಂತೆ ಒಟ್ಟು ೧೧ ಬರೆಹಗಳಿವೆ. ಕೊನೆಯ ಮೂರು ಭಾಷಣಗಳು ಈ ಪುಸ್ತಕದಲ್ಲಿ 'ಅನುಬಂಧ'ಗಳಾಗಿ ಸೇರಿಕೊಂಡಿವೆ. ಅವುಗಳನ್ನು ಹೊರತು ಪಡಿಸಿದ ಉಳಿದ ಎಂಟು ಲೇಖನಗಳು 'ಹೊಸತು', 'ಹೊಸಮನುಷ್ಯ' 'ಸಂಯುಕ್ತ ಕರ್ನಾಟಕ' ಮತ್ತು 'ತರಂಗ' ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು.

ನೂರು ವರ್ಷಗಳ ಹಿಂದೆ ಪ್ರಕಟವಾಗಿದ್ದ ಅಪ್ಟನ್ ಸಿಂಕ್ಲೇರ್ (೧೮೭೮–೧೯೬೮)ನ 'ದಿ ಬ್ರಾಸ್ ಚೆಕ್' ಪುಸ್ತಕವನ್ನು ಪರಿಚಯಿಸುವ ಲೇಖನವು ಅಮೆರಿಕಾದಲ್ಲಿ ಮಾಧ್ಯಮವು ಉದ್ದಿಮೆದಾರರ ಹಿತಾಸಕ್ತಿ ರಕ್ಷಿಸುವ ಉದ್ದೇಶದ ಸುದ್ದಿ ಸೃಷ್ಟಿಸುವ ಹಾಗೂ ಪ್ರಚಾರ ಮಾಡಲು ಆರಂಭಿಸಿತು ಎನ್ನುವ ಮಾಹಿತಿ ನೀಡುತ್ತಲೇ ಇಂದಿನ ಮಾಧ್ಯಮ ಕ್ಷೇತ್ರವು ಎದುರಿಸುತ್ತಿರುವ ಬಿಕ್ಕಟ್ಟಿನ ಆರಂಭದ ಬೀಜಗಳನ್ನು ಗುರುತಿಸುತ್ತದೆ. 'ದಿ ಬ್ರಾಸ್ ಚೆಕ್' ನೂರು ತುಂಬಿದ ನೆಪದಲ್ಲಿ ಬರೆದ ಈ ಲೇಖನದಲ್ಲಿ ಪತ್ರಿಕೆಗಳ ಪ್ರಸಾರ ಸಂಖ್ಯೆ ಹೆಚ್ಚಿಸಲು ಭಾವೋದ್ರೇಕಗೊಳಿಸುವ ಸುದ್ದಿಗಳ ಪ್ರಕಟಣೆಗೆ ಕೈ ಹಾಕುವ ಮೂಲಕ ಸುದ್ದಿಯು ಮಾರಾಟದ ಸರಕಾಗಿಸಿದ್ದರಿಂದ ಸಾಮಾಜಿಕ ಜವಾಬ್ದಾರಿ ಮತ್ತು ವೃತ್ತಿಧರ್ಮದ ಮಾತುಗಳು ಅರ್ಥ ಕಳೆದುಕೊಂಡವು ಎಂಬ ವಿವರಣೆಯನ್ನು ಲೇಖಕರು ನೀಡುತ್ತಾರೆ.

'ಹುಸಿ ಪ್ರಜ್ಞೆಯನ್ನು ಹುಟ್ಟು ಹಾಕುವ ಮಾಧ್ಯಮ ವ್ಯವಸ್ಥೆ: ಮಾರ್ಕ್ಸ್ ಮಾಧ್ಯಮ ಸಿದ್ಧಾಂತ' ಲೇಖನವು ಈ ಪುಸ್ತಕದ ಅತ್ಯುತ್ತಮ ಬರೆಹ. ಮಾರ್ಕ್ಸ್‌ವಾದಿ ತಾತ್ವಿಕ ಅಂಶಗಳನ್ನು ಇಟ್ಟುಕೊಂಡು ಮಾಧ್ಯಮ ಕ್ಷೇತ್ರವನ್ನು ಮುಖಾಮುಖಿಯಾಗುವ ಈ ಬರೆಹದಲ್ಲಿ ಸೈದ್ಧಾಂತಿಕ ಸಂಗತಿಗಳನ್ನು ಸರಳವಾಗಿ, ನೇರವಾಗಿ ಹಾಗೂ ಅರ್ಥವಾಗುವ ಹಾಗೆ ದಾಖಲಿಸಿರುವುದು ವಿಶೇಷ. ಮಾರ್ಕ್ಸ್‌ನ ನಂತರದ ಚಿಂತಕ ವಿದ್ವಾಂಸರು ಮಾರ್ಕ್ಸ್‌ನ ಸೈದ್ಧಾಂತಿಕ ಅಂಶಗಳನ್ನು ಇಟ್ಟುಕೊಂಡು ಕಟ್ಟಿದ ಮಾಧ್ಯಮ ಸಂಕಥನವನ್ನ ಚರ್ಚಿಸುವ ಈ ಲೇಖನದಲ್ಲಿ ಮಾಧ್ಯಮವು ಬಂಡವಾಳ ಹೂಡಿದವರ ಹಿತಾಸಕ್ತಿ ಕಾಯುವ ಹಾಗೂ ಸಮಸಮಾಜದ ಪರಿಕಲ್ಪನೆಗೆ ಪ್ರತಿಕೂಲ ಸುದ್ದಿಗಳನ್ನು 'ಸಂಯೋಜಿತ ಪ್ರಚಾರ ಮಾದರಿ'ಯಲ್ಲಿ ಚಾಲ್ತಿಗೆ ತರುವ ಸಂಗತಿಗಳನ್ನು ಕುರಿತು ವಿವರಿಸುತ್ತದೆ.

'ಮಾಧ್ಯಮ ಸ್ವಾತಂತ್ರ್ಯ, ಜವಾಬ್ದಾರಿ ಮತ್ತು ವಸ್ತುನಿಷ್ಠತೆ ಎಂಬ ಮರೀಚಿಕೆಗಳು' ಹಾಗೂ 'ಮಾಧ್ಯಮಗಳ ಸಾಮಾಜಿಕ ಜವಾಬ್ದಾರಿ ಪರಿಕಲ್ಪನೆ ಮತ್ತು ಭಾರತೀಯ ಮಾಧ್ಯಮಗಳ ಕಾರ್ಯವೈಖರಿ' ಲೇಖನಗಳು ಒಂದೇ ಲೇಖನವನ್ನು ಎರಡು ಬಾರಿ ಬರೆದಂತಿವೆ. ಈ ಎರಡೂ ಬರೆಹಗಳಲ್ಲಿ ಮಾತ್ರವಲ್ಲದೆ ಈ ಪುಸ್ತಕದ ಬಹುತೇಕ ಕಡೆಗಳಲ್ಲಿ ವಿಷಯ ಮತ್ತು ಚರ್ಚೆಯ ಪುನರಾವೃತ್ತಿ ಕಾಣಿಸುತ್ತದೆ. ಬಿಡಿಬಿಡಿಯಾದ ಲೇಖನ ಓದುವಾಗ–ಓದಿದಾಗ ಈ ರಿಪಿಟೇಶನ್ ಅಷ್ಟೇನು 'ಮಹತ್ವ'ದ್ದಾಗಿ ಕಾಣಿಸುವುದಿಲ್ಲ. ಆದರೆ, ಪುಸ್ತಕ ರೂಪದಲ್ಲಿ ಪ್ರಕಟವಾಗುವಾಗ ಒಂದೇ ಬರೆಹ ಮತ್ತೊಮ್ಮೆ ಓದಿದ ಅನುಭವವಾಗುತ್ತದೆ. ನಾನು ತಪ್ಪಾಗಿ ಮತ್ತೊಮ್ಮೆ ಅದೇ ಲೇಖನ ಓದುತ್ತಿದ್ದೇನೆಯೇ ಎಂದು ಗೊಂದಲವಾಗುಷ್ಟರ ಮಟ್ಟಿಗೆ ಪುನರಾವರ್ತನೆ ಇವೆ. ಬಿಡಿಬಿಡಿಯಾಗಿ ಪ್ರಕಟವಾಗಿದ್ದ ಲೇಖನಗಳನ್ನು ಸಂಕಲಿಸುವಾಗ ಈ ರೀತಿಯ ಮಿತಿಗಳನ್ನು ಕಡಿಮೆ ಮಾಡಿದ್ದರೆ ಈ ಪುಸ್ತಕದ ಸೊಬಗು–ಸೊಗಸು ಮತ್ತಷ್ಟು ಹೆಚ್ಚುತ್ತಿತ್ತು. ಮಾಧ್ಯಮದ ಇಂದಿನ ಸೋಲು–ಸವಾಲನ್ನು ಕಟ್ಟಿಕೊಡುವ ಈ ಪುಸ್ತಕದಲ್ಲಿ 'ನಾಳೆ'ಯ ಕುರಿತ ಭರವಸೆಯ ಸೂಚನೆಗಳಿಲ್ಲ.

ಮುದ್ರಣ ಮತ್ತು ಟೆಲಿವಿಷನ್ ಮಾಧ್ಯಮಗಳು ಎದುರಿಸುತ್ತಿರುವ ಬಿಕ್ಕಟ್ಟು ಹಾಗೂ ಅವುಗಳ ಸೈದ್ಧಾಂತಿಕ ನೆಲೆಗಳನ್ನು ಸೊಗಸಾಗಿ ಕಟ್ಟಿಕೊಡುವ ಅಪರೂಪದ ಪುಸ್ತಕವಿದು. ಕನ್ನಡದಲ್ಲಿ ಮಾಧ್ಯಮಲೋಕದ ಜಿಜ್ಞಾಸೆ ನಡೆಸುವ ಇಂತಹ ಪುಸ್ತಕಗಳು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಇದು ಕೇವಲ ಮಾಧ್ಯಮ ಕ್ಷೇತ್ರದಲ್ಲಿ ಇರುವವರು ಮಾತ್ರವಲ್ಲದೆ 'ಆರೋಗ್ಯಕರ ಸಮಾಜ'ದಲ್ಲಿ ಆಸಕ್ತರಾಗಿರುವ ಎಲ್ಲರೂ ಓದಬೇಕಾದ ಪುಸ್ತಕ.


–ದೇವು ಪತ್ತಾರ

'ಹೊಸ ಮನುಷ್ಯ'
ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



~ರವಿ ಸನಿತೋಟ
ಮತ್ತು ಕುಟುಂಬ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



-ಕೆ. ಪುಟ್ಟಸ್ವಾಮಿ
ಮತ್ತು ಕುಟುಂಬ
ಬೆಂಗಳೂರು

ತಿಂಗಳ ಕೊನೆಯ ಸಾಲುಗಳು



ಮೌನವೊಂದೇ ದೇವರ ಭಾಷೆ
ಮಿಕ್ಕಿದ್ದೆಲ್ಲ ಅದರ ಕಳಪೆ ತರ್ಜುಮೆ

-ಮೌಲಾನಾ ಜಲಾಲುದ್ದೀನ್ ರೂಮಿ

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)